ಉನ್ನತ ಶಿಕ್ಷಣದಲ್ಲಿ ಕನ್ನಡ : ಒಂದು ಅಧ್ಯಯನ

(ಸ್ನಾತಕೋತ್ತರ ಪದವಿಧರರನ್ನು ಅನುಲಕ್ಷಿಸಿ)

ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕಿ

ವರಲಕ್ಷ್ಮಿ ಹೆಚ್.

ಮಾರ್ಗದರ್ಶಕರು

ಡಾ. ಮಾಧವ ಪೆರಾಜೆ

ಪ್ರವಾಚಕರು

ಭಾಷಾ ವಿಜ್ಞಾನಗಳ ನಿಕಾಯ

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಉನ್ನತ ಶಿಕ್ಷಣದಲ್ಲಿ ಕನ್ನಡ : ಒಂದು ಅಧ್ಯಯನ

(ಸ್ನಾತಕೋತ್ತರ ಪದವಿಧರರನ್ನು ಅನುಲಕ್ಷಿಸಿ)

ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕಿ

ವರಲಕ್ಷ್ಮಿ ಹೆಚ್.

ಮಾರ್ಗದರ್ಶಕರು

ಡಾ. ಮಾಧವ ಪೆರಾಜೆ

ಪ್ರವಾಚಕರು

ಭಾಷಾ ವಿಜ್ಞಾನಗಳ ನಿಕಾಯ

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ದೃಢೀಕರಣ ಪತ್ರ

"ಉನ್ನತ ಶಿಕ್ಷಣದಲ್ಲಿ ಕನ್ನಡ : ಒಂದು ಅಧ್ಯಯನ" (ಸ್ನಾತಕೋತ್ತರ ಪದವಿಧರರನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಕುಮಾರಿ ವರಲಕ್ಷ್ಮಿ ಹೆಚ್. ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 17/10/2008.
ಸ್ಥಳ : ವಿದ್ಯಾರಣ್ಯ

17/10/08

(ಡಾ. ಮಾಧವ ಪೆರಾಜೆ)
ಮಾರ್ಗದರ್ಶಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಪ್ರಮಾಣ ಪತ್ರ

"ಉನ್ನತ ಶಿಕ್ಷಣದಲ್ಲಿ ಕನ್ನಡ : ಒಂದು ಅಧ್ಯಯನ" (ಸ್ನಾತಕೋತ್ತರ ಪದವಿಧರರನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ. ಮಾಧವ ಪೆರಾಜೆ ಅವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 15/10/2008.
ಸ್ಥಳ : ವಿದ್ಯಾರಣ್ಯ

(ವರಲಕ್ಷ್ಮಿ ಹೆಚ್.)
ಎಂ.ಫಿಲ್ ಸಂಶೋಧನ ವಿದ್ಯಾರ್ಥಿನಿ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವೈಧಾನಿಕತೆ

ಸಂಸ್ಕೃತ ಭಾಷೆಯ 'ಶಿಕ್ಷಾ' ಪದದಿಂದ 'ಶಿಕ್ಷಣ' ಎಂಬ ಪದಬಂದಿದೆ. 'ಶಿಕ್ಷಾ' ಎಂದರೇ ಕಲೆಯುವಿಕೆ ಅಥವಾ ಬೋಧನೆಯೆಂದಾಗುವುದು. ಇದಕ್ಕೆ ಸಂವಾದಿಯಾಗಿ ವಿದ್ಯಾ ಪದದ ಅರ್ಥ ಜ್ಞಾನದ ಸಮೂಹ, ತಿಳುವಳಿಕೆಯ ಸಮೂಹ ಎಂದಾಗುತ್ತದೆ. ಇಂಗ್ಲೀಷ್‌ನ 'Education' (ಎಜ್ಯುಕೇಷನ್) ಎಂಬ ಪದವು ಶಿಕ್ಷಣ ಪದದೊಂದಿಗೆ ಸಮಾನರ್ಥದಲ್ಲಿ ಬಳಕೆಯಾಗಿದೆ. 'Education' ಎಂಬ ಪದವು ಲ್ಯಾಟೀನ್ ಭಾಷೆಯ ಎಜ್ಯುಕೇರ್(Educare), ಎಜುಸೀಸ್ (Educere), ಎಜುಕೇಟಮ್‌ಗಳಿಂದ ಉತ್ಪತ್ತಿಯಾಗಿರುವುದಾಗಿ ಭಾಷಾತಜ್ಞರು ತಿಳಿಸುತ್ತಾರೆ. Educare ಎಂದರೆ To bring up ಬೆಳೆಸು ಸಂಪೋಷಿಸು Educere ಎಂದರೆ To drawout. to load out ಹೊರಗೆಳೆ, ಮಾರ್ಗದರ್ಶನ ಮಾಡು, Educatum ಎಂದರೆ E-out of ಹೊರಗೆ Duco to lead forth ದಾರಿ ತೋರಿಸುತ್ತಾ ಮುನ್ನಡೆ ಎಂದಾಗುತ್ತದೆ. ಜ್ಞಾನವನ್ನು ಸಂಪಾದಿಸುವ, ಜ್ಞಾನವನ್ನು ಒದಗಿಸುವ ಪ್ರಕ್ರಿಯೆಗೆ ಅರಾಬಿಕ್‌ನಲ್ಲಿ ತಾಲಿಮ್ ಹಾಗೂ ಗ್ರೀಕ್ ಭಾಷೆಯಲ್ಲಿ Pedagogy ಎಂದು ಕರೆಯುತ್ತಾರೆ.

ಆಧುನಿಕ ಶಿಕ್ಷಣ ಪದ್ಧತಿಯು ಬ್ರಿಟಿಷ್ ವಸಾಹತು ಶಾಹಿಯ ಬಳುವಳಿ ಎಂದು ಗುರುತಿಸಿದ್ದಾರೆ. ಇದು ಸರ್ಕಾರದ ನೀತಿಯ ಒಂದು ಅಂಗವಾಗಿ ಉನ್ನತ ಶಿಕ್ಷಣ ಬೆಳೆದುಬಂದಿದೆ. ೧೯೫೧ ರಿಂದ ೧೯೭೫ರವರೆಗಿನ ಅವಧಿಯಲ್ಲಿ ಶಿಕ್ಷಣವು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸುಧಾರಣೆಯ ಸಾಧನೆ ಎಂಬ ನಂಬಿಕೆಯಿತ್ತು. ಜೆ.ಪಿ. ನಾಯಕ್ ಅವರು ಸ್ವಾತಂತ್ರೋತ್ತರ ಅವಧಿಯನ್ನು ಅಕ್ಷರಶಃ ಉನ್ನತ ಶಿಕ್ಷಣ ಯುಗವೆಂದು ಕರೆಯಬಹುದೆಂದು ಹೇಳಿದ್ದಾರೆ.

ಕರ್ನಾಟಕದಲ್ಲಿ ಕ್ರಿ.ಪೂ. ೪ನೇ ಶತಮಾನದಲ್ಲಿ ನಾಡಿನ ಬೇರೆ-ಬೇರೆ ಭಾಗಗಳಲ್ಲಿ ಜೈನ ಬಸದಿಗಳು ಆರಂಭವಾಗಿ ಮೋಕ್ಷಸಾಧನೆಗೆ ನಂಬಿಕೆ, ಭಕ್ತಿ, ಪೂಜೆ, ಪುನಸ್ಕಾರಗಳಂತೆ ಜ್ಞಾನವೂ ಅಗತ್ಯವೆಂದು ಉನ್ನತ ಶಿಕ್ಷಣಕ್ಕೆ ಮನ್ನಣೆ ನೀಡಿವೆ. ಕ್ರಿ.ಶ. ೩ನೇ ಶತಮಾನದಲ್ಲಿ ಚುಟುಕುಲದ ಶಿವಸ್ಕಂದ ನಾಗಶ್ರೀ ಬನವಾಸಿಯಲ್ಲಿ ಒಂದು ಬೌದ್ಧ ವಿಹಾರವನ್ನು ಸ್ಥಾಪಿಸಿದನೆಂದು ಅಲ್ಲಿಯ ಮಧುಕೇಶ್ವರ ದೇವಾಲಯದ ನಾಗಶಿಲೆಯ ಶಾಸನವೊಂದರಿಂದ ತಿಳಿದುಬರುತ್ತದೆ.[೧] ಈ ಆಧಾರಗಳ ಪ್ರಕಾರ ಇದು ಕರ್ನಾಟಕದಲ್ಲಿ ಮೊಟ್ಟಮೊದಲು ಆರಂಭವಾದ ಉನ್ನತ ಶಿಕ್ಷಣ ಸಂಸ್ಥೆ ಎಂದು ಕರೆಯಬಹುದು. ಮುಂದುವರೆದಂತೆ ೧೧ನೇ ಶತಮಾನದ ವೇಳೆಗೆ ಬೌದ್ಧವಿಹಾರಿಗಳ ಮಾದರಿ ಯಂತೆಯೇ ಹಿಂದೂ ಮಠಗಳು ಉನ್ನತ ಶಿಕ್ಷಣ ನೀಡಿರುವುದನ್ನು ನೋಡಬಹುದು. ಉದಾಹರಣೆಗೆ ಕೋಡಿಮಠ, ನಾಗಾಯಿಮಠ, ವೀರಶೈವಮಠಗಳು.[೨] ಶಿಕ್ಷಣದ ಸಂಸ್ಥೆಗಳಾಗಿ ಕೆಲಸ ಮಾಡಿದೆ. ಈ ಶತಮಾನದ ಅಂತ್ಯದ ವೇಳೆಗೆ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ದೇವಾಲಯದ ವಿದ್ಯಾಪೀಠಗಳು ಅನೇಕ ಸ್ಥಳಗಳಲ್ಲಿ ಸ್ಥಾಪನೆಯಾದವು. ಪ್ರಾರಂಭದಲ್ಲಿ ಬೋಧನೆಯ ವಿಷಯವಾಗಿ ಕೇವಲ ಸಂಸ್ಕೃತಕ್ಕೆ ಮಾತ್ರ ಮನ್ನಣೆ ನೀಡಲಾಗಿತ್ತು. ಆದರೆ ಮುಂದೆ ಕನ್ನಡವೂ ಸಹ ಇಲ್ಲಿ ಕಲಿಕೆ ವಿಷಯವಾಯಿತು ಎಂದು ತಿಳಿದುಬರುತ್ತದೆ. ಈ ಕಾಲಕ್ಕಾಗಲೆ ಕನ್ನಡದಲ್ಲಿ ಸಾಹಿತ್ಯಿಕ, ಶಾಸ್ತ್ರೀಯ ಮತ್ತು ಇತರ ಗ್ರಂಥಗಳೂ ರಚನೆಯಾಗಿ ಅವುಗಳ ಅಧ್ಯಯನವೂ ನಡೆದಿತು.[೩] ಮುಂದೆ ೧೨ ಮತ್ತು ೧೩ನೇ ಶತಮಾನದಲ್ಲಿ ಮುಸ್ಲಿಂರು ಮದ್ರಸಗಳಲ್ಲಿ ಉನ್ನತ ಶಿಕ್ಷಣ ನೀಡುತ್ತಿದ್ದರು.[೪] ೧೫ನೇ ಶತಮಾನದಲ್ಲಿ ಕರ್ನಾಟಕ ರಾಜ್ಯದ ಮಂತ್ರಿಯಾಗಿದ್ದ ಮಹಮದ್ ಗವಾನ್ ಬೀದರನಲ್ಲಿ ವಿದ್ಯಾಲಯವೊಂದನ್ನು ನಿರ್ಮಿಸಿ ಧರ್ಮಶಾಸ್ತ್ರಗಳ ಜೊತೆಗೆ ಲೌಕಿಕ ವಿದ್ಯೆಗಳ ಬೋಧನೆಗೂ ವ್ಯವಸ್ಥೆಗೊಳಿಸಿದನೆಂದು ನೋಡಬಹುದು.

ಶಿಕ್ಷಣದ ಉದ್ದೇಶ ಜೀವನವನ್ನು ಅರ್ಥಮಾಡಿಕೊಳ್ಳುವುದು ಜ್ಞಾನ ಮತ್ತು ವಿವೇಕ ಎಂಬುದು ಜೀವನದ ಎಲ್ಲಾ ವಿಭಾಗಗಳನ್ನು ಇಡಿಯಾಗಿ ವ್ಯಾಪಿಸುವಂತವು ಭೌತಿಕ ದಾರ್ಶನಿಕತೆ ಇದರಲ್ಲಿ ಅಡಕವಾಗಿದೆ. ವಿಮರ್ಶಾತ್ಮಕ ಮೂಲ ನೆಲೆ ಎಂದರೆ ಶಿಕ್ಷಣ. ಈ ಪ್ರಕ್ರಿಯೆಯ ಮುಖಾಂತರ ವಷ್ಟೇ ಪ್ರಪಂಚವೊಂದು ತೆರೆದು ಕೊಳ್ಳಲು ಶಕ್ಯವಿದೆ.

ರಾಷ್ಟ್ರಕ್ಕೆ ಶಿಕ್ಷಣವು ಮೂಲಭೂತ ತಳಹದಿ ಎಂದು ಕರೆಯಬಹುದು. ಅದರಂತೆಯೇ ಉನ್ನತ ಶಿಕ್ಷಣವು ದೇಶದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯನ್ನು ನಿರ್ಧರಿಸುತ್ತದೆ. ಸಾರ್ವತ್ರಿಕವಾದ ಪ್ರಾಥಮಿಕ ಶಿಕ್ಷಣ ಸಂಪೂರ್ಣ ಸಾಕ್ಷರತೆಗಳನ್ನು ಸಾಧಿಸಬೇಕಾದದ್ದು ದೇಶದ ಆದ್ಯ ಕರ್ತವ್ಯ. ಅದೇ ಸಮಯದಲ್ಲಿ ಉನ್ನತ ಶಿಕ್ಷಣದಲ್ಲಿ ಜಾಗತಿಕ ಮಟ್ಟವನ್ನು ಸಾಧಿಸುವ ಯತ್ನವನ್ನು

ಅಲ್ಲಗಳೆದು ಅದನ್ನು ಕಡೆಗಣಿಸಲು ಸಾಧ್ಯವಿಲ್ಲ. ಇದು ಅನೇಕ ಪ್ರತಿಭಾವಂತ ಸ್ತ್ರೀ-ಪುರುಷರನ್ನು ರೂಪಿಸಿದೆ ಹಾಗೂ ರೂಪಿಸುತ್ತಿದೆ.

೧೮೫೭ರ ಅವಧಿಯಲ್ಲಿ ಔಪಚಾರಿಕವಾಗಿ ಪ್ರಾರಂಭವಾದ ಕಲ್ಕತ್ತ, ಬಾಂಬೆ ಮತ್ತು ಮದ್ರಾಸು ವಿಶ್ವವಿದ್ಯಾಲಯಗಳು ಪಾಶ್ಚಿಮಾತ್ಯ ಶಿಕ್ಷಣ ಕ್ರಮವನ್ನು ಅನುಸರಿಸುತ್ತಾ ಬೆಳೆದವು. ವಸಾಹತು ಭಾರತದಲ್ಲಿ ಅನೇಕ ಸಮಿತಿಗಳು ಮತ್ತು ಆಯೋಗಗಳು ಈ ನಿಟ್ಟಿನಲ್ಲಿ ರಚನೆಗೊಂಡವು. ಆದರೆ ಈ ಆಯೋಗಗಳ ಶಿಫಾರಸ್ಸುಗಳು ಶಿಕ್ಷಣ ಕ್ಷೇತ್ರದಲ್ಲಿ ಕ್ರಮಬದ್ಧವಾಗಿ ಜಾರಿಗೆ ಬರಲಿಲ್ಲ. ಇದಕ್ಕೆ ಹಲವಾರು ಕಾರಣಗಳು ತಿಳಿದುಬರುತ್ತವೆ. ಮುಂದೆ ಭಾರತ ಸ್ವಾತಂತ್ರ್ಯ ಪಡೆದನಂತರ ಉನ್ನತ ಶಿಕ್ಷಣವನ್ನು ಪ್ರಗತಿಗೆ ತರಲು ಪುನರ್ ವಿಮರ್ಶೆ ಮತ್ತು ಸಲಹೆಗಳನ್ನು ಪರಾಮರ್ಶಿಸಲು ಮುಂದಾದರು. ಈ ಕಾರ್ಯ ವಿಧಾನದಲ್ಲಿ ಉನ್ನತ ಶಿಕ್ಷಣ ಸಮಿತಿ ಮತ್ತು ಆಯೋಗಗಳು ಕೆಲವು ಪ್ರಮುಖ ಶಿಫಾರಸ್ಸು ಹಾಗೂ ಸಲಹೆಗಳನ್ನು ನೀಡಿರುವುದನ್ನು ಕಾಣಬಹುದು.

ಅಧ್ಯಯನದ ವ್ಯಾಪ್ತಿ

ಕರ್ನಾಟಕ ಉನ್ನತ ಶಿಕ್ಷಣದಲ್ಲಿ ತನ್ನದೇ ಆದ ಮಹತ್ವ ಪಡೆದಿದೆ. ಇಲ್ಲಿಬರುವ ವಿಶ್ವವಿದ್ಯಾಲಯಗಳ ಸಂಖ್ಯೆ ಸುಮಾರು ಹತ್ತಕ್ಕೂ ಮೇಲ್ಪಟ್ಟಿರುತ್ತವೆ. ಈ ವಿಶ್ವವಿದ್ಯಾಲಯಗಳ ಮೂಲಕ ಹಲವಾರು ವಿದ್ಯಾರ್ಥಿಗಳು ಹೊರಬಂದಿರುವುದನ್ನು ಕಾಣಬಹುದು. ಇವುಗಳಲ್ಲಿ ಕೇವಲ ಎಂಟು ವಿಶ್ವವಿದ್ಯಾಲಯಗಳು ಕನ್ನಡ ಸಾಹಿತ್ಯ ವಿಷಯವನ್ನು ಹೊಂದಿದೆ. ಈ ಕನ್ನಡ ಸಾಹಿತ್ಯ ವನ್ನು ಬೋಧನ ವಿಷಯವಾಗಿ ಹೊಂದಿರುವ ಎಂಟು ವಿಶ್ವವಿದ್ಯಾಲಯಗಳು ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತವೆ. ಇದರ ಜೊತೆ ಮಹಾರಾಷ್ಟ್ರದ ಮುಂಬೈ ವಿಶ್ವವಿದ್ಯಾಲಯ ಹಾಗೂ ಕೇರಳ ಕಾಸಾರಗೂಡು ವಿಶ್ವವಿದ್ಯಾಲಯಗಳನ್ನು ಅಧ್ಯಯನದ ವ್ಯಾಪ್ತಿಗೆ ಬರುತ್ತವೆ. ಇದಲ್ಲದೇ ಹಂಪಿ ವಿಶ್ವವಿದ್ಯಾಲಯದ ದೂರಶಿಕ್ಷಣ ಕೇಂದ್ರವು ಸಹ ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತದೆ.

ಅಧ್ಯಯನ ವಿಧಾನ

ಈ ಅಧ್ಯಯನವು ಕ್ಷೇತ್ರಕಾರ್ಯ ಆಧಾರಿತ ಅಧ್ಯಯನವಾಗಿದೆ.

೧. ಕ್ಷೇತ್ರಕಾರ್ಯ ಸಂಶೋಧನ ವಿಧಾನಗಳಲ್ಲಿ ಪ್ರಾಥಮಿಕ ಸಂಶೋಧನಾ ವಿಧಾನ ಬಹಳ ಮುಖ್ಯವಾದದ್ದು. ಇಲ್ಲಿ ಮುಖ್ಯವಾಗಿ ಕ್ಷೇತ್ರಕಾರ್ಯ, ಸಂದರ್ಶನ, ಪ್ರಶ್ನಾವಳಿಗಳು ಪ್ರಾಥಮಿಕ ವಿಧಾನದಲ್ಲಿ ಬರುತ್ತದೆ. ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯಕ್ಕೆ ನೇರ ಭೇಟಿ ಮಾಡುವುದರ ಮೂಲಕ ವಿಷಯವನ್ನು ಸಂಗ್ರಹಿಸಲಾಗಿದೆ. ಇದು ವಿಷಯಗಳ ಅಧ್ಯಯನಕ್ಕೆ ಬಹಳ ಪೂರಕವಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಈ ಅಧ್ಯಯನವನ್ನು ಆರು ಅಧ್ಯಾಯಗಳಲ್ಲಿ ವಿಂಗಡಿಸಿಕೊಂಡಿದ್ದು ಪ್ರತಿಯೊಂದು ಅಧ್ಯಾಯದಲ್ಲಿ ಚರ್ಚಿಸುವ ವಿಷಯವನ್ನು ಕುರಿತಂತೆ ಆದರ ಸಂಕ್ಷಿಪ್ತ ಸ್ವರೂಪವನ್ನು ಇಲ್ಲಿ ವಿವರಿಸಲಾಗಿದೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವಿಧಾನ ಕುರಿತಾದ ವಿವರಣೆ ಇರುವುದನ್ನು ಕಾಣಬಹುದು.

ಅಧ್ಯಾಯ ಎರಡು ಉನ್ನತ ಶಿಕ್ಷಣವು ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯರಲ್ಲಿ ನಡೆದು ಬಂದ ವಿಧಾನವನ್ನು ಕುರಿತು ಚರ್ಚಿಸಲಾಗಿದೆ. ಇಲ್ಲಿಯ ಉನ್ನತ ಶಿಕ್ಷಣ ಪ್ರಾಚೀನ ಭಾರತದಲ್ಲಿ ಉನ್ನತ ಶಿಕ್ಷಣದ ಸ್ಥಾನಮಾನ ಹಾಗೂ ಪಾಶ್ಚಿಮಾತ್ಯ ದೇಶಗಳಲ್ಲಿ ಉನ್ನತ ಶಿಕ್ಷಣದ ಸ್ಥಾನಮಾನ ಕುರಿತು ಚರ್ಚಿಸಲಾಗಿದೆ. ಪ್ರಾರಂಭದ ಶಿಕ್ಷಣ ಯಾವ ಉದ್ದೇಶ ಹೊಂದಿತ್ತು ಇಂದು ಅದು ಯಾವ ರೂಪ ಪಡೆದಿದೆ ಎನ್ನುವುದು ಈ ಅಧ್ಯಾಯದಲ್ಲಿ ಕಾಣಬಹುದು.

ಅಧ್ಯಾಯ ಮೂರರಲ್ಲಿ ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ಎಂಟು ವಿಶ್ವವಿದ್ಯಾಲಯಗಳ ಚಾರೀತ್ರಿಕವಾಗಿ ಬೆಳೆದು ಬಂದಿರುವ ಬಗೆಯನ್ನು ತಿಳಿಸಲಾಗಿದೆ. ಈ ಅಧ್ಯಾಯದ ಉದ್ದೇಶ ಕನ್ನಡ ಸಾಹಿತ್ಯಕ್ಕಿರುವ ಇತಿಹಾಸವನ್ನು ನಾವು ಇಲ್ಲಿ ನೋಡಬಹುದು.

ಅಧ್ಯಾಯ ನಾಲ್ಕರಲ್ಲಿ ಪ್ರತಿಯೊಂದು ವಿಶ್ವವಿದ್ಯಾಲಯವು ಕನ್ನಡ ಸ್ನಾತಕೋತ್ತರ ಪ್ರಾರಂಭ ಮಾಡಲು ಅದರ ಉದ್ದೇಶವೇನಾಗಿತ್ತು ಪ್ರಾರಂಭದ ಕನ್ನಡ ಸಂಸ್ಕೃತಿ ಸಂಬಂಧ ಆನಂತರ ಇಂಗ್ಲಿಷ್, ಕನ್ನಡ ಸಂಬಂಧ ಮುಂಧೆ ಕನ್ನಡ ಕಂಪ್ಯೂಟರ್ ಸಂಬಂಧ ಬೆಳೆದು ಬಂದ ಬಗೆಯನ್ನು ವಿವರಿಸಲಾಗಿದೆ.

ಅಧ್ಯಾಯ ಐದರಲ್ಲಿ ಕರ್ನಾಟಕದ ವ್ಯಾಪ್ತಿಗೆ ಬರುವ ಎಂಟು ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಸ್ನಾತಕೋತ್ತರ ಪದವಿಧರರ ಅಂಕಿ ಸಂಖ್ಯೆಗಳನ್ನು ಪಡೆಯುವುದು ಇದರ ಸಹಾಯದಿಂದ ಪ್ರತಿವರ್ಷ ಕನ್ನಡ ಸ್ನಾತಕೋತ್ತರ ಪದವಿಧರರಾಗಿ ಶೇಕಡವಾರು ಎಷ್ಟು ವಿದ್ಯಾರ್ಥಿಗಳು ಹೊರಬರುತ್ತಿದ್ದು ಇವರಲ್ಲಿ ಪುರುಷರ ಸಂಖ್ಯೆ ಎಷ್ಟು ಮಹಿಳೆಯರ ಸಂಖ್ಯೆ ಎಷ್ಟು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಂಖ್ಯೆಗಳನ್ನು ಗೊತ್ತು ಮಾಡುವುದು ಈ ಅಧ್ಯಾಯದ ಉದ್ದೇಶವಾಗಿದೆ.

ಅಧ್ಯಾಯ ಆರು ಸಮಾರೋಪವಾಗಿದೆ.

ಅಧ್ಯಾಯ - ೨

ಉನ್ನತ ಶಿಕ್ಷಣದ ಇತಿಹಾಸ : ಪಾಶ್ಚಾತ್ಯ ಮತ್ತು ಪೌರ್ವಾತ್ಯ

ಪೀಠಿಕೆ

ಭಾರತದಲ್ಲಿ ಉನ್ನತ ಶಿಕ್ಷಣದ ಮೂಲವನ್ನು ಬ್ರಾಹ್ಮಣ ಸಂಹಿತೆ, ಅರಣ್ಯಕ ಮತ್ತು ಉಪನಿಷತ್ತುಗಳಲ್ಲಿ ಗುರುತಿಸಬಹುದು. ಬೇರೆ ಮಾತಿನಲ್ಲಿ ಹೇಳುವುದಾದರೆ ಆ ಕಾಲದಲ್ಲಿ ರೂಢಿಯಲ್ಲಿದ್ದ ಶಿಕ್ಷಣ ಪದ್ಧತಿಯು ಈ ಶಾಸ್ತ್ರ ಗ್ರಂಥಗಳು ಹೇಳಿದ ಶಿಕ್ಷಣ ಕ್ರಮವೇ ಆಗಿದೆ. ವೈದಿಕ ಸಾಹಿತ್ಯದ ಪ್ರಕಾರ ಶಿಕ್ಷಣದ ಮೂಲ ಉದ್ದೆಶವು ಜ್ಞಾನಾರ್ಜನೆಯಾಗಿತ್ತು. ಮಾನವನಲ್ಲಿ ಅಡಿಗಿಕೊಂಡಿರುವಂತಹ ಹಾಗೂ ಅತ್ಯಂತ ಮೌಲ್ಯವಾದ ಶಕ್ತಿಯನ್ನು ಉಪಯೋಗಿಸುವ ಏಕೈಕ ಮಾರ್ಗ ಶಿಕ್ಷಣವೆಂದೂ ಈ ಪರಂಪರೆಯ ನಂಬಿಕೆಯಾಗಿತ್ತು. ಈ ಕಾಲದಲ್ಲಿ ವಿದ್ಯಾಲಯಗಳು ಅರಣ್ಯಗಳಲ್ಲಿ ನಡೆಯುತ್ತಿದ್ದವು. ಇದರ ಉದ್ದೇಶ ಶಿಕ್ಷಣದ ಪ್ರಮುಖ ಸಾಧನೆಯಾದ ಏಕಾಗ್ರತೆಗೆ ಸಂಬಂಧಿಸಿದಾಗಿತ್ತು. ಶಿಕ್ಷಣವನ್ನು, ಶಿಕ್ಷಣದ ಅವಧಿಯನ್ನು ರೂಪಿಸುವ ನಿರ್ದೇಶಿಸುವ ಅಧಿಕಾರ 'ಗುರು'ವಿಗೆ ಮಾತ್ರವಿತ್ತು. ಈ ಯುಗದಲ್ಲಿ ಗುರುವಿನ ಮನೆಯೇ ಶಾಲೆಯಾಗಿತ್ತು. ವಿದ್ಯಾರ್ಥಿಯಾದವನು ಗುರುವನ್ನು ಸಂದರ್ಶಿಸಿ, ಆತನ ಶಿಷ್ಯತ್ವವನ್ನು ಪಡೆದುಕೊಂಡ ದಿನದಿಂದಲೇ ಶಿಕ್ಷಣ ಪ್ರಾರಂಭವಾಗುತ್ತಿತ್ತು. ಗುರುವು ಶಿಷ್ಯತ್ವವನ್ನು ನೀಡುವ ಪ್ರಧಾನ ಕಾರ್ಯವನ್ನು 'ಉಪನಯನ' ಎಂದು ಕರೆಯಲಾಗುತ್ತಿತ್ತು. ಶಿಕ್ಷಣದ ಕೊನೆಯ ಘಟ್ಟವನ್ನು ಮುಕ್ತಿ ಎಂದು ನಂಬಲಾಗುತ್ತಿತ್ತು. ಆಗಿನ ಕಾಲದಲ್ಲಿ ಈ ಗುರುವಿನ ಮುಖೇನ ಕಲಿಯುವ ಈ ವಿದ್ಯೆಯನ್ನು 'ಪರಾವಿದ್ಯೆ' ಎಂದು ಕರೆಯುತ್ತಿದ್ದರು. 'ಪರಾವಿದ್ಯೆ'ಯ ಬೇರೆ ಬೇರೆ ಹಂತಗಳನ್ನು 'ಶ್ರವಣ', 'ಮನನ' ಮತ್ತು ನಿದಿಧ್ಯಾಸನ ಎಂದು ಕರೆಯುತ್ತಾರೆ. ಇಲ್ಲಿ 'ಶ್ರವಣ' ಎಂಬುದು ಗುರುವು ಉಚ್ಚರಿಸಿದ ಶಬ್ದಗಳನ್ನು ಕೃತಿಗಳನ್ನು

ಗಮನವಿಟ್ಟು ಕೇಳುವುದು. ಗುರುವಿನಿಂದ ಪಡೆದ ಆ ಜ್ಞಾನವನ್ನು ಮೈಗೂಡಿಸಿಕೊಳ್ಳಲು ಹೇಳಿಕೊಟ್ಟ ಪಾಠವನ್ನು ಕುರಿತು ಆಲೋಚಿಸಿ, ಚಿಂತಿಸಿ, ಅರ್ಥಮಾಡಿಕೊಳ್ಳುವುದೆ 'ಮನನ' ಅರ್ಥಮಾಡಿಸಿಕೊಂಡ ನಂತರದ ಸಾಕ್ಷಾತ್ಕಾರದ ನೆಲೆಯನ್ನು 'ನಿಧಿದಾಸನ' ಎಂದು ಕರೆಯುತ್ತಿದ್ದರು. ಇಲ್ಲಿ ಜ್ಞಾನ ಎಂಬುದು ಗುರು ಶಿಷ್ಯರಿಗೆ ಮಾತ್ರ ಸೀಮಿತವಾಗಿರುತ್ತಿತ್ತು. ಈ ಕಾಲದಲ್ಲಿ ಆಶ್ರಮಗಳು ಪ್ರಾಥಮಿಕ ವಿದ್ಯಾ ಸಂಸ್ಥೆಗಳಾದರೆ, ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಸಂಸ್ಥೆಗಳನ್ನು 'ಪರಿಷತ್ತು'ಗಳೆಂದು ಕರೆಯುತ್ತಿದ್ದರು.

ಈ ಕಾಲಘಟ್ಟದ ಅತ್ಯಂತ ಪ್ರಖ್ಯಾತವಾಗಿರುವ ಪರಿಷತ್ತು 'ಪಾಂಚಾಲ ಪರಿಷತ್ತು'. ಈ ಪರಿಷತ್ತನ್ನು ಬೆಳೆಸಿದ ಕೀರ್ತಿ ಪಾಂಚಾಲದೇರಶದ ರಾಜರ್ಷಿ ಪ್ರಮಾಣದ ಜೈವಲಿಯದು. ಈತನು ಪಾಂಚಾಲ ಪರಿಷತ್ತನ್ನು ಪ್ರೋತ್ಸಾಹಿಸುವುದರ ಜೊತೆಗೆ ತಾನೂ ಪರಿಷತ್ತಿನ ಸಭೆಗಳಲ್ಲಿ ಭಾಗವಹಿಸುತ್ತಿದ್ದ."

ಹೀಗೆ ಉನ್ನತ ಶಿಕ್ಷಣಕ್ಕೆಂದೇ ಸ್ಥಾಪಿತವಾದ 'ವಿದ್ವತ್ ಪರಿಷತ್ತು'ಗಳಲ್ಲಿ ಜಂಗಮ ವಿದ್ವಾಂಸರ ಕೂಟಗಳ ಜೊತೆಗೆ ರಾಜರುಗಳ ಆಸ್ಥಾನದಲ್ಲಿ ಅನೇಕ ಗೋಷ್ಠಿಗಳು ನಡೆಯುತ್ತಿದ್ದವು. ಬೃಹದಾರಣ್ಯ ಕೋಪ ನಿಷತ್ತನಲ್ಲಿ ಇಂತಹ ಗೋಷ್ಠಿಗೆ ಸಂಬಂಧಿಸಿದ ಮಾಹಿತಿಯನ್ನು ನೋಡಬಹುದು. ಅಲ್ಲದೆ ವಿದ್ವಜ್ಜನ ಸಮೃದ್ಧಿಗೆ ಹೆಸರಾಗಿದ್ದ' ಕುರು ಪಾಂಚಾಲ ದೇಶದ ರಾಜನಾದ ಜನಕನು 'ತಾತ್ವೀಕ ಸಮ್ಮೇಳನ'ವನ್ನು ನಡೆಸಿದ್ದ. ಇದನ್ನು ವಿಶ್ವದಲ್ಲಿಯೇ ಮೊದಲ ಸಮ್ಮೇಳನವೆಂದು ಕರೆಯಾಲಾಗಿದೆ. ಈ ಸಮ್ಮೇಳನದಲ್ಲಿ ಉದ್ದಾಲಕ, ಆರುಣಿ, ಅಶ್ವಲ, ಆರ್ತಭಾಗ, ಭುಜ್ಯ, ಉಶಸ್ತ, ಕಹೋಲ, ವಿದಗಶೌಕಲ್ಯ ಮತ್ತು ಗಾರ್ಗಿವಾಚಕವೀ ಮುಂತಾದ ತಾತ್ತ್ವಿಕರು ಭಾಗವಹಿಸಿದ್ದರು. ಹೀಗೆ ವೈದಿಕಯುಗದಲ್ಲಿ ಸಂಹಿತೆ, ಬ್ರಾಹ್ಮಣ, ಅರಣ್ಯಕ ಮತ್ತು ಉಪನಿಷತ್ತುಗಳಿಂದ ಪ್ರಾರಂಭವಾದ ಶಿಕ್ಷಣ ಆರ್ಯ ಸಮಾಜದ ಕಾಲದಲ್ಲಿ ಸೂತ್ರಪಾಯವಾಗಿ, ಛಂದೋಬದ್ಧವಾಗಿ, ಸ್ಮೃತಿಗಳಲ್ಲಿ ಇದು ವಿಸ್ತಾರಗೊಂಡಿತು. ಗುರುವೇ ಸಂಪೂರ್ಣ ಶಿಕ್ಷಣ ವ್ಯವಸ್ಥೆಯ ಕೇಂದ್ರಬಿಂದು"ವಾಗಿದ್ದನು. ಮನು ಮತ್ತು ಯಾಜ್ಞದಲ್ಲಿರ ತಂದೆಯೇ ಮೊದಲು ಗುರುವಾಗಿದ್ದನು. ಸ್ಮೃತಿಗಳ ಕಾಲದಲ್ಲಿ ಗುರುಗಳ ಸ್ಥಾನಮಾನದಲ್ಲಿ ಎರಡು ಬಗೆಗಳಿದ್ದವು. ಒಂದು ಆಚಾರ್ಯ ಎರಡು ಉಪಾಧ್ಯಾಯ ಎಂಬುದಾಗಿತ್ತು. ಆಚಾರ್ಯನಿಗೆ ಸಾಮಾಜಿಕವಾಗಿ ಉನ್ನತವಾದ ಸ್ಥಾನಮಾನವಿತ್ತು. ಉಪಾಧ್ಯಾಯನು ವೇದಾಂಗಗಳನ್ನು ಮಾತ್ರ ಹೇಳಿಕೊಡುತ್ತಿದ್ದನು. ಆನಂತರ ಸಂಪೂರ್ಣ ಶಿಕ್ಷಣ ನೀಡುವುದು ಆಚಾರ್ಯನ ಕರ್ತವ್ಯವಾಗಿತ್ತು. ಗುಪ್ತಯುಗದ ನಂತರದ ಕಾಲಘಟ್ಟದಲ್ಲಿಯಾ ಉನ್ನತ ಶಿಕ್ಷಣದಲ್ಲಿ ಪ್ರಾಚೀನ ಪದ್ಧತಿಯನ್ನೇ ಅನುಸರಿಸಲಾಗುತ್ತಿತ್ತು. ಆಗ ಉನ್ನತ ಶಿಕ್ಷಣವನ್ನು ಪಡೆಯಲು ವಿದ್ಯಾರ್ಥಿಗಳು 'ನಾಲಂದಾ'

ವಿಶ್ವವಿದ್ಯಾಲಯ ಮತ್ತು 'ವಲಭಿ' ವಿಶ್ವವಿದ್ಯಾಲಯಗಳನ್ನು ಆಶ್ರಯಸುತ್ತಿದ್ದರು. ಜೊತೆಗೆ ಭಾರತದ ಪೂರ್ವದಲ್ಲಿದ್ದ 'ಪಾಲ' ರಾಜರುಗಳ ಆಳ್ವಿಕೆಯಲ್ಲಿ ವಿಹಾರಗಳಲ್ಲಿದ್ದವು. ಅವುಗಳು ವಿಕ್ರಮಶೀಲ ಸೋಮಪುರಿ, ಜಗದ್ದಲ ಮತ್ತು ಉದ್ದಂಡಪುರದ ವಿದ್ಯಾಲಯಗಳು ಇವುಗಳು ಕೂಡ ಮಹಾನ್ ಜ್ಞಾನ ಕೇಂದ್ರಗಳೆಂದು ಹೆಸರು ಪಡೆದಿದ್ದವು. ಈ ಬೌದ್ಧ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಪಡೆದು ಪ್ರಸಿದ್ಧ ಪಡೆದವರಲ್ಲಿ ದೀಪಂಕರ ಶ್ರೀಜ್ಞಾನನದು ಉಲ್ಲೇಖನಿಯ ಹೆಸರು. ಇವನು ತನ್ನ ಜೀವನದ ಇಳಿಗಾಲದಲ್ಲಿ ಟಿಬೆಟ್ಟಿನಲ್ಲಿ ಬೌದ್ಧಧರ್ಮದ ಹೊಸಶಾಲೆಯೊಂದನ್ನು ಸಂಸ್ಥಾಪಿಸಿದನಂತೆ. ಇವನಷ್ಟೇ ಪ್ರಖ್ಯಾತವಾದ ಮತ್ತೊಬ್ಬ ವ್ಯಕ್ತಿ 'ವಿದ್ಯಾಕರ' ಈತನು ಸಂಸ್ಕೃತಿದಲ್ಲಿ ಸಂಕಲನ ಗ್ರಂಥವೊಂದನ್ನು ಸಿದ್ಧಪಡಿಸಿದ್ದಾನೆ.[೬]

ಹಾಗೆಯೇ ಹನ್ನೊಂದನೆಯ ಶತಮಾನದಲ್ಲಿ ಕಾಶ್ಮಿರದ ವಿದ್ಯಾಕೇಂದ್ರಗಳು ಹೆಚ್ಚು ಪ್ರಖ್ಯಾತವಾಗಿದ್ದವು. ಇಲ್ಲಿಗೆ ಗೌಡದೇಶದ (ಪಶ್ಚಮಬಂಗಾಳ)ದಿಂದ ಉನ್ನತ ಶಿಕ್ಷಣ ಪಡೆಯಲು ವಿದ್ಯಾರ್ಥಿಗಳು ಬರುತ್ತಿದ್ದರು. ಇಲ್ಲಿನ ರಾಜರು ಉನ್ನತ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹ ನೀಡಿರುವುದಾಗಿ ಈ ಕಾಲದ ಶಾಸನಗಳಿಂದ ತಿಳಿದು ಬರುತ್ತದೆ. ಇಲ್ಲಿನ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯ ಹಾಗೂ ಪಠ್ಯಕ್ರಮದ ಬಗ್ಗೆ ಭಾರತಕ್ಕೆ ಬೇಟಿನೀಡಿದ್ದ ಹ್ಯೂಯೆನ್ ತ್ಸಾಂಗ್ ಹೇಳಿದ್ದಾನೆ. ಆತನ ಪ್ರಕಾರ ಇಲ್ಲಿ 'ಸಿದ್ಧರಚನೆ' ಎಂಬ ಬಾಲ ಬೋಧನೆ ಮುಗಿದ ಮೇಲೆ ವ್ಯಾಕರಣಶಾಸ್ತ್ರ, ಲಲಿತ ಕಲಾಶಾಸ್ತ್ರ, ತರ್ಕಶಾಸ್ತ್ರ ಮತ್ತು ಆಧ್ಯಾತ್ಮಶಾಸ್ತ್ರಗಳ ವಿಷಯಗಳಲ್ಲಿ ಉನ್ನತ ಶಿಕ್ಷಣ ನೀಡುತ್ತಿದ್ದರು. ಅದೇ ಕಾಲಘಟ್ಟದ ಇತ್ಸಿಂಗ್‌ನ ಹೇಳಿಕೆಯ ಪ್ರಕಾರ ಸೂತ್ರಗಳು, ಮತ್ತು ಶಾಸ್ತ್ರಗಳ ಜೊತೆಗೆ ಪಾಣಿನಿಯ ವ್ಯಾಕರಣ ಅದರ ಭಾಷ್ಯ, ತರ್ಕ ಶಾಸ್ತ್ರ ಮತ್ತು ಆಧ್ಯಾತ್ಮಕಶಾಸ್ತ್ರಗಳ ಅಧ್ಯಯನವನ್ನೂ ಬೋಧಿಸಲಾಗುತ್ತಿತ್ತು. ನಾಲಂದಾ ವಿಶ್ವವಿದ್ಯಾಲಯದಲ್ಲಿ ಹದಿನೆಂಟು ಬೌದ್ಧ ಸಂಪ್ರದಾಯಗಳು ಮತ್ತು ವೇದ, ತರ್ಕ, ವ್ಯಾಕರಣ, ವೈದ್ಯ, ಅರ್ಥವಿದ್ಯಾ, ಸಾಂಖ್ಯಾ ಇತ್ಯಾದಿ ವಿಷಯಗಳನ್ನು ಉನ್ನತ ಶಿಕ್ಷಣದಲ್ಲಿ ಬೋಧನೆ ಮಾಡಲಾಗುತ್ತಿತ್ತು. ಎಂದು ಹ್ಯೂಯೆನ್‌ತ್ಸಾಂಗ್ ಹೇಳಿದ್ದಾನೆ. ಈ ಪ್ರಾಚೀನ ಶಿಕ್ಷಣದ ಮತ್ತೊಂದು ಮುಖ್ಯಗುರಿ ಎಂದರೆ ಗುರುಗಳ ಆದರ್ಶದಲ್ಲಿ ಬ್ರಹ್ಮಚರ್ಯೆಯ ನಿಷ್ಠಾಜೀವನ ನಡೆಸುವುದಾಗಿತ್ತು.[೭]

ಪಾಶ್ಚಾತ್ಯರಲ್ಲಿ ಉನ್ನತ ಶಿಕ್ಷಣ

ಭಾರತದ ಉನ್ನತ ಶಿಕ್ಷಣಕ್ಕೆ ದೀರ್ಘಕಾಲದ ಇತಿಹಾಸವಿದೆ. ಬ್ರಿಟಿಶ್‌ರ ದಾಳಿಯ ನಂತರ ಭಾರತದ ಶಿಕ್ಷಣ ವ್ಯವಸ್ಥೆ ಪಾಶ್ಚಿಮಾತ್ಯರ ಮಾದರಿಯನ್ನೇ ಅನುಸರಿಸುತು. ಅವರ ಪ್ರಕಾರ

ಪ್ರೌಡಶಿಕ್ಷಣದ ನಂತರ ನೀಡುವ ವಿದ್ಯಾಭ್ಯಾಸ ಮತ್ತು ಅದರ ಕೊನೆಯಲ್ಲಿ ನೀಡುವ ಯಾವುದೇ ಪದವಿ, ಡಿಪ್ಲೋಮಾ, ಸರ್ಟಿಫಿಕೆಟ್ ಕೋರ್ಸುಗಳನ್ನು ಉನ್ನತ ಶಿಕ್ಷಣ ಎಂದು ಕರೆಯಲಾಗುತ್ತಾರೆ. ವಿಶ್ವವಿದ್ಯಾಲಯ, ಕಾಲೇಜುಗಳು ಮಾತ್ರವಲ್ಲದೆ ಬೇರೆ ಬೇರೆ ಜ್ಞಾನಶಾಖೆಗಳಾದ ಕಾನೂನು, ನೀತಿಶಾಸ್ತ್ರ, ವೈದ್ಯಕೀಯ, ವಾಣಿಜ್ಯ, ಸಂಗೀತ ಮತ್ತು ಕಲೆಗಳಿಗೆ ಸಂಬಂಧಿಸಿದ ಇತರ ಔದ್ಯೋಗಿಕ ಸಂಸ್ಥೆಗಳನ್ನು ಉನ್ನತ ಶಿಕ್ಷಣದ ಸಂಸ್ಥೆಗಳಾಗಿ ಪರಿಗಣಿಸಲಾಗಿದೆ. ಮೂಲತಃ ಈ ಮಾದರಿಯ ಶಿಕ್ಷಣ ಕ್ರಮವನ್ನು ಯೂರೋಪಿನಲ್ಲಿ ಕಾಣಬಹುದು. ಅದರಲ್ಲಿಯೂ ಮಧ್ಯಯುಗೀನ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಸಂಬಂಧಸಿದಾಗಿದೆ. ಆಧುನಿಕ ಕಾಲದಲ್ಲಿ ಜಗತ್ತಿನಾದ್ಯಂತ ಇರುವ ಶಿಕ್ಷಣ ಕ್ರಮವು ಬಹುಮಟ್ಟಿಗೆ ಪ್ರಭಾವಶಾಲಿ ರಾಷ್ಟ್ರಗಳಾದ ಫ್ರಾನ್ಸ್, ಜರ್ಮನಿ, ಬ್ರಿಟನ್, ಅಮೇರಿಕ ಮೊದಲಾದ ರಾಷ್ಟ್ರಗಳು ನಿರ್ದೇಶಿಸಿದ ಮಾದರಿಗಳ ಅನುಸರಣೆಯೇ ಆಗಿದೆ.

ಫ್ರಾನ್ಸ್ ಮತ್ತು ಜರ್ಮನಿ ರಾಷ್ಟ್ರಗಳ ಉನ್ನತ ಶಿಕ್ಷಣ ಕ್ರಮವು ಬಹುಮಟ್ಟಿಗೆ ರಾಜ್ಯ ಸರ್ಕಾರಗಳ ಅಧಿನದಲ್ಲಿರುತ್ತದೆ. ಈ ಎರಡು ದೇಶಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಇರುವ ಪ್ರವೇಶ ಕ್ರಮವು ರಾಜ್ಯ ಸರ್ಕಾರಗಳ ನಿಯಮಕ್ಕೆ ಅನುಗುಣವಾಗಿರುತ್ತವೆ. ಫ್ರಾನ್ಸ್‌ನಲ್ಲಿ ಪ್ರೌಢ ಶಿಕ್ಷಣದ ಕೊನೆಯಲ್ಲಿ 'ಬ್ಯಾಚ್ಯುರೆಟ್' ಎನ್ನುವ ಪರೀಕ್ಷೆಯನ್ನು ನಡೆಸಲಾಗುತ್ತದೆ. ಈ ಪರೀಕ್ಷೆಯಲ್ಲಿ ತೇರ್ಗಡೆಹೊಂದುವ ಎಲ್ಲಾ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣವು ಉಚಿತವಾಗಿ ನೀಡಲಾಗುತ್ತದೆ. ವಿಶ್ವವಿದ್ಯಾಲಯವೊಂದರಲ್ಲಿ ಒಂದು ಪ್ರಾರಂಭಿಕ ಶಿಕ್ಷಣದ ನಂತರ ಅದಕ್ಕಿಂತ ಕಠಿಣವಾದ ಪರೀಕ್ಷೆಯಲ್ಲಿ ಅವರು ತೇರ್ಗಡೆಹೊಂದಿದರೆ ಮಾತ್ರ ವಿಶ್ವವಿದ್ಯಾಲಯದಲ್ಲಿ ಮೂರು ಅಥವಾ ನಾಲ್ಕು ವರ್ಷ ಅರ್ಹತೆಯನ್ನು ಪಡೆಯುತ್ತಾರೆ. ಫ್ರಾನ್ಸ್ ಈ ಮಾದರಿಯನ್ನು 'ಲೈಸನ್ಸ್' ಎಂದು ಕರೆದಿದೆ. ಹೀಗಿದ್ದರೂ ಈ ಎರಡು ದೇಶಗಳ ಉನ್ನತ ಶಿಕ್ಷಣದಲ್ಲಿ ಕೆಲವು ಮೂಲಭೂತ ವ್ಯಾತ್ಯಾಸಗಳನ್ನು ಗುರುತಿಸಬಹುದು. ಫ್ರಾನ್ಸನಲ್ಲಿ 'ಆಕಾಡ್ಯಮಿಸ್' ಎನ್ನುವ ಶಿಕ್ಷಣಕ್ಕೆ ಸಂಬಂಧಿಸಿದ ಜಿಲ್ಲೆಗಳನ್ನು ಒಳಗೊಂಡಿದ್ದು ಇವು 'ರೆಕ್ಟರ್' ಎನ್ನುವ ಅಧಿಕಾರಿಯ ಅಧೀನಕ್ಕೆ ಒಳಪಟ್ಟಿರುತ್ತದೆ. ಈ 'ರೆಕ್ಟರ್'ನ ಕೆಲಸ ಪ್ರತಿಯೊಂದು ಜಿಲ್ಲೆಗಳಲ್ಲಿಯೂ ವಿಶ್ವವಿದ್ಯಾಲಯದ ಆಡಳಿತವನ್ನು ನೋಡಿಕೊಳ್ಳುವುದಾಗಿರುತ್ತದೆ. ಹೀಗೆ ದೇಶಾದ್ಯಂತ ಶೈಕ್ಷಣಿಕ ಚಟುವಟಿಕೆಗಳಲ್ಲಿ ಏಕ ಸೂತ್ರತೆ ಹೊಂದಿದ್ದು. ಆ ಮೂಲಕ ಭಿನ್ನತೆಯನ್ನು ಸಾಧಿಸಲು ಅವಕಾಶವಿರುತ್ತದೆ. ಈ ಕಾರಣದಿಂದ ಹೆಚ್ಚಿನ ವಿದ್ಯಾರ್ಥಿಗಳು ಅನುಕೂಲತೆಗಳಿಗಾಗಿ ಪ್ಯಾರಿಸ್ ಹೋಗುತ್ತಾರೆ. ಅದಲ್ಲದೆ 'ಗ್ರಾಂಡ್ಸ್ ಇಕೋಲಸ್' ಎನ್ನುವ ಉನ್ನತ ಶಿಕ್ಷಣ ಸಂಸ್ಥೆಗಳಿದ್ದು ಅವು ಉತ್ತಮವಾದ ತಾಂತ್ರಿಕ ಮತ್ತು ಔದ್ಯೋಗಿಕ ತರಬೇತಿಯನ್ನು ನೀಡುತ್ತವೆ. ಈ ಸಂಸ್ಥೆಗಳು ಯಾವುದೇ ವಿಶ್ವವಿದ್ಯಾಲಯದ ಅಧಿನದಲ್ಲಿ ಇರುವುದಿಲ್ಲ.

ಜರ್ಮನಿಯಲ್ಲಿ ಉನ್ನತ ಶಿಕ್ಷಣವು ಬಲವಾದ ನಿಯಮಗಳಿಂದ ರೂಪಿತವಾಗಿದ್ದು. ಪ್ರಾದೇಶಿಕ ವಿಶ್ವವಿದ್ಯಾಲಯಗಳು ವಿಶ್ವವಿಶ್ವವಿದ್ಯಾಲಗಳ ಅಧಿಕಾರಿಯ (ರೆಕ್ಟರ್) ನಿರ್ದೇಶನದಲ್ಲಿ ಸ್ವಾಯುತ್ತತೆಯ ಕಾರ್ಯನಿರ್ವಹಿಸುತ್ತವೆ. ಇಲ್ಲಿ ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳು ಅವರ ಆಸಕ್ತಿಗಳಿಗೆ ಅನುಸಾರವಾಗಿ ಮತ್ತು ವಿಶ್ವವಿದ್ಯಾಲಯಗಳ ಸಂಖ್ಯೆಗಳನುಸಾರವಾಗಿ ವಿಶ್ವವಿದ್ಯಾಲಯಗಳನ್ನು ಬದಲಾಯಿಸಿಕೊಳ್ಳುತ್ತಾರೆ. ಅದಲ್ಲದೆ ಸಂಪ್ರದಾಯವೆಂಬಂತೆ ಪದವಿ ಪೂರ್ವಹಂತದಲ್ಲಿ ವಿದ್ಯಾರ್ಥಿಗಳು ಒಂದಕ್ಕಿಂತ ಹೆಚ್ಚು ವಿಶ್ವವಿದ್ಯಾಲಯಗಳನ್ನು ಬದಲಾಯಿಸುತ್ತಾರೆ. ಹಾಗೆಯೇ ಬಹುತೇಕ ಅಧ್ಯಾಪಕರು ಈ ವಿಶ್ವವಿದ್ಯಾಲಯಗಳಲ್ಲಿ ನಾಲ್ಕು ಐದು ವಿದ್ಯಾರ್ಥಿಗಳಿಗೆ ಬೋಧನೆ ನೀಡುತ್ತಾರೆ. ಆದರೆ ಫ್ರಾನ್ಸ್‌ನಲ್ಲಿ ಈ ರೀತಿಯ ಅಧ್ಯಯನದ ಕ್ರಮವಿಲ್ಲ.

ಈ ಎಲ್ಲಾ ದೇಶಗಳ ಶಿಕ್ಷಣಕ್ರಮವು ಇತರ ದೇಶಗಳ ಮೇಲೆ ಪ್ರಭಾವ ಬೀರಿದೆ. ವಸಾಹತು ಅಥವಾ ಮಿಶನರಿಗಳ ಮೂಲಕ ಫ್ರಾನ್ಸ್‌ನಶಿಕ್ಷಣ ಕ್ರಮವು ಉತ್ತರ ಮತ್ತು ಪಶ್ಚಿಮ ಆಫ್ರಿಕಾ, ಕೆರೆಬಿಯನ್, ಮತ್ತು ಪೂರ್ವ ರಾಷ್ಟ್ರಗಳಲ್ಲಿ ಹೆಚ್ಚು ಪ್ರಚಾರವಾಗತೊಡಗಿತು. ೧೮೭೦ರಲ್ಲಿ ಜಪಾನಿನ ಅಭಿವೃದ್ಧಿ ಶೀಲ ವಿಶ್ವವಿದ್ಯಾಲಯಗಳ ನಿಯಮವು ಫ್ರಾನ್ಸ್‌ದೇಶದ ವಿಶ್ವವಿದ್ಯಾಲಯಗಳಂತೆಯೇ ಪರಿಷ್ಕರಣೆಗೊಳಗಾಯಿತು. ಅಲ್ಲಿನ 'ಗ್ರಾಂಡ್ ಎಕೋಸ್' ನಿಯಮಾವಳಿಗಳನ್ನೆ ಜಪಾನ್ ಸಹ ಅನುಸರಿಸಲಾಯಿತು. ಜರ್ಮನ್‌ನ ಪ್ರಭಾವವು ತತ್ವಶಾಸ್ತ್ರೀಯ ಪರಿಕಲ್ಪನೆಯ ಮೂಲಕ ಈ ವಿಶ್ವವಿದ್ಯಾಲಯಗಳನ್ನು ಪ್ರವೇಶಿಸಿತು. ಜರ್ಮನರು ವಿಶ್ವವಿದ್ಯಾಲಗಳಲ್ಲಿ 'ಸಂಶೋಧನೆ'ಗೆ ಅವಕಾಶ ಕಲ್ಪಿಸಿದ ಮೊದಲಿಗರು, 'ಡಾಕ್ಟರೇಟ್' ಅಥವಾ ಪಿಎಚ್.ಡಿ. ಯನ್ನು ಮೊದಲಬಾರಿಗೆ ಜರ್ಮನರು ಜಾರಿಗೆ ತಂದರು.

ಬ್ರಿಟನ್‌ನಲ್ಲಿ ಉನ್ನತ ಶಿಕ್ಷಣ ಸ್ವಾಯುತ್ತತೆಯನ್ನು ಸಂಪೂರ್ಣವಾಗಿ ಒಪ್ಪಲಾಯಿತು. ಸರ್ಕಾರದಿಂದ ಎಲ್ಲಾ ರೀತಿಯ ಅನುದಾನ ಪಡೆಯುತ್ತಿದ್ದಾಗಲೂ ಅಲ್ಲಿಯ ವಿಶ್ವವಿದ್ಯಾಲಯಗಳು ಪೂರ್ಣ ಪ್ರಮಾಣದ ಸ್ವಾಯತೆಯನ್ನು ಅನುಭವಿಸುತ್ತಿದ್ದವು. ಬ್ರಿಟನ್ ವಿಶ್ವವಿದ್ಯಾಲಯಕ್ಕೆ ಪ್ರವೇಶ ಪಡೆಯುವುದು ತುಂಬಾ ಸಂಕೀರ್ಣವಾದ ವಿಷಯ ವಿಶ್ವವಿದ್ಯಾಲಯ ಪ್ರವೇಶ ಪಡೆಯಲು ವಿದ್ಯಾರ್ಥಿಗಳು ಸಾಮಾನ್ಯವಾಗಿ ಪದವಿ ಪತ್ರವನ್ನು ಪಡೆಯಲಾಗುತ್ತಿತ್ತು. ಹೆಚ್ಚಿನ ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಇಂತಹ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಪ್ರವೇಶ ಪಡೆಯುತ್ತಾರೆ. ಇಂತಹ ವಿದ್ಯಾರ್ಥಿಗಳು ಮಾರ್ಗದರ್ಶಕರ ನೆರವಿನಿಂದ ಮತ್ತು ಇತರರ ಬೋಧನೆ ಮೂಲಕ ಮೂರು ವರ್ಷಗಳಲ್ಲಿ ಪದವಿಯನ್ನು ಪಡೆಯುತ್ತಾರೆ. ಗ್ರೇಟ್ ಬ್ರಿಟನಿನ ಶೈಕ್ಷಣಿಕ ಕಾರ್ಯ ಚಟುವಟಿಕೆಗಳು

ಯೂರೋಪಿನ ಇತರ ದೇಶಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ತಜ್ಞತೆಯ ಕ್ಷೇತ್ರ ಹೊಂದಿರುತ್ತದೆ. ಬಹುತೇಕ ಪದವಿ ಪೂರ್ವ ವಿದ್ಯಾರ್ಥಿಗಳು ಒಂದಕ್ಕಿಂತ ಹೆಚ್ಚಿನ ವಿಷಯಗಳಲ್ಲಿ ಗೌರವ ಪದವಿಗಳನ್ನು ಪಡೆದಿರುತ್ತಾರೆ. ಬ್ರಿಟನಿನ ಈ ಉನ್ನತ ಶಿಕ್ಷಣ ಮಾದರಿ, ಕೆನಡ, ಭಾರತ, ಸೌತ್ ಆಫ್ರಿಕಾ, ನ್ಯೂಜಿಲ್ಯಾಂಡ್ ಮತ್ತು ಇತರ ವಸಾಹತು ದೇಶಗಳಲ್ಲಿ ಪ್ರಚಲಿತವಾಗಿದೆ.

ಉನ್ನತ ಶಿಕ್ಷಣದ ಪದ್ಧತಿಯೂ ಯೂರೋಪ್ ದೇಶಗಳ ಕ್ರಮಕ್ಕಿಂತ ಭಿನ್ನವಾಗಿದೆ. ಅಲ್ಲಿ ಪ್ರೌಢ ಶಿಕ್ಷಣ ಮುಗಿಸಿದ ನಂತರ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಎರಡು ವರ್ಷದ ಪದವಿಯನ್ನು ಪಡೆಯುತಕ್ಕದ್ದು ಆದುದರಿಂದ ಅಧಿಕ ಸಂಖ್ಯೆಯಲ್ಲಿ ಜ್ಯೂನಿಯರ್ ಕಾಲೇಜುಗಳು ಮತ್ತು ಕಮ್ಯುನಿಟಿ ಕಾಲೇಜುಗಳು ಪದವಿ ಪೂರ್ವ ಶಿಕ್ಷಣ ನೀಡುತ್ತವೆ. ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಲ್ಲಿ ಕಾಲೇಜುಗಳಲ್ಲಿ ನಾಲ್ಕುವರ್ಷ ಪದವಿ ನೀಡುವುದಕ್ಕೆ ಪರ್ಯಾಯ ವ್ಯವಸ್ಥೆಯಿದೆ. ನಾಲ್ಕು ವರ್ಷಗಳ ಪದವಿ ತರಗತಿಗಳನ್ನು ನಡೆಸುವ ವಿದ್ಯಾಲಯಗಳು ಖಾಸಗಿ ಸಹಭಾಗಿತ್ವದಲ್ಲಿ ಅಥವಾ ಸರ್ಕಾರ ಇಲ್ಲವೇ ನಗರಗಳ ಅನುದಾನಗಳ ಮೂಲಕ ನಡೆಯುತ್ತವೆಯಾಗಿ ಅವುಗಳಿಗೆ ಹಣಕಾಸಿನ ನೆರವು ಬೇಕಾಗುತ್ತದೆ. ಖಾಸಗಿ ವಿಶ್ವವಿದ್ಯಾಲಯ ಕಾಲೇಜುಗಳು ಬಹುಮಟ್ಟಿಗೆ ವಿದ್ಯಾರ್ಥಿಗಳಿಂದ ವಿದ್ಯಾರ್ಥಿ ಶುಲ್ಕವನ್ನು ಪಡೆಯುದರ ಮೂಲಕ ಶಿಕ್ಷಣ ನೀಡುತ್ತವೆ. ಪ್ರತ್ಯೇಕವಾಗಿ, ರಾಜ್ಯ ಸರ್ಕಾರಗಳು, ವ್ಯವಸ್ಥಿತವಾದ ನಿಯಮಗಳ ಮೂಲಕ ವಿಶ್ವವಿದ್ಯಾಲಯವನ್ನು ರೂಪಿಸಿ ಉನ್ನತ ಶಿಕ್ಷಣವನ್ನು ನೀಡಲು ಸಹಕರಿಸುತ್ತವೆ.

ಅಮೇರಿಕದಲ್ಲಿ ಬ್ಯಾಚುಲರ್ ಡಿಗ್ರಿ ಎಂಬುದು ಸಾಮಾನ್ಯವಾಗಿ ಅಂತಿಮ ವರ್ಷ ಪರೀಕ್ಷೆ ಪಾಸುಮಾಡುವುದರ ಮೂಲಕ ಬರುವುದಿಲ್ಲ. ಬದಲಾಗಿ ಒಟ್ಟು ಕ್ರೆಡಿಟ್ ಸಂಪಾದನೆಯ ಮೂಲಕ ಅಥವಾ ತರಗತಿಗಳಲ್ಲಿ ಅಧ್ಯಯನ ಮಾಡುವ ಗಂಟೆಗಳ ಮೂಲಕ ಲಭಿಸುತ್ತದೆ. ಈ ಪದವಿಗಳಲ್ಲಿ ವಿದ್ಯಾರ್ಥಿಯ ಅರ್ಹತೆಯನ್ನು ನಿರಂತರವಾದ ಅಂಕಪಟ್ಟಿ ದಾಖಲಿಸುವ ಮೂಲಕ ಮತ್ತು ಅಂಕಪಟ್ಟಿಗಳಲ್ಲಿ ಗ್ರೇಡ್‌ಗಳು ನೀಡುವ ಮೂಲಕ ನಿರ್ಧರಿಸಲಾಗುತ್ತದೆ.

ನಿರ್ದಿಷ್ಟವಾದ ಅಂಕಗಳನ್ನು ಪಡೆಯದ ತೇರ್ಗಡೆಯಾ ಗ್ರೇಡ್ ಪಡೆಯುವ ಮೂಲಕ ಬ್ಯಾಚ್ಯುಲರ್ ಡಿಗ್ರಿ ನೀಡಲಾಗುತ್ತದೆ. ಮೊದಲ ಎರಡು ವರ್ಷಗಳಲ್ಲಿ ನಿರ್ದಿಷ್ಟ ಪಡಿಸಿದ ಅಧ್ಯಯನ ಕ್ಷೇತ್ರಗಳು ಮತ್ತು ಕೆಲವು ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡಿಕೊಂಡು ವಿದ್ಯಾರ್ಥಿಗಳ ಐಚ್ಛಿಕ ಅಧ್ಯಯನ ಮಾಡುತ್ತಾರೆ. ಸ್ನಾತಕೋತ್ತರ ವಿದ್ಯಾರ್ಥಿಗಳು ಉನ್ನತ ಶಿಕ್ಷಣವನ್ನು ಅಥವಾ ಸಂಶೋಧನೆಯನ್ನು ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳಲ್ಲಿ ಪಡೆಯುತ್ತಾರೆ. ಇಂತಹ

ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳು ಮಾಸ್ಟರ್ ಡಿಗ್ರಿ (೨ವರ್ಷ) ಅಥವಾ ಪಿಎಚ್.ಡಿ. (೨ರಿಂದ೪) ಪಡೆಯುತ್ತಾರೆ. ಅಮೇರಿಕದ ಉನ್ನತ ಶಿಕ್ಷಣ ಬಹಳ ಮುಖ್ಯವಾಗಿ ಜರ್ಮನ್ ಮಾದರಿ ಅನುಸರಿಸುತ್ತಿದ್ದು, ಬೋಧನೆ ಮತ್ತು ಪರೀಕ್ಷೆಗಳನ್ನು ಹೆಚ್ಚು ಪರಿಗಣಿಸುವುದಾಗಿದೆ. ಈ ಎರಡು ದೇಶಗಳಲ್ಲಿ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ವೈಯಕ್ತಿಕ ನೆಲೆಯಲ್ಲಿ ಅಂದರೆ ಚರ್ಚೆಗಳ ಮೂಲಕ ಅಥವಾ ಸಂಪ್ರಂಬಂಧ ಮೂಲಕ ಅಳೆಯಲಾಗುತ್ತದೆ. ಎರಡನೆ ಜಾಗತಿಕ ಸಮರದ ನಂತರ ಅಮೇರಿಕವು ಫಿಲಿಫೈನ್‌ನ ಮಾದರಿಯನ್ನು ಸಂಪೂರ್ಣ ಅನುಸರಿಸುತ್ತಿದ್ದು. ಜಪಾನ್ ಮತ್ತು ಥೈವಾನ್‌ವನ್ನು ಅನುಸರಿಸುತ್ತಿವೆ.

ಕರ್ನಾಟಕದಲ್ಲಿ ಉನ್ನತ ಶಿಕ್ಷಣ

ಕರ್ನಾಟದಲ್ಲಿ ಪ್ರಾಚೀನ ಕಾಲದಿಂದಲೂ ಉನ್ನತ ಶಿಕ್ಷಣ ವ್ಯಾಪಕವಾಗಿ ಬೆಳೆದು ಬಂದಿದೆ. ಈ ಪ್ರಾಚೀನತೆಯನ್ನು ಕ್ರಿ.ಶ. ೪ನೇಯ ಶತಮಾನದ ಹತ್ತಿರಕ್ಕೆ ಕೊಂಡೊಯ್ಯಲಾಗುತ್ತದೆ. ಉತ್ತರ ಭಾರತದಿಂದ ಭದ್ರಬಾಹು ಅವನ ಶಿಷ್ಯ ಚಂದ್ರಗುಪ್ತ ಮೌರ್ಯ ಜೊತೆಗೆ ಜೈನಧರ್ಮದ ಆಗಮನವೂ ಆಯಿತು. ನಾಡಿನ ಬೇರೆ-ಬೇರೆ ಭಾಗಗಳಲ್ಲಿ ಜೈನ ಬಸದಿಗಳನ್ನು ಇವರು ಆರಂಭ ಮಾಡಿದರು. ಇಲ್ಲಿ ನಂಬಿಕೆ, ಭಕ್ತಿ, ಪೂಜೆ ಮತ್ತು ಜ್ಞಾನವೂ ಅತ್ಯಂತ ಮುಖ್ಯವಾದುದೆಂದು ಭಾವಿಸಲಾಗಿತ್ತು. ಅಶೋಕನ ಕಾಲದಲ್ಲಿ ಕರ್ನಾಟಕಕ್ಕೆ ಬೌದ್ಧಧರ್ಮದ ಜೊತೆಗೆ ಉನ್ನತ ಶಿಕ್ಷಣಕ್ಕೆ ಆಶ್ರಯ ಕಲ್ಪಿಸುವ ಸಂಘಾರಾಮ, ವಿಹಾರಗಳು ಸ್ಥಾಪನೆಗೊಂಡಿತು. ಇದರ ಮೂಲಕ ವ್ಯವಸ್ಥಿತವಾಗಿ ಉನ್ನತ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲಾಯಿತು. ಕ್ರಿ.ಶ. ಆರಂಭದ ವೇಳೆಗೆ ದೇಶದ ಅನೇಕ ಕಡೆ ಬೌದ್ಧಮಠ ಮತ್ತು ವಿಹಾರಗಳು ಪ್ರಾರಂಭವಾಗಿದ್ದವು. ಕ್ರಿ.ಶ. ಮೂರನೆ ಶತಮಾನದಲ್ಲಿ ಚಟುಕುಲದ ಶಿವಸ್ಕಂದ ನಾಗಶ್ರೀ ಎಂಬವನು ಬನವಾಸಿಯಲ್ಲಿ ಒಂದು ಬೌದ್ಧವಿಹಾರವನ್ನು ಸ್ಥಾಪಿಸಿರುವುದಾಗಿ ತಿಳಿದುಬರುತ್ತದೆ.[೮] ಜೈನ ಮತ್ತು ಬೌದ್ಧ ಧರ್ಮಗಳು ಆರಂಭಿಸಿದ ಧಾರ್ಮಿಕ ಹಾಗೂ ಶೈಕ್ಷಣಿಕ ಸಂಸ್ಥೆಗಳು ಗುರುಕುಲದ ಮತ್ತು ಆಶ್ರಮ ಶಿಕ್ಷಣ ಪದ್ಧತಿಗಳ ಮೇಲೆ ಪರಿಣಾಮಬೀರಿದರು ಇದರಿಂದ ಶಿಕ್ಷಣಕ್ಕೆ ಸಂಘ ಸಂಸ್ಥೆಗಳ ನಿಯಂತ್ರಣ ಆರಂಭವಾಯಿತು.

ಅವುಗಳಲ್ಲಿ 'ಘಟಿಕ' ಎಂಬುದು ಅತ್ಯಂತ ಪ್ರಾಚೀನ ಸಂಸ್ಥೆಯಾಗಿತ್ತು. ಕದಂಬ ವಂಶದ ರಾಜ ಮಯೂರವರ್ಮ ಉನ್ನತ ಶಿಕ್ಷಣಕ್ಕಾಗಿ ಕಾಂಚಿಪುರಂನಲ್ಲಿದ್ದ ಘಟಿಕಾಲಯದ ಮಾದರಿಯಲ್ಲಿ ಕರ್ನಾಟಕದಲ್ಲೂ ಘಟಕಗಳನ್ನು ಸ್ಥಾಪಿಸಿದನೆಂದು ತಿಳಿದುಬರುತ್ತದೆ. ನಾಗಾಯಿ, ಹೆಂಜಾರಪುರ, ಕಾಡಿಯೂರು, ಕುಕ್ಕೂರ, ಮೋರಿಗೆರೆ, ರಾಯಬಾಗ್ ಮುಂತಾದ ಕಡೆಗಳಲ್ಲಿ ಘಟಿಕಗಳು ಬೇರೆ-

ಬೇರೆ ಕಾಲದಲ್ಲಿ ಅಸ್ಥಿತದಲ್ಲಿದ್ದವು. ಅಲ್ಲಿ ಶಿಕ್ಷಣ ಮುಗಿಸಿದವರಿಗೆ ಸಮಾರಂಭವೊಂದನ್ನು ನಡೆಸಿ 'ಘಟಿಕಸಾಹಸ' ಎಂಬ ಪ್ರಶಸ್ತಿ ನೀಡುತ್ತಿದ್ದರು.

ಘಟಿಕಗಳಂತೆ ಅಗ್ರಹಾರಗಳೂ, ಬ್ರಹ್ಮಪುರಿಗಳು, ನಾಡಿನ ಬೇರೆ-ಬೇರೆ ಭಾಗಗಳಲ್ಲಿ ಸ್ಥಾಪನೆಯಾಗಿದ್ದವು. ಅವು ಬ್ರಾಹ್ಮಣರ ವಸತಿಗಳಾಗಿದ್ದವು. ತಾಳಗುಂದ, ಬಾದಾಮಿ, ಉಮ್ಮಚಿಗೆ, ದೇವಾಂಗಿ, ಕಾಡಿಯೂರು ಸರ್ವಜ್ಞಪುರ ಮುಂತಾದ ಅಗ್ರಹಾರಗಳು, ಬಳ್ಳಿಗಾವಿ ತಲಕಾಡು, ವಿಕ್ರಮಪುರ ಮೊದಲಾದ ಬ್ರಹ್ಮಪುರಿಗಳು ಉನ್ನತ ಶಿಕ್ಷಣದ ಪ್ರಸಿದ್ಧ ಕೇಂದ್ರಗಳಾಗಿದ್ದವು.

ಹತ್ತನೆಯ ಶತಮಾನದಲ್ಲಿ ಬೌದ್ಧವಿಹಾರಗಳ ಮಾದರಿಯಲ್ಲಿ ವ್ಯವಸ್ಥೆಗೊಂಡ ಹಿಂದು ಮಠಗಳು ವೈವಿಧ್ಯಮಯವಾದ ರೀತಿಯಲ್ಲಿ ಉನ್ನತ ಶಿಕ್ಷಣ ನೀಡುತ್ತಿದ್ದವು. ಕೋಡಿಮಠ, ನಾಗಾಯಿಮಠ ವೀರಶೈವ ಮಠಗಳು ಉನ್ನತ ಶಿಕ್ಷಣವನ್ನು ಪ್ರಸಾರ ಮಾಡುತ್ತಿದ್ದವು. ಇದಲ್ಲದೇ ದೇವಾಲಯದ ವಿದ್ಯಾಪೀಠಗಳು ಸಹ ಉನ್ನತ ಶಿಕ್ಷಣ ನೀಡುತ್ತಿದ್ದವು. ಪ್ರಾರಂಭದಲ್ಲಿ ಸಂಸ್ಕೃತವು ಉನ್ನತ ಶಿಕ್ಷಣದ ಬೋಧನೆಯ ವಿಷಯವಾಗಿತ್ತು. ೧೧ನೇ ಶತಮಾನದವೇಳೆಗೆ ಸಂಸ್ಕೃತದ ಜೊತೆಗೆ ಕನ್ನಡವೂ ಉನ್ನತ ಶಿಕ್ಷಣದ ಬೋಧನೆಯ ವಿಷಯವಾಯಿತು. ಸಾಲೋಟಗೆ, ಹರಿಹರದ ಹರಿಹರೇಶ್ವರ ದೇವಾಲಯ, ತಾಳಗುಂದದ ಪ್ರಣವೇಶ್ವರದೇವಾಲಯ, ಮನಗೋಳಿಯ ವ್ಯಾಕರಣದ ವಿದ್ಯಾಪೀಠ, ಹೆಬ್ಬಾಳಿನ ಬುಜ್ಜಿದ್ದೇಶ್ವರ ದೇವಾಲಯ, ಜಟಿಂಗ್ ರಾಮೇಶ್ವರ ವಿದ್ಯಾಪೀಠ, ಬಿಜಾಪುರದ ಮೀಮಾಂಸೆ ವಿದ್ಯಾಪೀಠ, ಕೂಡಲ ಸಂಗಮದೇವಾಲಯದ ವಿದ್ಯಾಪೀಠ - ಇವೆಲ್ಲ ಉನ್ನತ ಶಿಕ್ಷಣದ ಕೇಂದ್ರಗಳಾಗಿದ್ದವು. ಪಠ್ಯಕ್ರಮದ ವಿಷಯವಾಗಿ ವ್ಯಾಕರಣ, ಪುರಾಣ, ವೇದ, ಆಗಮ, ಕಾವ್ಯ ಮತ್ತು ನಾಟಕ ಮುಂತಾದ ವಿಷಯಗಳನ್ನು ಒಳಗೊಂಡಿತ್ತು. ಒಂದೊಂದು ಕೇಂದ್ರವೂ ತನ್ನದೆ ಆದ ವಿಶೇಷ ವಿಷಯದಲ್ಲಿ ಶಿಕ್ಷಣ ನೀಡುತ್ತಿತ್ತು. ಕೋಡಿ ಮಠದಲ್ಲಿ ಷಡ್ದರ್ಶನಗಳು, ಕುಪ್ಪತ್ತೂರು ಮಠದಲ್ಲಿ ವಾತ್ಸಾಯನನ ಕಾಮಸೂತ್ರ, ಸರ್ವಜ್ಞಪುರ ಭಾಷಾಶಾಸ್ತ್ರದಲ್ಲಿ ವಿಶೇಷ ಶಿಕ್ಷಣವನ್ನು ನೀಡುತ್ತಿದ್ದರು.

೧೨-೧೩ನೇ ಶತಮಾನಗಳಲ್ಲಿ ಮುಸಲ್ಮಾನರ ಧಾಳಿಯಿಂದ ಭಾರತದ ಇತರೆಡೆಗಳಂತೆ ಕರ್ನಾಟಕದಲ್ಲಿ ಉನ್ನತ ಶಿಕ್ಷಣಕ್ಕೆ ಧಕ್ಕೆ ಉಂಟಾಯಿತು. ಅವರ ಧಾಳಿಗೆ ಸಿಕ್ಕಿದ ದೇವಾಲಯದ ವಿದ್ಯಾಪೀಠಗಳು ಆಗ್ರಹಾರ, ಬ್ರಹ್ಮಪುರಿ ಮುಂತಾದವು ಪ್ರೋತ್ಸಾಹವಿಲ್ಲದೆ ಕುಂಠಿತಗೊಂಡವು. ಈ ಕಾಲದಲ್ಲಿ ಮುಸ್ಲಿಂಮರು 'ಮದ್ರಸ'ಗಳನ್ನು ಪ್ರಾರಂಭಿಸಿದರು. ಮಸೀದಿಗಳ ಅಂಗವಾಗಿ ಏರ್ಪಡಿಸಿ ಆ ಸಂಸ್ಥೆಗಳಲ್ಲಿ ಮುಸ್ಲಿಂ ಧರ್ಮಗ್ರಂಥಗಳನ್ನು ಭೋಧಿಸುತ್ತಿದ್ದರು.

ಬಹಮನೀ ಅರಸರು ಉನ್ನತ ಶಿಕ್ಷಣದ ಪ್ರಚಾರದಲ್ಲಿ ತುಂಬಾ ಆಸಕ್ತಿವಹಿಸಿದರು. ಗುಲ್ಬರ್ಗಾ, ಬಿದರ್ ಮುಂತಾದಕಡೆ ಸ್ಥಾಪಿಸಿದ ಸಂಸ್ಥೆಗಳು ಇದಕ್ಕೆ ನಿರ್ದನವಾಗಿದೆ. ೧೫ನೇ ಶತಮಾನದ ಕೊನೆಯಲ್ಲಿ ರಾಜ್ಯದ ಮಂತ್ರಿಯಾಗಿದ್ದ ಮಹಮ್ಮದ್ ಗವಾನ್ ಬಿದರೆಯಲ್ಲಿ ವಿಶ್ವವಿದ್ಯಾಲಯ ವೊಂದನ್ನು ಕಟ್ಟಿಸಿ ಧರ್ಮಶಾಸ್ತ್ರಗಳ ಜೊತೆಗೆ ಲೌಕಿಕ ವಿದ್ಯೆಗಳ ಬೋಧನೆಗೂ ವ್ಯವಸ್ಥೆ ಮಾಡಿದನೆಂದು ತಿಳಿಯುತ್ತದೆ. ಅಲ್ಲಿನ ಗ್ರಂಥಾಲಯವೊಂದಕ್ಕೆ ದೇಶವಿದೇಶಗಳಿಂದ ಅಮೂಲ್ಯಕೃತಿಗಳನ್ನು ತರಸಿದ್ದರು. ಆನಂತರ ಅಧಿಕಾರಕ್ಕೆ ಬಂದ ಆದಿಲ್‌ಶಾಹಿಗಳು ಸಾರ್ವತ್ರಿಕ ಶಿಕ್ಷಣಕ್ಕಾಗಿ 'ಮಕ್ತಾಬ್'ಗಳನ್ನು ಆರಂಭಿಸಿ ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಉನ್ನತ ಶಿಕ್ಷಣಕ್ಕೆ ಬರುವಂತೆ ಮಾಡಿದರು. ಅರಬ್ಬಿ ಮತ್ತು ಪಾರಸಿ ಭಾಷೆಗಳ ವ್ಯಾಸಂಗಕ್ಕೂ ಶಿಲ್ಪ, ವೈದ್ಯ, ಮುಂತಾದ ವೃತ್ತಿ ಶಿಕ್ಷಣಕ್ಕೂ ಪ್ರೋತ್ಸಾಹ ನೀಡಿದರು. ಅನಂತರ ೧೮-೧೯ನೇ ಶತಮಾನದಲ್ಲಿ ಸರ್ಕಾರಿ ಕಾಲೇಜುಗಳು, ವಿಶ್ವವಿದ್ಯಾಗಳು ಪ್ರಾರಂಭವಾದವು.

ಉನ್ನತ ಶಿಕ್ಷಣ : ಆಯೋಗಗಳ ಪಾತ್ರ

೧೮೫೭ರ ಅವಧಿಯಲ್ಲಿ ಔಪಚಾರಿಕವಾಗಿ ಪ್ರಾರಂಭವಾದ ಕಲ್ಕತ್ತ, ಬಾಂಬೆ, ಮತ್ತು ಮದ್ರಾಸು ವಿಶ್ವವಿದ್ಯಾಲಯಗಳು ಪಾಶ್ಚಾತ್ಯರ ಶಿಕ್ಷಣ ಕ್ರಮವನ್ನು ಅನುಸರಿಸುತ್ತಾ ಬೆಳೆದವು. ಬ್ರಿಟಿಷ್‌ರ ಆಳ್ವಿಕೆಯಲ್ಲಿ ಅನೇಕ ಸಮಿತಿಗಳು ಮತ್ತು ಆಯೋಗಗಳು ಈ ನಿಟ್ಟಿನಲ್ಲಿ ರಚನೆಗೊಂಡವು. ಆದರೆ ಈ ಆಯೋಗಗಳ ಶಿಫಾರಸ್ಸುಗಳು ಶಿಕ್ಷಣ ಕ್ಷೇತ್ರದಲ್ಲಿ ಕ್ರಮಬದ್ಧವಾಗಿ ಜಾರಿಗೆ ಬರಲಿಲ್ಲ. ಇದಕ್ಕೆ ಅನೇಕ ಕಾರಣಗಳು ಇದ್ದವು. ಭಾರತವು ಸ್ವಾತಂತ್ರ್ಯ ಪಡೆದ ನಂತರ ಉನ್ನತ ಶಿಕ್ಷಣವನ್ನು ಕಾರ್ಯರೂಪಕ್ಕೆ ತರಲು ಪುನರ್‌ವಿಮರ್ಶೆ ಮಾಡಲಾಯಿತು. ಈ ಕಾರ್ಯ ವಿಧಾನದಲ್ಲಿ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಮಿತಿ ಮತ್ತು ಆಯೋಗಗಳು ಕೆಲವು ಪ್ರಮುಖ ಸಲಹೆಗಳನ್ನು ನೀಡಿರುತ್ತದೆ.[೯] ಅವುಗಳು ಈ ಕೆಳಗಿನಂತಿವೆ.

ಡಾ. ರಾಧಾಕೃಷ್ಣನ್ ಆಯೋಗದ ವರದಿ : ಈ ಆಯೋಗವು ೧೯೪೮-೪೯ರಲ್ಲಿ ಪ್ರಾರಂಭವಾಯಿತು. ಇದು ಡಾ. ಎಸ್. ರಾಧಕೃಷ್ಣನ್ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗ(University Education Commission)ವನ್ನು ರಚಿಸಲಾಯಿತು. ಈ ಆಯೋಗದ ಪ್ರಮುಖ ಶಿಫಾರಸ್ಸುಗಳು ಹೀಗಿವೆ.

೧. ವಿಶ್ವವಿದ್ಯಾಲಯದ ಧ್ಯೇಯ

ವಿವೇಕ ಮತ್ತು ಜ್ಞಾನ ಪ್ರಜಾಸತ್ತಾತ್ಮಕ ಸಾಮಾಜಿಕ ವರ್ಗ, ಉನ್ನತ ಜೀವನ ಮೌಲ್ಯಾಪೇಕ್ಷಿತ

ಮತ್ತು ಮುಂದಾಳತ್ವ ತರಬೇತಿ ನಡೆಸುವುದು ಇವಲ್ಲದೆ ಸಂಖ್ಯಾ ಬಲ ೧೫೦೦ ಗಿಂತ ಕಡಿಮೆ ಇರಬೇಕು. ಇದು ವಿಶ್ವವಿದ್ಯಾಲಯದ ಧ್ಯೇಯವಾಗಿರಬೇಕು.

೨. ವಿಶ್ವವಿದ್ಯಾಲಯ ಮತ್ತು ಕಾಲೇಜು ಬೋಧನೆ ಅಭಿವೃದ್ಧಿ ಪಡಿಸುವುದು

ವಿಶ್ವವಿದ್ಯಾಲಯಗಳ ಸಂಖ್ಯಾಬಲ ೩೦೦೦ಕ್ಕಿಂತ ಕಡಿಮೆ ಹೊಂದಿರಬಾರದು ಹಾಗೂ ಶೈಕ್ಷಣಿಕ ವರ್ಷದಲ್ಲಿ ಕಾರ್ಯನಿರ್ವಹಣಾ ದಿನಗಳು ೧೮೦ ಎಂದು ನಿಗದಿಯಾಗಬೇಕು. ಮೇಲ್ವಿಚಾರಣೆ ತರಗತಿಗಳು, ಗ್ರಂಥಾಲಯ ಮತ್ತು ಪರೀಕ್ಷೆಗಳು ಸಮರ್ಪಕವಾಗಿ ನಡೆಸಲು ಅನುವು ಮಾಡಿಕೊಡುವುದು. ಕೇವಲ ಕೆಲವೇ ಪಠ್ಯಪುಸ್ತಕಗಳನ್ನು ನಿಗದಿ ಪಡಿಸುವುದನ್ನು ತಪ್ಪಿಸಿ ಹಲವಾರು ಪುಸ್ತಕಗಳ ಓದಿಗೆ ಅವಕಾಶ ಮಾಡಿಕೊಡುವುದು. ಸ್ನಾತಕೋತ್ತರ ಅಧ್ಯಯನ ಎರಡು ವರ್ಷ ಮತ್ತು ಪದವಿ ತರಗತಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಒಂದು ವರ್ಷ ಅಧ್ಯಯನವನ್ನು ಮುಂದುವರಿಸಬೇಕು. ಪರೀಕ್ಷಾ ಮೌಲ್ಯಮಾಪಕರಿಗೆ ಕನಿಷ್ಟ ವರ್ಷ ಬೋಧನಾ ಅನುಭವ ಹೊಂದಿರಬೇಕು. ಪ್ರತಿಶತ ೭೦ ಅಂಕಗಳನ್ನು ಪ್ರಥಮ ದರ್ಜೆ ಎಂದು ಪರಿಗಣಿಸಬೇಕು.

೩. ಕೋಠಾರಿ ಆಯೋಗದ ವರದಿ

ಡಾ. ಡಿ.ಎಸ್. ಕೋಠಾರಿಯವರ ಅಧ್ಯಕ್ಷತೆಯಲ್ಲಿ ೧೯೬೪-೬೬ರಲ್ಲಿ ಈ ಆಯೋಗ ಸ್ಥಾಪನೆ ಯಾಯಿತು. ವಿಶ್ವಮಾನವ ತಿಳುವಳಿಕೆ ಮತ್ತು ಶಕ್ತಿ ಮೂಡಿಸುವುದು. ಈ ತಿಳುವಳಿಕೆಯನ್ನು ಅಳವಡಿಸಿಕೊಂಡು ಮನುಕುಲಕ್ಕಾಗಿ ಶ್ರಮಿಸುವುದು ಜನರಲ್ಲಿ ಉತ್ತಮ ಅಭಿಪ್ರಾಯ, ಆದರ್ಶವಾದ ಮತ್ತು ಸದಸ್ಯರಲ್ಲಿ ಉನ್ನತಮಟ್ಟದ ನಡತೆ ಮತ್ತು ಸಮಗ್ರತೆಯನ್ನು ನಿರೀಕ್ಷಿಸುವುದು ಎಂದು ಈ ಆಯೋಗವು ತಿಳಿಸುತ್ತದೆ. ಈ ಆಯೋಗವು ಮುಖ್ಯವಾಗಿ ಎರಡು ವಿಷಯಗಳನ್ನು ಆದರ್ಶವೆಂದು ಪರಿಗಣಿಸಿದೆ.

ಅ. ಹೊಸ ತಿಳುವಳಿಕೆ ಧೃತಿಗೆಡೆದ ಸತ್ಯಾನ್ವೇಷಣೆಯ ನಿರಂತರ ಶ್ರಮ, ಹಳೆಯ ತಿಳುವಳಿಕೆ ಮತ್ತು ನಂಬಿಕೆಗಳ ಮರು ಶೋಧ ಮತ್ತು ಅವುಗಳನ್ನು ಸಮಕಾಲೀನ ಅಗತ್ಯಗಳಿಗೆ ಅನುಗುಣವಾಗಿ ಅರ್ಥೈಸುವುದು ಹಾಗೂ ವಿಶ್ಲೇಷಿಸುವುದು. ವಾಸ್ತವಿಕ ಜೀವನದಲ್ಲಿ ಉತ್ತಮ ನಾಯಕತ್ವವನ್ನು ರೂಪಿಸುವುದು. ಪ್ರತಿಭಾವಂತ ಯುವಜನತೆಯನ್ನು ಗುರುತಿಸಿ ಅವರ ದೈಹಿಕ, ಮಾನಸಿಕ ಸಾಮರ್ಥ್ಯ ಹಾಗೂ ಸರಿಯಾದ ಆಸಕ್ತಿ, ಅಭಿರುಚಿ ಮತ್ತು ಬೌದ್ಧಿಕ ಮೌಲ್ಯಗಳನ್ನು ಹೆಚ್ಚಿಸಿಕೊಳ್ಳಲು ನೆರವಾಗುವುದು.

ಆ. ಸ್ನಾತಕೋತ್ತರ ಪದವಿ ಹಂತದಲ್ಲಿ ಉತ್ತಮ ದರ್ಜೆಯ ಸಂಶೋಧನಾ ಕಾರ್ಯದಲ್ಲಿ ತೊಡಗುವುದು. ಉನ್ನತ ಅಧ್ಯಯನ ಕೇಂದ್ರಗಳನ್ನು ಪ್ರಾರಂಭ ಮಾಡುವುದು. ಹಾಗೂ ಅದರಲ್ಲಿ ನಿವೃತ್ತಿ ಹೊಂದಿದ ಹಾಗೂ ಕಾರ್ಯನಿರತ ಕೇಂದ್ರಗಳನ್ನು ಪ್ರಾರಂಭಿಸಿ ಉನ್ನತ ಮಟ್ಟದ ಸಂಶೋಧನೆಯನ್ನು ಉತ್ತೇಜಿಸುವುದು ಅದರೊಂದಿಗೆ,

೧. ಪರೀಕ್ಷಾ ಸುಧಾರಣೆ

೨. ಗುಣಾತ್ಮಕ ಕಾರ್ಯಕ್ರಮಗಳನ್ನು ಸುಧಾರಿಸುವುದು.

೩. ಬೋಧನ ಮಾಧ್ಯಮ

೪. ವಿದ್ಯಾರ್ಥಿಗಳ ಕಲ್ಯಾಣ / ಸೇವಾಭಿವೃದ್ಧಿ

೫. ವಿಶ್ವವಿದ್ಯಾನಿಲಯಗಳ ಕಾರ್ಯಾಭಿವೃದ್ಧಿ

೬. ಮಹಿಳಾ ಶಿಕ್ಷಣ ಅಭಿವೃದ್ಧಿ

೭. ಯು.ಜಿ.ಸಿ. ಕಾರ್ಯಭಿವೃದ್ಧಿ ಪಡಿಸುವುದು.

ಈ ಆಯೋಗವು ಉನ್ನತ ಶಿಕ್ಷಣದ ಬಗ್ಗೆ ಹೊಂದಿರುವ ನಿಲುವುಗಳಾಗಿವೆ.

೩. ೧೯೬೮ರ ರಾಷ್ಟ್ರೀಯ ಶಿಕ್ಷಣ ನೀತಿ

ಭಾರತೀಯ ಭಾಷೆ ಮತ್ತು ಸಾಹಿತ್ಯದ ಸಂಬಂಧಗಳು ಕ್ರಿಯಾಶೀಲವಾಗಲು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯಾಗುವುದು ಅವಶ್ಯಕ. ಇದರ ಹೊರತು ಸೃಜನಶೀಲತೆ ಹಾಗೆಯೇ ಶಿಕ್ಷಣದ ಗುಣಮಟ್ಟ ಸುಧಾರಿಸುವುದು ವಿಶ್ವವಿದ್ಯಾಲಯಗಳ ಮಟ್ಟದಲ್ಲಿಯೂ ಪ್ರಾದೇಶೀಕ ಭಾಷೆಗಳು ಶಿಕ್ಷಣದ ಮಾಧ್ಯಮವಾಗಬೇಕು ಎಂಬುದು ಈ ಆಯೋಗದ ಮುಖ್ಯ ಉದ್ದೇಶ.

೪. ರಾಷ್ಟ್ರೀಯ ಶಿಕ್ಷಣ ನೀತಿ ೧೯೮೬

೧೯೮೬ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯು ಜಾರಿಗೆ ಬಂದಿತು. ಅದರಲ್ಲಿ ಜನರಿಗೆ ವಿಮರ್ಶಾತ್ಮಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ನೈತಿಕ ಮತ್ತು ಆಧ್ಯಾತ್ಮಿಕ ಅಂಶಗಳನ್ನು ನಿಭಾಯಿಸುವ ಅವಕಾಶ ಕಲ್ಪಿಸುವುದು ವಿಶೇಷ ಜ್ಞಾನ ಮತ್ತು ಕೌಶಲ್ಯಗಳನ್ನು ಪ್ರಚಾರ ಮಾಡುವ ಮೂಲಕ ರಾಷ್ಟ್ರಭಿವೃದ್ಧಿಗೆ ಸಹಾಯ ಮಾಡುವುದು; ಶಿಕ್ಷಕರನ್ನು ತಯಾರು ಮಾಡುವಲ್ಲಿ ಪ್ರಮುಖ ಪಾತ್ರವಹಿಸುವುದು, ಅಭೂತಪೂರ್ವ ಜ್ಞಾನ ಒದಗಿಸುವಲ್ಲಿ ಕ್ರಿಯಾತ್ಮಕ ಶಕ್ತಿ ರೂಪಿಸುವುದು ಉನ್ನತ ಶಿಕ್ಷಣ ಧ್ಯೇಯವೆಂದು ಈ ಆಯೋಗವು ತಿಳಿಸುತ್ತಿದೆ.

೫. ಆಚಾರ್ಯ ರಾಮಮೂರ್ತಿ ವರದಿ ೧೯೯೦

೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪುನರ್ ಪರಿಶೀಲಿಸಿ ೧೯೯೦ರಲ್ಲಿ ಆಚಾರ್ಯ ರಾಮಮೂರ್ತಿಯವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಯಿತು. ಉನ್ನತ ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣವನ್ನು ನಮ್ಮ ಸಾಮಾಜಿಕ ವ್ಯವಸ್ಥೆಗೆ ಸಂಬಂಧಿಸಿದಂತೆ ಗುಣಾತ್ಮಕ ಶಿಕ್ಷಣವಾಗಿ ಪರಿವರ್ತಿಸುವುದು ಸ್ಪರ್ಧಾತ್ಮಕ ಮತ್ತು ತಂತ್ರಜ್ಞಾನ ಹಾಗೂ ಸಂಶೋಧನೆಯೂ ಸೇರಿದಂತೆ ಅಭಿವೃದ್ಧಿ ಪಡಿಸಬಹುದಾದ ಅಗತ್ಯತೆಗೆ ಅನುಗುಣವಾಗಿ ಶಿಕ್ಷಣ ಒದಗಿಸುವುದೇ ಉನ್ನತ ಶಿಕ್ಷಣದ ಗುರಿ ಎಂದು ಈ ಆಯೋಗವು ಹೇಳಿದೆ.

ಕೇಂದ್ರಶಿಕ್ಷಣ ಸಲಹಾಮಂಡಲಿ ಸಮಿತಿಯ ಶಿಫಾರಸ್ಸುಗಳು

೧೯೯೨ರಲ್ಲಿ ಶ್ರೀ ಜೆ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಕೇಂದ್ರ ಶಿಕ್ಷಣ ಸಲಹಾ ಮಂಡಲಿಯು ಶಿಕ್ಷಣ ನೀತಿಯನ್ನು ನಿರೂಪಿಸಲು ಕೆಲವು ಶಿಫಾರಸ್ಸುಗಳನ್ನು ಮಾಡಿತು. ಈ ವರದಿ ರಾಮಮೂರ್ತಿ ವರದಿಯಲ್ಲಿನ ಅಭಿಪ್ರಾಯಗಳಿಗೆ ವಿರುದ್ಧವಾಗಿದೆ. ಸಂಯೋಜನೆ ಮುಂದುವರೆಸಲು ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಸೌಲಭ್ಯಗಳನ್ನು ಒದಗಿಸಲು ಹೆಚ್ಚು ಒತ್ತಡ ಮತ್ತು ಹೆಚ್ಚು ಹಿಡಿತದ ಮೂಲಕ ಷರತ್ತುಗಳನ್ನು ಹಾಕುವುದು. ಇದರ ಜೊತೆಗೆ ವಿಶ್ವವಿದ್ಯಾಲಯಗಳು ಕಾಲೇಜುಗಳಿಗೆ ಸಂಯೋಜನೆ ನೀಡುವ ಸಂಬಂಧ ರಾಜ್ಯ ಸರ್ಕಾರ ಗಣನೆಗೆ ತರುವುದು ಒಳ್ಳೆಯದೆಂದು ಈ ವರದಿಯು ತಿಳಿಸುತ್ತದೆ.

ಈ ಮೇಲಿನ ಎಲ್ಲಾ ಆಯೋಗಗಳ ಶಿಫಾರಸ್ಸುಗಳ ಜೊತೆಗೆ ೧೯೯೨ರಲ್ಲಿ ಕೇಂದ್ರ ಸರ್ಕಾರವು ಉನ್ನತ ಶಿಕ್ಷಣದ ಅಭಿವೃದ್ಧಿಗಾಗಿ ಕೆಲವು ಕ್ರಮಗಳನ್ನು ಜಾರಿಗೊಳಿಸಿತು.

ವಿಶ್ವವಿದ್ಯಾಲಯಗಳ ಧನಸಹಾಯ ಆಯೋಗ (ಯು.ಜಿ.ಸಿ.)

೧೯೪೪ರ ಸಾರ್ಜೆಂಟ್ ವರದಿಯ ಶಿಫಾರಸ್ಸನ್ನು ಆಧರಿಸಿಕೊಂಡು ೧೯೪೫ರಲ್ಲಿ ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ(ಯು.ಜಿ.ಸಿ.)ವನ್ನು ಸ್ಥಾಪಿಸಲಾಯಿತು. ಪ್ರಾರಂಭದಲ್ಲಿ ಕೇಂದ್ರಿಯ ವಿಶ್ವವಿದ್ಯಾಲಯಗಳಿಗೆ ಧನಸಹಾಯ ಒದಗಿಸಲು ಕೇಂದ್ರ ಶಿಕ್ಷಣ ಮಂತ್ರಿ ಮಂಡಳಿಗೆ ಶಿಫಾರಸ್ಸು ಮಾಡುವ ಕೆಲಸವನ್ನು ಮಾತ್ರ ಇದು ಮಾಡುತ್ತಿತ್ತು. ಮುಂದೆ ೧೯೪೮-೪೯ರ ರಾಧಾಕೃಷ್ಣನ್ ಆಯೋಗವು ವಿಶ್ವವಿದ್ಯಾಲಯಗಳಿಗೆ ಧನಸಹಾಯ ಮಾಡಲು ಸ್ವತಂತ್ರ ಅಧಿಕಾರವಿರುವ ತಜ್ಞರನ್ನು ಹೊಂದಿರುವ ಆಯೋಗಬೇಕೆಂದು ಅಭಿಪ್ರಾಯಪಟ್ಟಿತು. ತದನಂತರ ೧೯೫೬ರಲ್ಲಿ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ಕಾಯ್ದೆಯನ್ವಯ ವಿಶ್ವವಿದ್ಯಾಲಯ ಧನಸಹಾಯ ಆಯೋಗವನ್ನು ಸ್ಥಾಪಿಸಲಾಯಿತು.

ಅಧ್ಯಾಯ ೩

ಕರ್ನಾಟಕ ವಿಶ್ವವಿದ್ಯಾಲಯಗಳು : ಚಾರಿತ್ರಿಕ ಅವಲೋಕನ

ಉನ್ನತ ಶಿಕ್ಷಣದಲ್ಲಿ ಕರ್ನಾಟಕಕ್ಕೆ ಮಹತ್ವ ಸ್ಥಾನವಿದೆ. ಸ್ವಾತಂತ್ರ್ಯ ಪೂರ್ವದಲ್ಲೆ ಉನ್ನತ ಶಿಕ್ಷಣಕ್ಕೆ ಆದ್ಯತೆ ನೀಡಲಾಗಿತ್ತು. ಮೈಸೂರಿನ ಮಹಾರಾಜ ಕಾಲೇಜು, ಬೆಂಗಳೂರಿನ ಸೆಂಟ್ರಲ್ ಕಾಲೇಜು, ಧಾರವಾಡದ ಕರ್ನಾಟಕ ಕಾಲೇಜು, ಮಂಗಳೂರಿನ ಕಿಟೆಲ್ ಕಾಲೇಜುಗಳು ಜನರಿಗೆ ಶಿಕ್ಷಣ ನೀಡುವಲ್ಲಿ ಮುಂಚೂಣಿಯಲ್ಲಿದ್ದವು. ಇವುಗಳು ರಾಷ್ಟ್ರದ ಅತ್ಯುತ್ತಮ ಕಾಲೆಜುಗಳ ಸಾಲಿಗೆ ಸೇರಲ್ಪಟ್ಟಿದ್ದವು.

ಅಂದು ಕೇವಲ ಕಲಾ, ವಿಜ್ಞಾನಕ್ಕೆ ಸೀಮಿತರಾಗಿದ್ದ ಉನ್ನತ ಶಿಕ್ಷಣ ಕ್ಷೇತ್ರ ಇಂದು ವಿಸ್ತಾರಗೊಂಡಿದೆ. ವೈದ್ಯಕೀಯ ಶಿಕ್ಷಣ, ಇಂಜಿನಿಯರಿಂಗ್ ಶಿಕ್ಷಣದಿಂದ ಸಾಫ್ಟವೇರ್ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಮೊದಲಾದ ಹತ್ತಾರು ಕ್ಷೆತ್ರಗಳಲ್ಲಿ ಕರ್ನಾಟಕ ರಾಷ್ಟ್ರಮಟ್ಟದಲ್ಲಿ ಮಾತ್ರವಲ್ಲ, ಅಂತಾರಾಷ್ಟ್ರೀಯ ಮಟ್ಟದಲ್ಲಿಯು ಸಾಧನೆ ಮಾಡಿದೆ.

ಕರ್ನಾಟಕದ ಏಕೀಕರಣಕ್ಕೆ ಮುನ್ನ ರಾಜ್ಯದಲ್ಲಿ ಇದ್ದದ್ದು ಕೇವಲ ಒಂದೆರಡು ವಿಶ್ವವಿದ್ಯಾಲಯಗಳು. ಆದರೆ ಏಕೀಕರಣದ ಸುವರ್ಣ ಸಂದರ್ಭದಲ್ಲಿ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯಗಳು ಸೇರಿ ಸುಮಾರು ೧೫ ವಿವಿಧ ವಿಶ್ವವಿದ್ಯಾಲಯಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಇವುಗಳ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ಉನ್ನತ ಶಿಕ್ಷಣದ ಅಧ್ಯಯನದಲ್ಲಿ ತೊಡಗಿದ್ದಾರೆ.

ಪದವಿಪೂರ್ವ ಶಿಕ್ಷಣದ ಅನಂತರ ವಿದ್ಯಾರ್ಥಿಗಳಿಗೆ ನೀಡುವ ಶಿಕ್ಷಣವನ್ನು ಕರ್ನಾಟಕದಲ್ಲಿ ಉನ್ನತ ಶಿಕ್ಷಣವೆಂದು ಪರಿಗಣಿಸಲಾಗಿದೆ. ಎಂದರೆ ಏಳು ವರ್ಷ ಪ್ರಾಥಮಿಕ ಶಿಕ್ಷಣವೂ ೩+೨

ವರ್ಷ ಪ್ರೌಢಶಿಕ್ಷಣವೂ ಒಟ್ಟು ಹನ್ನೆರಡು ವರ್ಷಗಳ ಶಾಲಾ ಶಿಕ್ಷಣದ ಅನಂತರದ ಶಿಕ್ಷಣಕ್ಕೆ ಸಾಮಾನ್ಯವಾಗಿ ಪದವಿಪೂರ್ವ ಶಿಕ್ಷಣವೆಂದೂ ಅನಂತರದ ಶಿಕ್ಷಣಕ್ಕೆ ಸಾಮಾನ್ಯವಾಗಿ ಸ್ನಾತಕೋತ್ತರ ಶಿಕ್ಷಣವೆಂದೂ ಕರೆಯಲಾಗಿದೆ. ಇದು ವಿಶ್ವವಿದ್ಯಾಲಯಗಳಲ್ಲೂ ಅದರ ಆಂಗಿಕ ಕೇಂದ್ರಗಳಲ್ಲೂ ವ್ಯವಸ್ಥೆಗೊಂಡಿದೆ. ಮತ್ತು ಅಂಗೀಕೃತ ಕಾಲೇಜುಗಳಲ್ಲೂ ಸ್ನಾತಕೋತ್ತರ ವಿಭಾಗ ಅಥವಾ ಬೋಧನೆ, ಸಂಶೋಧನೆ, ವಿಸ್ತರಣೆ - ಈ ಸಾಂಪ್ರದಾಯಿಕ ಅಂಶಗಳು ಇಲ್ಲಿನ ಉನ್ನತ ಶಿಕ್ಷಣದ ಕರ್ತವ್ಯಗಳಾಗಿವೆ.[೧೦]

ಉನ್ನತ ಶಿಕ್ಷಣ ವ್ಯವಸ್ಥೆ ಕರ್ನಾಟಕದಲ್ಲಿ ೧೮೫೩ರಲ್ಲಿ ಆರಂಭವಾಯಿತು. ಆ ವರ್ಷ ಮೈಸೂರಿನ ಮಹಾರಾಜ ಕಾಲೇಜು ಆರಂಭವಾಯಿತು. ಇಲ್ಲಿ ಪದವಿ ತರಗತಿಗಳನ್ನು ಮೊದಲಿಗೆ ಆರಂಭ ಮಾಡಲಾಯಿತು. (೧೮೫೩) ಅನಂತರ ೧೮೫೮ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜುಗಳು ಆರಂಭವಾದುವು. ಇವೆರಡೂ ಮದರಾಸು ವಿಶ್ವವಿದ್ಯಾಲಯದ ಅಂಗೀಕಾರ ಮೇರೆಗೆ ಕರ್ನಾಟಕದಲ್ಲಿ ಮೊದಲಿಗೆ ಪ್ರಾರಂಭವಾದವು. ತದನಂತರ ಮದ್ರಾಸ್ ಸರ್ಕಾರ ೧೮೬೮ರಲ್ಲಿ ಮಂಗಳೂರಿನಲ್ಲಿ ಎರಡನೆಯ ದರ್ಜೆ ಕಾಲೇಜನ್ನು ಆರಂಭಿಸಿತು. ೧೮೭೯ರಲ್ಲಿ ಮಂಗಳೂರಿಲ್ಲಿ ಸೆಂಟ್ ಅಲಾಸಿಯಸ್ ಕಾಲೇಜು ಮತ್ತು ೧೮೮೨ರಲ್ಲಿ ಬೆಂಗಳೂರಿನ ಸೆಂಟ್ ಜೋಸೆಫರ್ ಕಾಲೇಜುಗಳು ಆಸ್ತಿತ್ವಕ್ಕೆ ಬಂದವು. ೧೯೦೨ರಲ್ಲಿ ಮೈಸೂರಿನ ಮಹಾರಾಜ ಕಾಲೇಜನ್ನು ಪ್ರಥಮ ದರ್ಜೆಗೆ ಏರಿಸಲಾಯಿತು. ಹೀಗೆ ೧೯೧೬ರವರೆಗೂ ಕರ್ನಾಟಕದಲ್ಲಿ ಉನ್ನತ ಶಿಕ್ಷಣ ಮದರಾಸು ವಿಶ್ವವಿದ್ಯಾಲಯದ ಅಂಗೀಕಾರದ ಮೇರೆಗೆ ಪಡೆಯಲಾಗುತ್ತಿತ್ತು. ಆನಂತರ ಕರ್ನಾಟಕದಲ್ಲಿ ವಿಶ್ವವಿದ್ಯಾಲಯದ ಅವಶ್ಯಕತೆ ಇದೆ ಎಂದು ತಿಳಿದು ೧೯೧೬ರಲ್ಲಿ ಮೊದಲ ಬಾರಿಗೆ ಮೈಸೂರ ವಿಶ್ವವಿದ್ಯಾಲಯ ಮೈಸೂರಿನಲ್ಲಿ ಆರಂಭವಾಯಿತು. ಅನಂತರ ೧೯೫೦ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ೧೯೬೪ರಲ್ಲಿ ಬೆಂಗಳೂರು ವಿಶ್ವವಿದ್ಯಾಯವೂ ಅಸ್ತಿತ್ವಕ್ಕೆ ಬಂದವು. ಇವುಗಳ ಆಧೀನ ಕಾಲೇಜುಗಳು ಪ್ರತಿ ಜಿಲ್ಲೆಯಲ್ಲೂ ಅಸ್ತಿತ್ವಕ್ಕೆ ಬಂದವು. ೧೯೬೩ರಲ್ಲಿ ಹೆಬ್ಬಾಳದಲ್ಲಿ ಕೃಷಿ ವಿಶ್ವವಿದ್ಯಾಲಯವು ಸಹ ಸ್ಥಾಪನೆಯಾಯಿತು.

ಅಧ್ಯಯನದ ದೃಷ್ಠಿಯಿಂದ ನಾವು ವಿಶ್ವವಿದ್ಯಾಲಯಗಳನ್ನು ಪ್ರಧಾನವಾಗಿ ಮೂರು ಭಾಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ

ಅ. ದಕ್ಷಿಣ ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ವಿಶ್ವವಿದ್ಯಾಲಯಗಳು.

ಬ. ಉತ್ತರ ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ವಿಶ್ವವಿದ್ಯಾಲಯಗಳು.

ಕ. ಕರ್ನಾಟಕ ರಾಜ್ಯಮುಕ್ತ ವಿಶ್ವವಿದ್ಯಾಲಯಗಳು.

ಅ. ದಕ್ಷಿಣ ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ವಿಶ್ವವಿದ್ಯಾಲಯಗಳು

ಚಾರಿತ್ರಿಕವಾಗಿ ಬೆಳೆದು ಬಂದ ವಿಧಾನ ಅವುಗಳ ಸ್ಥಾಪನೆ ಧ್ಯೆಯೋದ್ದೇಶಗಳನ್ನು ಸ್ಥೂಲವಾಗಿ ಇಲ್ಲಿ ವಿವರಿಸಲಾಗಿದೆ. ಮುಖ್ಯವಾಗಿ ಐದು ವಿಶ್ವವಿದ್ಯಾಲಯಗಳು ದಕ್ಷಿಣ ಕರ್ನಾಟಕದಲ್ಲಿ ಪ್ರಸಿದ್ಧಿಯಾಗಿವೆ.

೧. ಮೈಸೂರು ವಿಶ್ವವಿದ್ಯಾಲಯ

೨. ಬೆಂಗಳೂರು ವಿಶ್ವವಿದ್ಯಾಲಯ

೩. ಮಂಗಳೂರು ವಿಶ್ವವಿದ್ಯಾಲಯ

೪. ಕುವೆಂಪು ವಿಶ್ವವಿದ್ಯಾಲಯ

೫. ತುಮಕೂರು ವಿಶ್ವವಿದ್ಯಾಲಯ

ಮೇಲಿನ ಐದು ವಿಶ್ವವಿದ್ಯಾಲಯಗಳ ವಿವರಣೆಯನ್ನು ಈ ರೀತಿಯಾಗಿ ಕಾಣಬಹುದು.

೧. ಮೈಸೂರು ವಿಶ್ವವಿದ್ಯಾಲಯ

ಭಾರತದಲ್ಲಿ ಉನ್ನತ ಶಿಕ್ಷಣದ ಪ್ರಾಮುಖ್ಯತೆಯನ್ನು ಅರಿತು ಅಗತ್ಯ ಸೌಲಭ್ಯವನ್ನು ಒದಗಿಸಿಕೊಟ್ಟ ಆಶ್ರಿತ ಸಂಸ್ಥಾನಗಳಲ್ಲಿ ಮೈಸೂರು ಸಂಸ್ಥಾನ ಮುಖ್ಯವಾಗಿದೆ. ೧೮೫೩ರಲ್ಲಿ ಪ್ರಾರಂಭವಾದ ಮೈಸೂರಿನ ಮಹಾರಾಜ ಕಾಲೇಜು ೧೮೫೮ರಲ್ಲಿ ಆರಂಭವಾದ ಬೆಂಗಳೂರಿನ ಸೆಂಟ್ರಲ್ ಕಾಲೇಜು ಇಪ್ಪತ್ತನೆಯ ಶತಮಾನದ ಎರಡನೆಯ ದಶಕದವರೆಗೂ ಮದರಾಸು ವಿಶ್ವವಿದ್ಯಾಲಯದ ಅಂಗೀಕೃತ ಕಾಲೇಜುಗಳಾಗಿದ್ದವು.

ಈಗಾಗಲೇ ಮೇಲೆ ತಿಳಿಸಿದಂತೆ ಕರ್ನಾಟಕ ರಾಜ್ಯದ ಹಿರಿಯ ಹಾಗೂ ಪ್ರಥಮ ವಿಶ್ವವಿದ್ಯಾಲಯ ವಾದ ಮೈಸೂರು ವಿಶ್ವವಿದ್ಯಾಲಯವು ೧೯೧೬ರಲ್ಲಿ ಸ್ಥಾಪಿತವಾಯಿತು. ಇದರ ಆಡಳಿತಕೇಂದ್ರ ಮತ್ತು ಮುಖ್ಯ ಕಾಲೇಜುಗಳು ಹಾಗೂ ಮಾನಸಗಂಗೋತ್ರಿ ಎಂಬ ಸ್ನಾತಕೋತ್ತರ ಕೇಂದ್ರ ಮೈಸೂರಿನಲ್ಲಿವೆ. ಮೈಸೂರು, ಮಂಡ್ಯ, ಹಾಸನ, ಚಾಮರಾಜ ನಗರ ಇದರ ವ್ಯಾಪ್ತಿಯಲ್ಲಿ ಬರುತ್ತದೆ. ೧೯೧೬ರಲ್ಲಿ ಮೈಸೂರು ಸಂಸ್ಥಾನದಲ್ಲೆ ಮೊಟ್ಟಮೊದಲನೆಯದಾಗಿ ಆರಂಭವಾದ ಮೈಸೂರು ವಿಶ್ವವಿದ್ಯಾಲಯಕ್ಕೆ ಮೇಲಿನ ಎರಡು ಕಾಲೇಜುಗಳು ಕೇಂದ್ರ ಸಂಸ್ಥೆಗಳಾದವು. ೧೯೧೭ರಲ್ಲಿ ಬೆಂಗಳೂರಿನ ಇಂಜಿನಿಯರಿಂಗ್ ಕಾಲೇಜು, ೧೯೪೨ರಲ್ಲಿ ಮೆಡಿಕಲ್ ಕಾಲೇಜುಗಳು ಸಹಾ ಮೈಸೂರಿನಲ್ಲಿ ಆರಂಭವಾದವು. ೧೯೫೫ರ ವೇಳೆಗೆ ವಿಶ್ವವಿದ್ಯಾಲಯವು ೧೩ ನೂತನ ಕಾಲೇಜುಗಳನ್ನು ಆರಂಭಿಸಿತು. ಜೊತೆಗೆ ಅದು ೩೭ ಖಾಸಗಿ ಕಾಲೇಜುಗಳಿಗೂ ಅಂಗೀಕಾರ ನೀಡಿತ್ತು. ೧೯೬೪ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ

ಅಸ್ತಿತ್ವಕ್ಕೆ ಬರುವ ಮೊದಲು ಈ ವಿಶ್ವವಿದ್ಯಾಲಯ ಇಡೀ ಹಳೆ ಮೈಸೂರು ಭಾಗ ಮತ್ತು ಹಿಂದಿನ ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗಳ ವ್ಯಾಪ್ತಿ ಹೊಂದಿತ್ತು.

ಕೇವಲ ಎರಡು ಕಾಲೇಜುಗಳಿಂದ ಆರಂಭವಾದ ಮೈಸೂರು ವಿಶ್ವವಿದ್ಯಾಲಯ ೧೯೭೬ರ ಹೊತ್ತಿಗೆ ೧೨೭ ಕಾಲೇಜುಗಳನ್ನು ಹೊಂದಿತ್ತು. ಈಗ ೧೪೭ ಕಾಲೇಜುಗಳು ಈ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟಿವೆ. ಕೇವಲ ೫೪೮ ವಿದ್ಯಾಥಿಗಳಿಂದ ಆರಂಭವಾದ ವಿಶ್ವವಿದ್ಯಾಲಯ ೯೬ ವರ್ಷಗಳ ಈ ಕಾಲವಧಿಯಲ್ಲಿ ಅಗಾಧವಾದ ಅಭಿವೃದ್ಧಿ ಹೊಂದಿ ಲಕ್ಷಾಂತರ ಮಂದಿ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದೆ. ಬೋಧನೆ, ಸಂಶೋಧನೆ, ವಿಸ್ತರಣೆ ಈ ಮೂರು ಈ ವಿಶ್ವವಿದ್ಯಾಲಯದ ಪ್ರಧಾನ ಗುರಿಯಾಗಿದೆ. ೨೦೦೩/೦೪ರ ಸಾಲಿನಲ್ಲಿ ನ್ಯಾಕ್ ಸಮಿತಿ ಈ ವಿಶ್ವವಿದ್ಯಾಲಯಕ್ಕೆ A+ ಮಾನ್ಯತೆ ನೀಡಿದೆ.

ಈ ವಿಶ್ವವಿದ್ಯಾಲಯದ ಅಧಿನಿಯಮ ೧೯೩೩ರಲ್ಲಿ ರೂಪಿತವಾಯಿತು. ಆನಂತರ ೧೯೫೬ರಲ್ಲಿ ತಿದ್ದುಪಡಿಯಾಗುವುದರ ಮೂಲಕ ಆಕಾಡಮಿಕ್ ಕೌನ್ಸಿಲ್ಲನ್ನು ಆರಂಭಿಸಿ ತನ್ನ ಶೈಕ್ಷಣಿಕ ಕಾರ್ಯಕ್ರಮಗಳನ್ನು ತಾನೇ ರೂಪಿಸಿ ನಡೆಸಿಕೊಂಡು ಬರುವ ಹಕ್ಕು ಪಡೆದುಕೊಂಡಿತು. ಆನಂತರ ೧೯೫೬ರ ಕಾಯಿದೆ ಪ್ರಕಾರ ವಿಶ್ವವಿದ್ಯಾಲಯ ಸ್ವತಂತ್ರ ಸಂಸ್ಥೆಯಾಯಿತು. ೧೯೬೦ರಲ್ಲಿ ಕೊಂಡು ಕೊಂಡ 'ಜಯಲಕ್ಷ್ಮೀ ವಿಲಾಸ'ಕ್ಕೆ ಮಹಾರಾಜ ಕಾಲೇಜಿನಲ್ಲಿ ನಡೆಯುತ್ತಿದ್ದ ಸ್ನಾತಕೋತ್ತರ ತರಗತಿಗಳು ವರ್ಗವಾದವು. ವಿಶ್ವವಿದ್ಯಾಲಯದ ಈ ನೂತನ ಬಡಾವಣೆಗೆ ಅಂದಿನ ಕುಲಪತಿಗಳಾಗಿದ್ದ 'ಕುವೆಂಪು'ರವರು 'ಮಾನಸಗಂಗೋತ್ರಿ' ಎಂದು ನಾಮಕರಣ ಮಾಡಿದರು.

ಪ್ರಾರಂಭದಿಂದಲೂ ಹಲವಾರು ವಿಷಯಗಳನ್ನು ಕುರಿತು ವಿದ್ವಾಂಸರಿಂದ ಪ್ರಚಾರೋಪನ್ಯಾಸಗಳು ಏರ್ಪಡಿಸಿ ಆ ಉಪನ್ಯಾಸಗಳ ವಿಷಯಗಳನ್ನು ಕಿರುಹೊತ್ತಿಗೆಗಳಾಗಿ ಪ್ರಕಟಿಸುವ ಕಾರ್ಯವೂ ನಡೆಯುತ್ತಿದ್ದು ಅವೆರಡು ಕಾರ್ಯಗಳು ತುಂಬಾ ಜನಪ್ರಿಯಾವೆನಿಸಿವೆ. ಇವುಗಳ ಜೊತೆಗೆ ವಿಶೇಷ ಉಪನ್ಯಾಸಗಳು, ಉಪನ್ಯಾಸಮಾಲೆಗಳು ಏರ್ಪಡುತ್ತಿವೆ. ಪುಟ್ಟಣ್ಣ ಚೆಟ್ಟಿ ಪದುವಟ್ಟಿನ ಮಾಲೆ, ಗೃಹ ಸರಸ್ವತಿ ಗ್ರಂಥಮಾಲೆ ವಿಶೇಷ ಉಪನ್ಯಾಸ ಮಾಲೆ ಮುಂತಾದ ಶೀರ್ಷಿಕೆಯಲ್ಲೂ ಅನೇಕ ಉಪಯುಕ್ತ ಗ್ರಂಥಗಳು ಇಂಗ್ಲಿಷ್‌ನಲ್ಲೂ, ಕನ್ನಡದಲ್ಲೂ ಪ್ರಕಟವಾಗಿ ಇವುಗಳ ಜೊತೆಗೆ ಪ್ರಬುದ್ಧ ಕರ್ಣಾಟಕ, ಮಾನವಿಕ ಕರ್ನಾಟಕ, ವಿಜ್ಞಾನ ಕರ್ನಾಟಕಗಳೆಂಬ ಮೂರು ತ್ರೈಮಾಸಿಕ ಕನ್ನಡ ಪತ್ರಿಕೆಗಳು ಪ್ರಕಟವಾಗುತ್ತವೆ. ಜೊತೆಗೆ ವಿವರಣಾತ್ಮಕ ಗ್ರಂಥ ಸೂಚಿಗಳು ಹಲವಾರು ಸಂಪುಟಗಳಲ್ಲಿ ಪ್ರಕಟವಾಗುತ್ತಿದೆ. ೧೯೬೮ರಿಂದ ೧೯೭೬ರವರೆಗೆ ಅಂಚೆ ಮತ್ತು ತೆರಪಿನ ಶಿಕ್ಷಣವನ್ನು ದೂರದ

ವಿದ್ಯಾರ್ಥಿಗಳಿಗೆ ನೀಡುತ್ತಿದ್ದು ೧೯೯೬ರಿಂದ ಅದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವಾಗಿ ಕಾರ್ಯನಿರ್ವಹಿಸುತ್ತಿದೆ.

ಹೀಗೆ ೯೦ ವರ್ಷಗಳ ದೀರ್ಘ ಅವಧಿಯನ್ನು ಪೂರೈಸಿದ ಮೈಸೂರು ವಿಶ್ವವಿದ್ಯಾಲಯವು ೧೯೯೦ರಲ್ಲಿ ಆ ನೆನಪಿಗೆ ವಜ್ರ ಮಹೋತ್ಸವವನ್ನು ಆಚರಿಸಿತು. ಅನಂತರ ಸುವರ್ಣ ಮಹೋತ್ಸವದ ನೆನಪಿಗಾಗಿ ಹುಣಸೂರು ತಾಲೂಕಿನ ೧೦೦ ಗ್ರಾಮಗಳನ್ನು ದತ್ತು ತೆಗೆದುಕೊಂಡು ಅಲ್ಲಿಯ ಜನತೆಯ ಸರ್ವತೋಮುಖ ಅಭಿವೃದ್ಧಿಗಾಗಿ 'ಭರಣಿ' ಯೋಜನೆಯನ್ನು ಕೈಗೊಂಡಿತು. ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ ಹೆಸರಿನಲ್ಲಿ ಕಲಾ ಮತ್ತು ಮಾನವಿಕ ಶಾಸ್ತ್ರಗಳ ವಿಶಿಷ್ಟ ಅಧ್ಯಯನ ಪೀಠ ಮುಂತಾದ ಹಲವಾರು ಯೋಜನೆಗಳನ್ನು ಈ ಮೈಸೂರು ವಿಶ್ವವಿದ್ಯಾಯ ಕೈಗೆತ್ತಿಕೊಂಡಿದೆ.

೨. ಬೆಂಗಳೂರು ವಿಶ್ವವಿದ್ಯಾಲಯ

ಇದು ೧೯೬೪ ನವೆಂಬರ್ ೨೪ರಂದು ಬೆಂಗಳೂರಿನಲ್ಲಿ ಆರಂಭವಾಯಿತು. ಈ ವಿಶ್ವವಿದ್ಯಾಲಯದ ಆವರಣಕ್ಕೆ 'ಜ್ಞಾನಭಾರತಿ' ಎಂದು ಕರೆಯುತ್ತಾರೆ. ೧೯೬೪ರವರೆಗೆ ಮೈಸೂರಿನ ವಿಶ್ವವಿದ್ಯಾಲಯಕ್ಕೆ ಸೇರಿದ್ದ ೩೨ ಕಾಲೇಜುಗಳು ನೂತನ ವಿಶ್ವವಿದ್ಯಾಲಯದ ವ್ಯಾಪ್ತಿಗೆ ವರ್ಗವಾದವು. ೧೮೫೮ರಲ್ಲಿ ಆರಂಭವಾಗಿದ್ದ ಸೆಂಟ್ರಲ್ ಕಾಲೇಜು ೧೯೧೭ರಲ್ಲಿ ಆರಂಭವಾಗಿದ್ದ ಇಂಜಿನಿಯರಿಂಗ್ ಕಾಲೇಜು ಅದರ ಆಂಗಿಕ ಕಾಲೇಜುಗಳಾಗಿದ್ದವು. ಸೆಂಟ್ರಲ್ ಕಾಲೇಜು ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನೆಗಳಿಗೆ ಮೀಸಲಾಯಿತು. ಆರಂಭದಲ್ಲಿ ಅಲ್ಲಿ ೧೪ ಸ್ನಾತಕೋತ್ತರ ವಿಷಯ ವಿಭಾಗಗಳು ಮಾತ್ರ ಇದ್ದವು. ಈಚೆಗೆ ವಿಷಯ ವಿಭಾಗಗಳ ಸಂಖ್ಯೆಯೂ ತೀವ್ರವೇಗದಲ್ಲಿ ಹೆಚ್ಚಿವೆ. ಅಂತೆಯೇ ನಗರದ ಕಾಲೇಜುಗಳ ಸಂಖ್ಯೆಯೂ ಹೆಚ್ಚಿವೆ. ೧೯೭೫ ಸೆಪ್ಟೆಂಬರ್ ತಿಂಗಳವರೆಗೆ ನಗರದ ಪ್ರಾದೇಶಿಕ ವ್ಯಾಪ್ತಿಯನ್ನು ಮಾತ್ರ ಹೊಂದಿತ್ತು. ವಿಶ್ವವಿದ್ಯಾಲಯಕ್ಕೆ ಆಗ ೬೦ ಕಾಲೇಜುಗಳು ೨೩ ಸ್ನಾತಕೋತ್ತರ ವಿಷಯ ವಿಭಾಗಗಳು ಸೇರಿದ್ದವು. ಕಲಾಶಾಸ್ತ್ರ, ವಿಜ್ಞಾನ ಶಾಸ್ತ್ರ, ಶಿಕ್ಷಣಶಾಸ್ತ್ರ, ವಾಣಿಜ್ಯಶಾಸ್ತ್ರ, ವೈದ್ಯಶಾಸ್ತ್ರ ಮತ್ತು ಕಾನೂನು ಶಾಸ್ತ್ರ, ಇವು ಪ್ರಮುಖ ವಿಷಯಗಳಾಗಿದ್ದವು.

೧೯೬೯ರಲ್ಲಿ ಗಾಂಧಿ ಭವನ ನಿರ್ಮಾಣವಾಯಿತು. ಇದರ ಜೊತೆಗೆ ಕನ್ನಡ, ತೆಲಗು, ಸಂಸ್ಕೃತ, ಮತ್ತು ಹಿಂದಿ ವಿಭಾಗಗಳು ೧೯೭೩ರಲ್ಲಿ ನೂತನ ಆವರಣಕ್ಕೆ ಸ್ಥಳಾಂತರಗೊಂಡವು. ಆನಂತರ ಇಂಗ್ಲೀಷ್, ಇತಿಹಾಸ, ಸಮಾಜಶಾಸ್ತ್ರ ಮುಂತಾದ ವಿಭಾಗಗಳು ಜ್ಞಾನಭಾರತಿಗೆ ವರ್ಗಾವಣೆಯಾದವು. ಅಷ್ಟೆ ಅಲ್ಲದೇ ವಿಶ್ವವಿದ್ಯಾಲಯವೂ ನಗರದ ಬೇರೆ ಬೇರೆ ಕೇಂದ್ರಗಳಲ್ಲಿ ಸಂಜೆಯ ಸ್ನಾತಕೋತ್ತರ ತರಗತಿಯನ್ನು ನಡೆಸುತ್ತಿದೆ. ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಪ್ರಚಾರೋಪನ್ಯಾಸ ಕಿರು

ಹೊತ್ತುಗೆಗಳ ಪ್ರಕಟಣೆ ಇತರ ಕನ್ನಡ ಮತ್ತು ಇಂಗ್ಲಿಷ್ ಗ್ರಂಥಗಳ ಪ್ರಕಟಣೆ - ಇವುಗಳ ಮೂಲಕ ಜನತೆಯಲ್ಲಿ ಜ್ಞಾನವಿಸ್ತರಣ ಕಾರ್ಯವನ್ನು ಕೈಗೊಂಡಿದೆ. ಇದಲ್ಲದೆ ಭಾಷೆ, ವಿಜ್ಞಾನ ವಿಸ್ತರಣ ಕಾರ್ಯವನ್ನು ಕೈಗೊಂಡಿದೆ. ಇದಲ್ಲದೆ ಭಾಷೆ ವಿಜ್ಞಾನ, ಮತ್ತು ಮಾನವಿಕ ಪದವಿ ಮಟ್ಟದ ಅನೇಕ ಕನ್ನಡ ಪಠ್ಯಪುಸ್ತಕಗಳನ್ನು ಪ್ರಕಟಿಸಿದೆ. ಇಂದು ಪ್ರಕಟವಾದ ಪುಸ್ತಕಗಳ ಸಂಖ್ಯೆ ಸು. ೩೦೦ಕ್ಕೂ ಮೇಲ್ಪಟ್ಟ ಪುಸ್ತಕಗಳನ್ನು ಪ್ರಕಟಿಸಿದೆ.

೧೯೭೨ರಲ್ಲಿ ನೂತನ ವಿಶ್ವವಿದ್ಯಾಲಯದ ೬೦ ಕಾಲೇಜುಗಳಲ್ಲಿ ಸುಮಾರು ೩೫ ಸಾಮಾನ್ಯ ಶಿಕ್ಷಣದವು, ೨೫ ವೃತ್ತಿ ಶಿಕ್ಷಣದವು ಆಗಿದ್ದವು. ಈ ವಿಶ್ವವಿದ್ಯಾಲಯದಲ್ಲಿ ಭಾರತೀಯ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಒಂದು ಹೊಸ ಪ್ರಯೋಗವೊಂದು ೨೦೦೨-೦೩ರಿಂದಿಚೆಗೆ ಆರಂಭಿಸಲಾಗಿತ್ತು. ಆದೇನೆಂದರೆ ಪದವಿಮಟ್ಟದಲ್ಲಿ ಒಂದು ಐಚ್ಚಿಕ ವಿಷಯಕ್ಕೆ ಬದಲು ವೃತ್ತಿಯೊಂದುರಲ್ಲಿ ತರಬೇತಿ ನೀಡುವ ಯೋಜನೆ ವಿಶ್ವವಿದ್ಯಾಲಯ ರೂಪಿಸಿತ್ತು. ಅದು ಆನಂತರ ಮಾರ್ಪಾಟಾಗಿ ವೃತ್ತಿಪರ (ಜಾಬ್ ಓರಿಯಂಟಡ್) ಡಿಪ್ಲೋಮಾ ತರಗತಿಗಳು ಆರಂಭವಾದವು. ಇದರಿಂದ ಉನ್ನತ ಶಿಕ್ಷಣ ಉದ್ದೇಶ ಪೂರ್ವಕವಾಗಿ ಪರಿಣಮಿಸಿದೆ. ಇಂಥ ಯೋಜನೆಯನ್ನು ಆರಂಭಿಸಿದ ಕೀರ್ತಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲುತ್ತದೆ.

ಆರಂಭದಲ್ಲಿ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬೆಂಗಳೂರು ನಗರ ಮಾತ್ರ ಸೇರಿತ್ತು. ಇಂದು ಅದರ ಜೊತೆಗೆ ಬೆಂಗಳೂರು ಗ್ರಾಮಾಂತರ ಮತ್ತು ಕೋಲಾರ ಜಿಲ್ಲೆಯು ಈ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಸೆರಿದೆ. ಹಿಂದೆ ತುಮಕೂರು ಜಿಲ್ಲೆ ಇದರ ವ್ಯಾಪ್ತಿಗೆ ಸೇರಿದ್ದು ಈಗ ಪ್ರತ್ಯೇಕ ವಿಶ್ವವಿದ್ಯಾಲಯವಾಗಿ ಅಸ್ತಿತ್ವಕ್ಕೆ ಬಂದಿದೆ.

೩. ಮಂಗಳೂರು ವಿಶ್ವವಿದ್ಯಾಲಯ

ಇದು ೧೯೮೦ರಲ್ಲಿ ಮಂಗಳೂರಿನಲ್ಲಿ ಸ್ಥಾಪನೆಯಾಯಿತು. ಮೊದಲಿಗೆ ಮೈಸೂರು ವಿಶ್ವವಿದ್ಯಾಯವು ಮಂಗಳೂರಿನಲ್ಲಿ ೧೯೬೮ರಲ್ಲಿ ಒಂದು ಸ್ನಾತಕೋತ್ತರ ಶಿಕ್ಷಣ ಕೇಂದ್ರವನ್ನು ತೆರೆಯಿತು. ಮೈಸೂರು ವಿಶ್ವವಿದ್ಯಾಲಯದ ಆಗಿನ ಕುಲಪತಿಗಳಾದ, ಶಿಕ್ಷಣ ತಜ್ಞರೂ ಆದ 'ಶ್ರೀ ಮಾಲಿ'ಯವರು ಇದಕ್ಕೆ ಪ್ರೋತ್ಸಾಹ ನೀಡಿದರು. ಆನಂತರ ಪ್ರಾರಂಭದಲ್ಲಿ ಮಂಗಳೂರಿನ ವಿವಿಧ ಕಾಲೇಜುಗಳಲ್ಲಿ ಸ್ನಾತಕೋತ್ತರ ಶಿಕ್ಷಣಕ್ಕೆ ಎಡೆಮಾಡಲಾಗಿತ್ತು. 'ಮಂಗಳಗಂಗೋತ್ರಿ' ಎಂಬ ಹೆಸರಿನ ಈ ಸ್ನಾತ್ತಕೋತ್ತರ ಕೇಂದ್ರದಲ್ಲಿ ಪ್ರಥಮವಾಗಿ ಕನ್ನಡ, ಭೌತಶಾಸ್ತ್ರ, ಗಣಿತ, ವಾಣಿಜ್ಯಶಾಸ್ತ್ರ ಮತ್ತು ಜೀವ ವಿಜ್ಞಾನ ಶಾಸ್ತ್ರ ವಿಭಾಗಗಳು ಪ್ರಾರಂಭವಾದವು. ಇವುಗಳಲ್ಲಿ ಮೊದಲು ಶಿಕ್ಷಣ ಪಡೆದವರ ಸಂಖ್ಯೆ ಒಟ್ಟು ೨೫೫.

ಮೈಸೂರು ವಿಶ್ವವಿದ್ಯಾಲಯ ಪ್ರಸಾರಾಂಗ ಪ್ರಕಟಿತ ಪುಸ್ತಕಗಳ ಮಾರಾಟದ ವಿಭಾಗವನ್ನು ಇಲ್ಲಿ ತೆರೆಯಲಾಗಿತ್ತು. ಈ ಸ್ನಾತ್ತಕೋತ್ತರ ಕೇಂದ್ರವೇ ಮುಂದೆ ಬೆಳೆದು ವಿಶ್ವವಿದ್ಯಾಲಯವಾಗಿ ರೂಪು ಪಡೆಯಿತು. ಈಗಿನ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಸರ್ಕಾರಿ ಮತ್ತು ಖಾಸಗಿ ಹೀಗೆ ಒಟ್ಟು ೧೨೦ ಕಾಲೇಜುಗಳು ಸೇರಿವೆ. ವಿಶ್ವವಿದ್ಯಾಲಯವು ೨೫ ವಿಭಾಗಗಳನ್ನು ಹೊಂದಿದ್ದು ೩೩ ವಿಷಯಗಳಲ್ಲಿ ಶಿಕ್ಷಣ ನೀಡುತ್ತಿದೆ. ೪೧,೮೭೦ ಮಂದಿ ಸ್ನಾತಕ (ಪದವಿ) ವಿದ್ಯಾರ್ಥಿಗಳು, ೩೩೩೨ ಮಂದಿ ಸ್ನಾತ್ತಕೋತ್ತರ ವಿದ್ಯಾರ್ಥಿಗಳು ಅಧ್ಯಯನ ನಡೆಸುತ್ತಿದ್ದಾರೆ. (೨೦೦೬) ಶೀಘ್ರಗತಿಯಲ್ಲಿ ವಿಶ್ವವಿದ್ಯಾಲಯ ಬೆಳವಣಿಗೆ ಹೊಂದುತ್ತಿದೆ. ವಿಶ್ವವಿದ್ಯಾಲಯದ ಧನಸಹಾಯ ಆಯೋಗ ನ್ಯಾಕ್ ೨೦೦೦ದಲ್ಲಿ ಈ ವಿಶ್ವವಿದ್ಯಾಲಯವನ್ನು ೪ ದರ್ಜೆಯೆಂದು ಪರಿಗಣಿಸಿತು.

೪. ಕುವೆಂಪು ವಿಶ್ವವಿದ್ಯಾಲಯ

೫ನೇ ಪಂಚವಾರ್ಷಿಕ ಯೋಜನೆಯಲ್ಲಿ ವಿಶ್ವವಿದ್ಯಾಲಯ ಧನಸಹಾಯದ ಆಯೋಗದ ನೆರವಿನಿಂದ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ಸ್ನಾತಕೋತ್ತರ ಶಿಕ್ಷಣದ ಸೌಲಭ್ಯವನ್ನು ವಿಸ್ತರಿಸುವ ಉದ್ದೇಶದಿಂದ ಶಿವಮೊಗ್ಗದ ಬಿ.ಆರ್. ಪ್ರಾಜೆಕ್ಟನಲ್ಲಿ ಸ್ನಾತಕೋತ್ತರ ಕೇಂದ್ರವನ್ನು ಆರಂಭಿಸಿತು. (೧೯೭೩ ಸೆಪ್ಟಂಬರ್೫) ಆಗ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರಾಗಿದ್ದ ಎ.ಆರ್. ಬದರಿನಾರಾಯಣ ಹಾಗೂ ಮೈಸೂರು ವಿಶ್ವವಿದ್ಯಾಲಯ ಕುಲಪತಿಗಳಾಗಿದ್ದ ದೇ. ಜವರೇಗೌಡ ಈ ಸ್ನಾತಕೋತ್ತರ ಕೇಂದ್ರವನ್ನು ಆರಂಭಿಸಲು ವಿಶೇಷವಾಗಿ ಶ್ರಮಿಸಿದರು. ಪ್ರಾರಂಭದಲ್ಲಿ ಈ ಕೇಂದ್ರದಲ್ಲಿ ಕನ್ನಡ, ಕೈಗಾರಿಕಾ, ರಸಾಯನಶಾಸ್ತ್ರ, ಅರ್ಥಶಾಸ್ತ್ರ ಮತ್ತು ಗಣಿತಶಾಸ್ತ್ರ ವಿಭಾಗಗಳನ್ನು ಆರಂಭಿಸಲಾಯಿತು. ವಿಶ್ವವಿದ್ಯಾಲಯ ಸ್ಥಾಪನೆ ಕುರಿತಂತೆ ಟಿ.ಆರ್. ಜಯರಾಮನ್ ಆಯೋಗದ ವರದಿಯನ್ನು ಒಪ್ಪಿಕೊಂಡು ಕರ್ನಾಟಕ ಸರ್ಕಾರ ಈ ವಿಶ್ವವಿದ್ಯಾಲಯವನ್ನು ೧೯೮೭ ಜೂನ್ ೨೯ರಂದು ಸ್ಥಾಪಿಸಿತು.

ಈ ವಿಶ್ವವಿದ್ಯಾಲಯದ ಆವರಣಕ್ಕೆ 'ಜ್ಞಾನ ಸಹ್ಯಾದ್ರಿ' ಎಂದು ನಾಮಕರಣ ಮಾಡಲಾಗಿದೆ. ಇದರ ವ್ಯಾಪ್ತಿಯಲ್ಲಿ ೧೨೩ ಕಾಲೇಜುಗಳು ಸೇರಿವೆ. ಇವುಗಳಲ್ಲಿ ೨೮ ಸರ್ಕಾರಿ ಕಾಲೇಜುಗಳು ೨೯ ಅನುದಾನ ಕಾಲೇಜುಗಳು ಮತ್ತು ೬೨ ಅನುದಾನ ರಹಿತ ಕಾಲೇಜುಗಳು ಸಂಯೋಜಿತವಾಗಿದೆ. ಕಲಾ, ವಿಜ್ಞಾನ, ವಾಣಿಜ್ಯ ಶಿಕ್ಷಣ ಕಾನೂನು ಮತ್ತು ಇಂಜಿನಿಯರಿಂಗ್ ನಿಕಾಯಗಳಿಗೆ ಸೇರಿದ ೨೭ ವಿಷಯಗಳಲ್ಲಿ ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನೆಗೆ ಅವಕಾಶ ಕಲ್ಪಿಸಲಾಗಿದೆ. ಕಲಾ ನಿಕಾಯದಲ್ಲಿ ೫ ಭಾಷಾವಿಭಾಗಗಳು ಮತ್ತು ೪ ಸಮಾಜ ವಿಜ್ಞಾನ ವಿಭಾಗಳಿವೆ. ಕನ್ನಡ ವಿಭಾಗವವನ್ನು

ಕನ್ನಡ ಅಧ್ಯಯನ ಸಂಸ್ಥೆಯಾಗಿ ಅಭಿವೃದ್ಧಿ ಪಡಿಸಲಾಗಿದ್ದು. ಇದಕ್ಕೆ 'ಕನ್ನಡ ಭಾರತಿ' ಎಂದು ನಾಮಕರಣ ಮಾಡಲಾಗಿದೆ. ಜಾನಪದ ಆಧುನಿಕ ಸಾಹಿತ್ಯ, ಸಾಹಿತ್ಯತತ್ವ ಮತ್ತು ವಿಮರ್ಶೆ ಹಾಗೂ ತೌಲನಿಕ ಅಧ್ಯಯನ ವಿಷಯಗಳಲ್ಲಿ ವಿಶೇಷ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿದೆ. ಜಾನಪದ ವಸ್ತುಸಂಗ್ರಹಾಲಯ ಮತ್ತು ಕನ್ನಡ ಗಣಕ ಕೇಂದ್ರವನ್ನು ಕನ್ನಡ ಭಾರತಿ ಒಳಗೊಂಡಿದೆ. ಇನ್ನೂ ಇತರ ವಿಷಯವಾದ ರಾಜ್ಯಶಾಸ್ತ್ರ ವಿಭಾಗದಲ್ಲಿ ಅಬ್ದುಲ್ ನಜೀರ್ ಸಾಬ್ ಪೀಠ, ಅಂಬೇಡ್ಕರ್ ಅಧ್ಯಯನಕೆಂದ್ರ ಹಾಗೂ ಶಾಂತವೇರಿ ಗೋಪಾಲಗೌಡ ಪೀಠಗಳು ಕಾರ್ಯನಿರ್ವಹಿಸುತ್ತಿವೆ. ಅನೇಕ ದತ್ತಿ ಉಪನ್ಯಾಸಗಳನ್ನು ವಿಶ್ವವಿದ್ಯಾಲಯವು ಏರ್ಪಡಿಸಿವೆ.

ಮೈಸೂರು ವಿಶ್ವವಿದ್ಯಾಲಯ ದಾವಣಗೆರೆಯಲ್ಲಿ ಆರಂಭಮಾಡಿದ ಸ್ನಾತಕೋತ್ತರ ಕೇಂದ್ರ (೧೯೭೯) ಈ ವಿಶ್ವವಿದ್ಯಾಲಕ್ಕೆ ಸೇರಿದೆ. ಇತ್ತೀಚೆಗೆ ವಿಶ್ವವಿದ್ಯಾಲಯದಲ್ಲಿ ಕನ್ನಡ, ಇಂಗ್ಲಿಷ್, ಹಿಂದಿ, ಸಂಸ್ಕೃತ, ಉರ್ದು, ಇತಿಹಾಸ ಮತ್ತು ಪ್ರಾಕ್ತನ ಶಾಸ್ತ್ರ ಈ ವಿಷಯಗಳಲ್ಲಿ ಸ್ನಾತಕೋತ್ತರ ದೂರ ಶಿಕ್ಷಣ ಕೊರ್ಸುಗಳು ಆರಂಭಿಸಲಾಗಿದೆ. ಕುವೆಂಪು ವಿಶ್ವವಿದ್ಯಾಲಯದ ವಿಶಿಷ್ಟ ಯೋಜನೆ ಎಂದರೇ 'ಸಾಕ್ಷರತ ಯೋಜನೆ' ೫ ಜನ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವ ಸ್ನಾತಕ ತರಗತಿಯ ವಿದ್ಯಾರ್ಥಿಗಳಿಗೆ ನಿರ್ದಿಷ್ಟ ಅಂಕಗಳನ್ನು ನೀಡುವ ವ್ಯವಸ್ಥೆ ಮಾಡಲಾಗಿದ್ದು ಸ್ನಾತಕೋತ್ತರ ತರಗತಿಗಳಿಗೆ ಈ ಅಂಕಗಳನ್ನು ಪರಿಗಣಿಸಿ ಪ್ರವೇಶ ನೀಡಲಾಗಿದೆ. ಈ ವಿಶಿಷ್ಟ ಯೋಜನೆಯನ್ನು ಇತರ ವಿಶ್ವವಿದ್ಯಾಲಯಗಳಲ್ಲಿ ಅಳವಡಿಸಿಕೊಳ್ಳಲು ಶಿಫಾರಸ್ಸು ಮಾಡಲಾಗಿದೆ.

೫. ತುಮಕೂರು ವಿಶ್ವವಿದ್ಯಾಲಯ

ಈ ವಿಶ್ವವಿದ್ಯಾಲಯವು ೨೦೦೪ರಲ್ಲಿ ಪ್ರಾರಂಭವಾಯಿತು. ಅದುವರೆಗೆ ಈ ವಿಶ್ವವಿದ್ಯಾಲಯ ಬೆಂಗಳೂರು ವಿಶ್ವವಿದ್ಯಾಲಯದ ಅಧಿನ ಕೇಂದ್ರವಾಗಿತ್ತು. ಇತ್ತೀಚೆಗೆ ವಿಶ್ವವಿದ್ಯಾಲಯಲ್ಲಿ, ಕನ್ನಡ, ರಾಜ್ಯಶಾಸ್ತ್ರ, ಇತಿಹಾಸ, ಸಮಾಜಶಾಸ್ತ್ರ ಇಂಗ್ಲಿಷ್ ಮೊದಲಾದ ವಿಷಯಗಳಲ್ಲಿ ಸ್ನಾತಕೋತ್ತರ ವಿಷಯಗಳು ಪ್ರಾರಂಭವಾಗಿದ್ದು ಈ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೆಂದ್ರಗಾಳಾಗಿ ತಿಪಟೂರು, ಚಿಕ್ಕಬಳಪುರ ಮೊದಲಾದವರು ಕಾರ್ಯನಿರ್ವಹಿಸುತ್ತವೆ.

ತುಮಕೂರು ವಿಶ್ವವಿದ್ಯಾಲಯ ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವಾಗಿದ್ದ ತುಮಕೂರು, ೨೦೦೪ರಲ್ಲಿ ಪೂರ್ಣಮಟ್ಟದ ಸ್ವತಂತ್ರ ವಿಶ್ವವಿದ್ಯಾಲಯವಾಗಿ ರೂಪುಗೊಂಡಿತು. ಬೆಂಗಳೂರು ವಿಶ್ವವಿದ್ಯಾಲಯದ ಆಡಳಿತ ಒತ್ತಡ ಕಡಿಮೆ ಗೊಳಿಸಬೇಕೆಂದು ಮತ್ತು ಮಾದರಿ ವಿಶ್ವವಿದ್ಯಾಲಯವಾಗಿ ರೂಪಿಸಬೇಕೆಂಬ ಆಶಯದಿಂದ ತುಮಕೂರು ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು.

ಸ್ನಾತಕೋತ್ತರ ಕೇಂದ್ರವಾಗಿದ್ದಾಗ, ಕನ್ನಡ, ಗಣಿತ, ಇತಿಹಾಸ ಮತ್ತು ವಾಣಿಜ್ಯ ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ಹೊಂದಿದ್ದ ತುಮಕೂರು ವಿಶ್ವವಿದ್ಯಾಲಯ ಈಗ ಒಂಬತ್ತು ಕೋರ್ಸುಗಳನ್ನೇ ಸುಮಾರು ೬೫೦ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿದೆ. ರಾಜಕೀಯ, ವಿಜ್ಞಾನ, ಇಂಗ್ಲಿಷ್, ಅರ್ಥಶಾಸ್ತ್ರ, ಸ್ನಾತಕೋತ್ತರ ಪದವಿ, ಎಂ.ಬಿ.ಎ., ಎಂ.ಎಡ್., ಎಂ.ಎಸ್.ಡಬ್ಲ್ಯು., ಜೀವರಾಸಾಯನ ಶಾಸ್ತ್ರ, ಬಯೋ ಕೆಮಿಸ್ಟ್ರೀ, ಬಿ.ಎಂ.ಎ., ಪದವಿಯೊಂದಿಗೆ ಲೈಬ್ರರಿ ಸೈನ್ಸ್ ಮತ್ತು ಮಾಹಿತಿ ವಿಜ್ಞಾನ ಕೋರ್ಸ್‌ಗಳನ್ನು ಆರಂಭಿಸಿದೆ. ಇದರ ವ್ಯಾಪ್ತಿಯಲ್ಲಿ ೬೦ ಕಾಲೇಜುಗಳು, ನಾಲ್ಕು ಸ್ನಾತಕೋತ್ತರ ಕೇಂದ್ರಗಳು ಕಾರ್ಯನಿರ್ವಹಿಸುತ್ತವೆ.

ಬ. ಉತ್ತರ ಕರ್ನಾಟಕ ವ್ಯಾಪ್ತಿಯಲ್ಲಿರುವ ವಿಶ್ವವಿದ್ಯಾಲಯಗಳು

ಉತ್ತರ ಕರ್ನಾಟಕ ವ್ಯಾಪ್ತಿಯಲ್ಲಿರುವ ವಿಶ್ವವಿದ್ಯಾಲಯಗಳಲ್ಲಿ ಮುಖ್ಯವಾಗಿ ನಾಲ್ಕು ವಿಶ್ವವಿದ್ಯಾಲಗಳನ್ನು ಹೆಸರಿಸಬಹುದು.

೧. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨. ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

೩. ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ

೧. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ದಕ್ಷಿಣ ಕರ್ನಾಟಕದಲ್ಲಿ ಮೈಸೂರು ವಿಶ್ವವಿದ್ಯಾಲಯ ಮೊದಲನೆಯದಾದರೆ ಉತ್ತರ ಕರ್ನಾಟಕದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಮೊದಲನೆಯದು. ಕರ್ನಾಟಕ ರಾಜ್ಯದ ಮುಖ್ಯ ವಿಶ್ವವಿದ್ಯಾಲಯಗಳಲೊಂದು ಹೆಸರು ಪಡೆದಿದೆ. ಧಾರವಾಡದಲ್ಲಿ ಆಡಳಿತ ಕೇಂದ್ರ ಮತ್ತು ಮುಖ್ಯ ಕಾಲೇಜುಗಳನ್ನು ಹೊಂದಿದೆ. ಧಾರಾವಾಡ, ಗದಗ, ಹಾವೇರಿ, ಬಾಗಲಕೋಟೆ, ಬೆಳಗಾವಿ, ಬಿಜಾಪುರ, ಉತ್ತರ ಕನ್ನಡ ಇದರ ಪ್ರಾದೇಶಿಕ ವ್ಯಾಪ್ತಿಯಲ್ಲಿವೆ. ಈ ವಿಶ್ವವಿದ್ಯಾಲಯವು ಮುಂಬಯಿ ರಾಜ್ಯದ ೧೯೪೯ನೆಯ ಕರ್ನಾಟಕ ವಿಶ್ವವಿದ್ಯಾಲಯ ಕಾಯಿದೆ ಪ್ರಕಾರ ೧೯೫೦ ಮಾರ್ಚ್ ೧ರಂದು ಧಾರಾವಾಡದಲ್ಲಿ ಸ್ಥಾಪನೆಯಾಯಿತು.

೧೯೫೬ ನೂತನ ಮೈಸೂರು ರಾಜ್ಯದ ಆಡಳಿತ ಸಮಾವೇಶಗೊಂಡಿತು. ಧಾರಾವಾಡ, ಬೆಳಗಾವಿ, ಬಿಜಾಪುರ ಹಾಗೂ ಉತ್ತರ ಕನ್ನಡ ಜಿಲ್ಲೆಗಳಿಗೆ ಸೀಮಿತವಾಗಿದ್ದ ವಿಶ್ವವಿದ್ಯಾಲಯದ ಕಕ್ಷೆಗೆ ೧೯೫೭ರಲ್ಲಿ ಬಿದರ್, ಗುಲಬರ್ಗಾ, ರಾಯಚೂರು ಜಿಲ್ಲೆಗಳಿಗೂ ೧೯೫೮ ಬಳ್ಳಾರಿ ಜಿಲ್ಲೆಗೂ ವಿಸ್ತರಿಸಿತು. ವಿಶ್ವವಿದ್ಯಾಲಯ ಪ್ರಾರಂಭವಾದಾಗ ಕೇವಲ ೧೧ ಕಾಲೇಜುಗಳನ್ನು ಪಡೆದಿದ್ದ ಕರ್ನಾಟಕ

ವಿಶ್ವವಿದ್ಯಾಲಯವು. ಇಂದು ೧೯ ಸರ್ಕಾರಿ ಕಾಲೇಜು ೧೦೦ ಸರ್ಕಾರಿ ಅನುದಾನಿತ ಕಾಲೇಜುಗಳು ೧೦೦ ಅನುದಾನ ರಹಿತ ಕಾಲೇಜುಗಳು ಒಳಗೊಂಡಿದೆ. ಇದಲ್ಲದೆ ೧೮ ಕಾನೂನು ಕಾಲೇಜುಗಳು ಹೆಚ್ಚಿನ ವಿದ್ಯಾರ್ಥಿಗಳನ್ನು ಪಡೆದಿದೆ. ಸ್ನಾತಕೋತ್ತರ ಶಿಕ್ಷಣ ಹಾಗೂ ಸಂಶೋಧನೆಗೆ ಪೂರಕ ಹಾಗೂ ಸಂಯೋಜಿತ ಕಾಲೇಜುಗಳ ಅಂಗೀಕಾರ ಮತ್ತು ಶಿಕ್ಷಣ ಆಡಳಿತ ಪರೀಕ್ಷೆಗಳ ಮೇಲ್ವಿಚಾರಣೆಯ ಕಾರ್ಯ ಜನಸಾಮಾನ್ಯರಿಗೆ ಜ್ಞಾನ ಪ್ರಸಾರ ಮಾಡುವ ವ್ಯಾಸಂಗ ವಿಸ್ತರಣ ಯೋಜನೆ ಹಾಗೂ ವಿಶೇಷ ತರಬೇತಿ ಕಾರ್ಯಕ್ರಮಗಳ ಮೂಲಕ ಕರ್ನಾಟಕ ವಿಶ್ವವಿದ್ಯಾಲಯ ಈ ಭಾಗದ ಜನತೆಯ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳ ಮಾತೃಸಂಸ್ಥೆಯಾಗಿದೆ.

ಸ್ನಾತಕೋತ್ತರ ಶಿಕ್ಷಣಕ್ಕಾಗಿ ಧಾರವಾಡ, ಬಿಜಾಪುರ ಮತ್ತು ಕಾರವಾರಗಳಲ್ಲಿ ಕೇಂದ್ರಗಳನ್ನು ಪ್ರಾರಂಭಿಸಿದೆ. ಅಲ್ಲದೆ ಇದರ ಪ್ರಾದೇಶಿಕ ವ್ಯಾಪ್ತಿಗೊಳಪಡುವ ಹಲವು ಕಾಲೇಜುಗಳು ಪದವಿ ಪೂರ್ವ ಶಿಕ್ಷಣವನ್ನು ನೀಡುತ್ತಿದ್ದು ವಿಶ್ವವಿದ್ಯಾಲಯ ಪದವಿ ಪರೀಕ್ಷೆಗಳನ್ನು ನಡೆಸುತ್ತಿದೆ. ಕರ್ನಾಟಕ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು ವಿಶ್ವವಿದ್ಯಾಲಯದ ಕಾನೂನು ಕಾಲೇಜು ವಿಶ್ವವಿದ್ಯಾಲಯ ಶಿಕ್ಷಣ ಕಾಲೇಜು ಇವು ವಿಶ್ವವಿದ್ಯಾಲಯದ ಆಂಗಿಕ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತಿವೆ. ಸ್ನಾತಕೋತ್ತರ ಶಿಕ್ಷಣವನ್ನು ನೆರವೇರಿಸಲು ಕನ್ನಡ, ಇಂಗ್ಲಿಷ್, ಸಂಸ್ಕೃತ, ಭೌತಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ತತ್ವ, ವಾಣಿಜ್ಯಶಾಸ್ತ್ರ ಮುಂತಾದ ವಿಭಾಗಗಳನ್ನು ತೆರೆಯಲಾಗಿದೆ. ಈ ಎಲ್ಲಾ ವಿಭಾಗಗಳಲ್ಲಿ ಸ್ನಾತಕೋತ್ತರ ಶಿಕ್ಷಣ ನೀಡುವುದರ ಜೊತೆಗೆ ಸಂಶೋಧನ ಕಾರ್ಯ ವ್ಯವಸ್ಥಿತವಾಗಿ ಸಾಗುತ್ತಿದೆ. ವಿದೇಶಿಯ ವಿದ್ಯಾಭ್ಯಾಸ ವಿಭಾಗದಲ್ಲಿ ಫ್ರೆಂಚ್, ಜರ್ಮನ್ ಮತ್ತು ರಷ್ಯನ್ ಭಾಷೆಗಳ ಅಭ್ಯಾಸಕ್ಕೆ ಅವಕಾಶ ಒದಗಿಸಿದೆ. ಈ ಭಾಷೆಗಳತಲ್ಲಿ ಡಿಪ್ಲೊಮ ಹಾಗೂ ಪದವಿ ಮಟ್ಟದ ಅಭ್ಯಾಸಕ್ಕೆ ವ್ಯವಸ್ಥೆಯಿದೆ. ಪ್ರಾಚೀನ ಭಾರತ ಇತಿಹಾಸ ಮತ್ತು ಸಂಸ್ಕೃತ ವಿಭಾಗದಲ್ಲಿ ಲಿಪಿಶಾಸ್ತ್ರದ ಒಂದು ಸರ್ಟಿಫಿಕೇಟ್ ಕೋರ್ಸ್ ನಡೆಸಲಾಗುತ್ತಿದೆ. ಕನ್ನಡ ವಿಭಾಗದಲ್ಲಿ ಭಾಷಾಶಾಸ್ತ್ರ, ಭಾಷಾಂತರ ವಿಷಯಗಳಲ್ಲಿ ಡಿಪ್ಲೊಮ ತರಗತಿಗಳನ್ನು ತೆರೆಯಲಾಗಿದೆ. ಪದವಿ ಹಾಗೂ ಪದವಿಪೂರ್ವ ಶಿಕ್ಷಣ ಮಟ್ಟದಲ್ಲಿ ಅಪರಾಧಶಾಸ್ತ್ರ ಮತ್ತು ಪೋರೆನ್ಸಿಕ್ ಸೈನ್ಸ್ ಅಭ್ಯಾಸದ ವ್ಯವಸ್ಥೆಯಿದೆ.

ಸಮಗ್ರ ವಚನ ವಾಙ್ಮಯ ಸಂಶೋಧನ ಹಾಗೂ ಪ್ರಕಟಣೆಯ ಯೋಜನೆಯನ್ನು ಕನ್ನಡ ವಿಭಾಗ ಕೈಗೊಂಡು ಸಾವಿರಾರು ಓಲೆಗ್ರಂಥಗಳನ್ನು ಸಂಗ್ರಹಿಸಿ ಪರಿಷ್ಕರಿಸಿ ಈಗಾಗಲೇ ಪ್ರಕಟಿಸಲಾಗಿದೆ. ಶೂನ್ಯ ಸಂಪಾದನೆ ಎಂಬ ಅಧ್ಯಾತ್ಮಿಕ ಗ್ರಂಥವನ್ನು ಆರು ಸಂಪುಟಗಳಲ್ಲಿ ಇಂಗ್ಲಿಷ್‌ಗೆ ಭಾಷಾಂತರಿಸುವ ಯೋಜನೆ ಪೂರ್ಣಗೊಂಡಿದೆ. ಇಷ್ಟಲ್ಲದೆ ಜೈನ ಹಾಗೂ ಬ್ರಾಹ್ಮಣ ಸಾಹಿತ್ಯ ಸಂಶೋಧನ ಕಾರ್ಯವೂ

ಕನ್ನಡ ವಿಭಾಗದಲ್ಲಿ ನಡೆಯುತ್ತಿದೆ. ಭಾಷಾಶಾಸ್ತ್ರ, ಜಾನಪದ, ತೌಲನಿಕ ತತ್ವಶಾಸ್ತ್ರಗಳು ಅಧ್ಯಯನ ವಿಭಾಗದ ಒಂದು ವಿಶೇಷ ಅಂಶವಾಗಿದೆ. ಕನ್ನಡ ವಿಭಾಗವವನ್ನು 'ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ'ವೆಂದು ಕರೆಯಲಾಗಿದೆ. ಇದಲ್ಲದೆ ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿಗೆ ಮೀಸಲಾದ 'ಕರ್ನಾಟಕ ಭಾರತಿ' ಎಂಬ ತ್ರೈಮಾಸಿಕವೂ ವಿಶ್ವವಿದ್ಯಾಲಯದ 'ಬುಲೆಟಿನ್' ಎಂಬ ಮಾಸಿಕ ಪತ್ರಿಕೆಯೂ ಪ್ರಕಟವಾಗುತ್ತಿದೆ.

೨. ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

೧೯೮೦ ಸೆಪ್ಟೆಂಬರ್ ೧೦ರಂದು ಸ್ವತಂತ್ರ ವಿಶ್ವವಿದ್ಯಾಲಯವಾಗಿ ಸ್ಥಾಪನೆಯಾಯಿತು. ಇದಕ್ಕೂ ಮೊದಲು ಕರ್ನಾಟಕ ವಿಶ್ವವಿದ್ಯಾಲಯದ ಅಧೀನದ ಸ್ನಾತಕೋತ್ತರ ಕೇಂದ್ರವನ್ನು ೧೯೭೦ರಲ್ಲಿ ಗುಲಬರ್ಗಾದಲ್ಲಿ ಪ್ರಾರಂಭ ಮಾಡಲಾಗಿತ್ತು. ಕನ್ನಡ, ರಸಾಯನ ವಿಜ್ಞಾನ, ಗಣಿತ ವಿಜ್ಞಾನ, ಇಂಗ್ಲಿಷ್ ಹಾಗೂ ರಾಜ್ಯಶಾಸ್ತ್ರ ಈ ಐದು ವಿಷಯಗಳಲ್ಲಿ ಸ್ನಾತಕೋತ್ತರ ವಿಭಾಗಗಳಿದ್ದವು. ಈಗ ಅದು ೩೪ ವಿಭಾಗಗಳಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯ ವ್ಯಾಪ್ತಿಗೆ ಬೀದರ್, ಬಳ್ಳಾರಿ, ಕೊಪ್ಪಳ ಸೇರುತ್ತದೆ. ವಿಶ್ವವಿದ್ಯಾಲಯದ ಕಕ್ಷೆಯಲ್ಲಿ ೧೪೭ ಕಾಲೇಜುಗಳಿವೆ. ಇವುಗಳಲ್ಲಿ ೩೫ ಕಾಲೇಜುಗಳು ಅನುದಾನ ಪಡೆದಿವೆ. ಇನ್ನುಳಿದ ೧೧೨ ಕಾಲೇಜುಗಳು ಅನುದಾನ ಪಡೆಯದೇ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಎಲ್ಲಾ ಕಾಲೇಜುಗಳಲ್ಲಿ ೪೦.೦೦೦ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. (೨೦೦೩ ಪ್ರಕಾರ) ಬಿದರ್ ರಾಯಚೂರು, ಸಂಡೂರು ಹಾಗೂ ಬಳ್ಳಾರಿಗಳಲ್ಲಿ ಈ ವಿಶ್ವವಿದ್ಯಾಲಯದ ಕಕ್ಷೆಗೆ ಒಳಪಟ್ಟ ಸ್ನಾತಕೋತ್ತರ ಕೇಂದ್ರಗಳಿವೆ. ಶೈಕ್ಷಣಿಕವಾಗಿ ಹಿಂದುಳಿದಿರುವ ಹೈದಾರಾಬಾದ ಕರ್ನಾಟಕ ಪ್ರದೇಶದಲ್ಲಿ ಸ್ಥಾಪನೆಗೊಂಡ ಈ ವಿಶ್ವವಿದ್ಯಾಲಯ ಈಗ ಈ ಭಾಗದ ಜನರ ಬೌದ್ಧಿಕ ಮಟ್ಟವನ್ನು ಹೆಚ್ಚಿಸುವ ಮೂಲಕ ಈ ವಿಭಾಗ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸುತ್ತಿದೆ.

ವಿಶ್ವವಿದ್ಯಾಲಯದಲ್ಲಿ ಆರು ನಿಕಾಯಗಳಿವೆ ಕಲಾ ನಿಕಾಯದಲ್ಲಿ ಕನ್ನಡ, ಇಂಗ್ಲಿಷ್, ಹಿಂದಿ, ಉರ್ದು, ಮರಾಠಿ ಹಾಗೂ ಸಂಸ್ಕೃತ ವಿಭಾಗಗಳಿವೆ. ವಾಣಿಜ್ಯ ಹಾಗೂ ವ್ಯಾಪಾರ ನಿರ್ವಹಣೆ ನಿಕಾಯದಲ್ಲಿ ವಾಣಿಜ್ಯ ಹಾಗೂ ವ್ಯಾಪಾರ ನಿರ್ವಹಣೆ ವಿಭಾಗಗಳಿವೆ. ಶಿಕ್ಷಣ ನಿಕಾಯದಲ್ಲಿ ಶಿಕ್ಷಣ ಹಾಗೂ ದೈಹಿಕಶಿಕ್ಷಣ ವಿಭಾಗಗಳಿವೆ. ಹೀಗೆ ಕಾನೂನು ನಿಕಾಯ, ವಿಜ್ಞಾನ ಹಾಗೂ ತಂತ್ರಜ್ಞಾನ ನಿಕಾಯ ಸಮಾಜ ವಿಜ್ಞಾನ ನಿಕಾಯಗಳನ್ನು ಒಳಗೊಂಡಿರುತ್ತದೆ. ಗುಲಬರ್ಗಾ ವಿಶ್ವವಿದ್ಯಾಲಯ ಜೀವ ತಂತ್ರಜ್ಞಾನ ವಿಭಾಗ ಸೂಕ್ಷ್ಮಾಣುಜೀವ ವಿಜ್ಞಾನ ಹಾಗೂ ಮಹಿಳಾ ಅಧ್ಯಯನ ವಿಭಾಗಗಳನ್ನು ತೆರೆದ ರಾಜ್ಯದ ಪ್ರಪ್ರಥಮ ವಿಶ್ವವಿದ್ಯಾಲಯ ವೆನಿಸಿದೆ. ಈ ವಿಶ್ವವಿದ್ಯಾಲಯದ ಸಂಶೋಧನೆಯ

ಫಲವಾದ ಕಬ್ಬಿನ ಹೊಸತಳಿಯನ್ನು ಈ ಪ್ರದೇಶದಲ್ಲಿ ಈಗ ಬೆಳೆಯಲಾಗುತ್ತಿದೆ. ಬೀದರ್‌ನಲ್ಲಿ ಪ್ರಾರಂಭಗೊಂಡಿರುವ ಸಕ್ಕರೆ, ತಂತ್ರಜ್ಞಾನ ವಿಭಾಗ ಒಂದು ಮಾದರಿ ವಿಭಾಗವಾಗಿ ಬೆಳೆಯುತ್ತಿದೆ. ಈ ವಿಶ್ವವಿದ್ಯಾಯವು ೮೬೦ ಎಕರೆ ವಿಸ್ತಾರವಾದ ಪ್ರದೇಶದಲ್ಲಿ ಸುಸಜ್ಜಿತ ಕಟ್ಟಡಗಳನ್ನು ಹೊಂದಿದೆ.

ಕನ್ನಡ ಅಧ್ಯಯನದ ಸಂಸ್ಥೆ ಮೊದಲು ಸ್ಥಾಪನೆಗೊಂಡು ಈ ವಿಶ್ವವಿದ್ಯಾಲಯದ ದೊಡ್ಡ ವಿಭಾಗವಾಗಿದ್ದು ಈ ಭಾಗದ ಸಾಹಿತ್ಯಿಕ, ಸಾಂಸ್ಕೃತಿಕ ಬೆಳವಣಿಗೆಗೆ ಚಾಲನೆ ನೀಡುತ್ತಬಂದಿದೆ. ಸಂಸ್ಥೆಯಲ್ಲಿ ಹಸ್ತಪ್ರತಿ ಬಂಡಾರವಿದೆ. ಈ ಸಂಸ್ಥೆಯ ಕಟ್ಟಡದಲ್ಲಿಯೇ ಶ್ರೀಗಳಂಗಳಪ್ಪ ಪಾಟೀಲ ಬಸವಾದಿ ಶರಣ ಸಾಹಿತ್ಯ ಕೇಂದ್ರ ಈ ವರೆಗೆ ೧೨ ಗ್ರಂಥಗಳನ್ನು ಪ್ರಕಟಿಸಿದೆ. ಪ್ರಸಾರಾಂಗ ವಿಶ್ವವಿದ್ಯಾಲಯದ ಶೈಕ್ಷಣಿಕ ಪ್ರಗತಿಯ ಮುಖವಾಣಿ ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳ ಶಿಕ್ಷಕರಿಗೂ ಹಳ್ಳಿಯ ಸಾಮಾನ್ಯ ಜನರಿಗೂ ಸಂಬಂಧವೇರ್ಪಡಿಸಿ ಶೈಕ್ಷಣಿಕ ವಾತಾವರಣವನ್ನು ಸ್ಥಾಪಿಸುವಲ್ಲಿ ಇದು ಮಹತ್ವದ ಕಾರ್ಯಮಾಡುತ್ತಿದೆ. ಈವರೆಗೆ ೨೪೦ ಪುಸ್ತಕಗಳನ್ನು ಪ್ರಕಟಿಸಿದೆ. ವಿಶ್ವವಿದ್ಯಾಲಯದಲ್ಲಿ ೧೩ ದತ್ತಿಗಳನ್ನು ಸ್ಥಾಪಿಸಲಾಗಿದೆ. ಪ್ರತಿವರ್ಷ ಈ ದತ್ತಿ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತದೆ. ವಿಶ್ವವಿದ್ಯಾಲಯದ ವತಿಯಿಂದ ಕಲಾಗಂಗಾ ಜ್ಞಾನ, ವಿಜ್ಞಾನಗಂಗಾ ಎಂಬ ಮೂರು ಸಂಶೋಧನೆ ಪತ್ರಿಕೆಗಳನ್ನು ಪ್ರಸಾರಾಂಗ ಪ್ರಕಟಿಸುತ್ತಿದೆ. ಒಂದು ವಾರ್ತಾಪತ್ರವೂ ಪ್ರಕಟವಾಗುತ್ತಿದೆ.

ಹೈದರಾಬಾದ್-ಕರ್ನಾಟಕ ಭಾಗದ ಶ್ರೇಷ್ಠ ಲೇಖಕರಿಗೆ, ಕಥೆಗಾರರಿಗೆ, ಪುಸ್ತಕ ಪ್ರಕಾಶಕರಿಗೆ ಹಾಗೂ ಚಿತ್ರಕಲಾವಿದರಿಗೆ ಪ್ರತಿವರ್ಷ ಕನ್ನಡ ರಾಜ್ಯೋತ್ಸವದ ಅಂಗವಾಗಿ ಪ್ರಶಸ್ತಿ ಪತ್ರ ಹಾಗೂ ಗೌರವಧನ ನೀಡಿ ಪ್ರೋತ್ಸಾಹಿಸುವ ಒಂದು ವಿಶಿಷ್ಟ ಕಾರ್ಯಕ್ರಮವನ್ನು ಪ್ರಸಾರಾಂಗ ನಡೆಸಿಕೊಂಡು ಬರುತ್ತಿದೆ. ಈ ಪದ್ಧತಿಗೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಇಲ್ಲ.

ಸ್ನಾತಕೋತ್ತರ ಕೇಂದ್ರಗಳು ಬಳ್ಳಾರಿ ಸಂಡೂರು, ರಾಯಚೂರು ಹಾಗೂ ಬಿದರ್‌ಗಳಲ್ಲಿ ಸ್ನಾತಕೋತ್ತರ ಕೇಂದ್ರಗಳಿವೆ. ರಾಯಚೂರು ಸಂಡೂರುಗಳಲ್ಲಿ ಕನ್ನಡ ಸ್ನಾತಕೋತ್ತರ ಕೇಂದ್ರಗಳು ಉಳಿದ ಕಡೆ ಗಣಕವಿಜ್ಞಾನ ತಂತ್ರಜ್ಞಾನಕ್ಕೆ ಸಂಬಂಧಿಸಿದ ಸ್ನಾತಕೋತ್ತರ ಇರುವುದನ್ನು ಕಾಣಬಹುದು.

೩. ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ ಕನ್ನಡ ನಾಡು-ನುಡಿ ಸಂಸ್ಕೃತಗಳ ವಿಶೇಷ ಅಧ್ಯಯನಕ್ಕಾಗಿ ೧೯೯೧ರಲ್ಲಿ ಸ್ಥಾಪಿತವಾಯಿತು. ಕನ್ನಡ ನಾಡು ನುಡಿಯ ಬಗ್ಗೆ ಕನ್ನಡ ಭಾಷಾ ಪ್ರಸಾರೊಭಿವೃದ್ಧಿಯ ಬಗ್ಗೆ ಆಳವಾದ ಅಧ್ಯಯನ ನಡೆಯಬೇಕೆಂಬ ಮಹೋದ್ದೇಶದಿಂದ ಕರ್ನಾಟಕಸರ್ಕಾರ ಈ

ವಿಶ್ವವಿದ್ಯಾಲಯವನ್ನು ಸ್ಥಾಪಿಸಿದೆ. ಬಳ್ಳಾರಿ ಜಿಲ್ಲೆಯ ಚಾರಿತ್ರೀಕ ಮಹತ್ವವುಳ್ಳ ಹಂಪೆಯ ಪರಿಸರದಲ್ಲಿರುವ ಈ ವಿಶ್ವವಿದ್ಯಾಲಯದ ಆವರಣಕ್ಕೆ 'ವಿದ್ಯಾರಣ್ಯ' ಎಂದು ಹೆಸರಿದೆ.

ವಿಜಯನಗರ ಕಾಲದ ವಿಶಿಷ್ಟ ವಾಸ್ತುಶೈಲಿಯಲ್ಲಿ ಇಲ್ಲಿನ ಕಟ್ಟಡಗಳನ್ನು ರೂಪಿಸಲಾಗಿದೆ. ಸುಮಾರು ೮೫೦ ಎಕರೆ ಪ್ರದೇಶವನ್ನೊಳಗೊಂಡ ವಿಸ್ತಾರವಾದ ಆವರಣವನ್ನು ಹೊಂದಿರುವ ಕನ್ನಡ ವಿಶ್ವವಿದ್ಯಾಲಯ ತಂಜಾವೂರಿನ ತಮಿಳು ವಿಶ್ವವಿದ್ಯಾಲಯ ಹಾಗೂ ಹೈದರಾಬಾದಿನ ತೆಲಗು ವಿಶ್ವವಿದ್ಯಾಲಯಗಳ ಅಂತಃ ಪ್ರೇರಣೆಯಿಂದ ರೂಪುಗೊಂಡಿತು. ಕನ್ನಡದ ಅತ್ಯಂತ ಪ್ರಾಚೀನ ಶಾಸನವೆನಿಸಿದ ಹಲ್ಮಿಡಿ ಶಾಸನ ಮೇಲ್ಭಾಗದ ಮಾದರಿಯ ಕೆತ್ತನೆಯನ್ನು ಬಳಸಿ ವಿಶ್ವವಿದ್ಯಾಲಯ ಲಾಛನವನ್ನು ರೂಪಿಸಲಾಗಿದೆ. 'ಮಾತೆಂಬುದು ಜ್ಯೋತಿರ್ಲಿಂಗ' ಈ ಲಾಛನದ ಧ್ಯೇಯವಾಕ್ಯ. ಕರ್ನಾಟಕ ಸಂಸ್ಕೃತಿಯ ಶೋಧನೆ ಪ್ರಸಾರ ಹಾಗೂ ಸಂರಕ್ಷಣೆ ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಗುರಿ. ಮೇಲ್ನೋಟಕ್ಕೆ ಇದು ಕರ್ನಾಟಕದ ಭೌಗೋಳಿಕ ವ್ಯಾಪ್ತಿಗೆ ಸೀಮಿತ ಅನ್ನಿಸಿದರೂ ಕನ್ನಡ ಭಾಷೆ ಮತ್ತು ಸಂಸ್ಕೃತಿ ಕುರಿತಾದ ಯಾವುದೇ ವಿಷಯಗಳು ಈ ವಿಶ್ವವಿದ್ಯಾಲಯದ ಪರಿಧಿಯಲ್ಲಿ ಬರುತ್ತದೆ. ಸಮಗ್ರ ಕನ್ನಡ ಸಂಸ್ಕೃತಿಯ ಅಧ್ಯಯನ ಸಂಶೋಧನೆ ಹಾಗೂ ಪ್ರಕಟಣೆ ವಿಶ್ವವಿದ್ಯಾಲಯದ ಮುಖ್ಯಗುರಿ. ಇಲ್ಲಿ ಇತರ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಲ್ಲಿರುವಂತೆ ಬೋಧನೆಯೇ ಇಲ್ಲಿ ಮುಖ್ಯವಲ್ಲ. ಸಂಶೋಧನೆಯೇ ಪ್ರಧಾನ ಎಂ.ಫಿಲ್. ಡಿ.ಲಿಟ್, ಹಾಗೂ ಪಿಎಚ್.ಡಿ, ಎಂ.ಎ. ಪಿಎಚ್.ಡಿ ಗಳಂತಹ ಸಂಶೋಧನ ಪದವಿ ತರಗತಿಗಳನ್ನು ನಡೆಸುತ್ತಿದೆ.

ಕನ್ನಡ ನಾಡು-ನುಡಿಗೆ ವಿಶೇಷವಾಗಿ ಶ್ರಮಿಸಿದವರನ್ನು ಗುರುತಿಸಿ 'ನಾಡೋಜ' ಗೌರವ ಪದವಿಯನ್ನು ನೀಡಲಾಗುತ್ತದೆ. ವಿಶ್ವವಿದ್ಯಾಲಯ ಘಟಿಕೋತ್ಸವ ಕಾರ್ಯಕ್ರಮವನ್ನು ನುಡಿಹಬ್ಬ ಎಂದು ಕರೆಯಲಾಗುತ್ತದೆ. ಅಧ್ಯಯನ-ಸಂಶೋಧನೆ ಆಡಳಿತ ಮುಂತಾದ ಉದ್ದೇಶಗಳಿಗೆ ಪ್ರತ್ಯೇಕ ಕಟ್ಟಡಗಳಿದ್ದು ಅವುಗಳನ್ನು ಪರಂಪರೆ ವಿಶಿಷ್ಟ ಹೆಸರುಗಳಿಂದ ಕರೆಯಲಾಗಿದೆ. 'ಕ್ರಿಯಾಶಕ್ತಿ' ಆಡಳಿತ ಕಟ್ಟಡವಾದರೆ, ಕೂಡಲಸಂಗಮ ಭಾಷಾಂತರ ಹಾಗೂ ದ್ರಾವಿಡ ಸಂಸ್ಕೃತ ಅಧ್ಯಯನದ ಕಟ್ಟಡ. ಹೀಗೆ ಗ್ರಂಥಾಲಯಕ್ಕೆ 'ಅಕ್ಷರ'ವೆಂದೂ ವಿಚಾರ ಸಂಕಿರಣ ಸಂಗೀತ, ನೃತ್ಯ ಪ್ರದರ್ಶನ ಸ್ಥಳಕ್ಕೆ 'ಭುವನ ವಿಜಯ'ವೆಂದೂ ನಾಟಕದ ಬಯಲೂರಂಗ ಭೂಮಿಗೆ 'ನವರಂಗ'ವೆಂದೂ ಅಧ್ಯಯನಾಂಗಕ್ಕೆ ಜಕ್ಕಣ ಮಂಟಪವೆಂದು ಹೆಸರಿದೆ. ಅದೇ ರೀತಿ ಕುಲಪತಿಗಳ ನಿವಾಸಕ್ಕೆ 'ಮಾನಸೋಲ್ಲಸ'ವೆಂತಲೂ ಅಧ್ಯಾಪಕ ವಸತಿಗಳಿಗೆ 'ನಿತೋತ್ಸವ' ಎಂದು ಕರೆಯಲಾಗುವುದು. ವಿವಿಧ ಬುಡಕಟ್ಟುಗಳ ವಾಸ್ತು ವಿನ್ಯಾಸವನ್ನು ಅಳವಡಿಸಿ ಕೊಂಡಿರುವ ಅಧ್ಯಯನ ವಿಭಾಗಗಳಿದೆ. ಗಿರಿಸೀಮೆ, ಚಾವಡಿ, ಹಾಲಕ್ಕಿ

ಒಕ್ಕಲಿಗರ ಮನೆ, ದೀವರ ಮನೆ, ಮುಂತಾದ ಹೆಸರುಗಳಿಂದ ಆಯಾ ಬುಡಕಟ್ಟುಗಳ ವಿಶಿಷ್ಟ ಮನೆ ಮಾದರಿಗಳ ಪ್ರತಿ ರೂಪಗಳಿವೆ. ವಿಶ್ವವಿದ್ಯಾಲಯದಲ್ಲಿ ದಾನಿಗಳಿಂದ ದತ್ತಿ ಪಡೆದು ವಿವಿಧ ವಿಷಯ ಅಧ್ಯಯನ ನಡೆಸಲಾಗುತ್ತಿದೆ. ಇವುಗಳಲ್ಲಿ ಶಂಬಾಜೋಶಿ ಅಧ್ಯಯನ ಪೀಠ, ರಾಮ ಮನೋಹರ ಲೋಹಿಯ ಅಧ್ಯಯನ ಪೀಠ, ದಲಿತ ಸಂಸ್ಕೃತಿ ಅಧ್ಯಯನ ಪೀಠ, ಪುರಂದರದಾಸ ಅಧ್ಯಯನ ಪೀಠ, ಕೆ.ವಿ. ತಿರುಪಾಲಪ್ಪ ದತ್ತಿ ಪೀಠ, ಶ್ರೀಮತಿ ಅಲ್ಲಂ ಸುಮಂಗಳಮ್ಮ ಮತ್ತು ಶ್ರೀ ಅಲ್ಲಂ ಕರಿಬಸಪ್ಪ ದತ್ತಿನಿದಿ, ಇಬ್ರಾಹಿಂ ದತ್ತಿನಿಧಿ, ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘ ದತ್ತಿನಿಧಿ ಹಾಗೂ ಹಾಲುಮತ ಅಧ್ಯಯನ ಪೀಠ, ಮುಖ್ಯವಾದವು ಇವುಗಳ ಮೂಲಕ ದತ್ತಿ ಉಪನ್ಯಾಸಗಳು, ಪ್ರಕಟಣೆ, ಶೈಕ್ಷಣಿಕ, ಸಾಂಸ್ಕೃತಿಕ ವ್ಯಕ್ತಿಗಳಿಗೆ ಸನ್ಮಾನ ಮುಂತಾದವನ್ನು ನಡೆಸಲಾಗುತ್ತದೆ.

ದೂರಶಿಕ್ಷಣ ಕಾರ್ಯಕ್ರಮವನ್ನು ವಿಶ್ವವಿದ್ಯಾಲಯ ಹಮ್ಮಿಕೊಂಡಿದ್ದು ಇದರಲ್ಲಿ ಕರ್ನಾಟಕ ಅಧ್ಯಯನ ಕ್ರಿಯಾತ್ಮಕ ಕನ್ನಡ ದಲಿತ ಅಧ್ಯಯನ ಪುರಾತತ್ವ ಸಂಸ್ಕೃತಿ ಮತ್ತು ಪ್ರವಾಸೋಧ್ಯಮ ಮುಂತಾದ ಮೆಟ್ರಿಕ್ ಆನಂತರ ಡಿಪ್ಲೊಮಗಳನ್ನು ನಡೆಸಲಾಗುತ್ತಿದೆ. ಕನ್ನಡ ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿ, ಚರಿತ್ರೆ, ಪುರಾತತ್ವ, ಜಾನಪದ ಬುಡಕಟ್ಟು ಮುಂತಾದವುಗಳನ್ನು ಪ್ರದರ್ಶಿಸುವ ಇಲ್ಲಿನ ವಸ್ತು ಸಂಗ್ರಹಾಲಯವನ್ನು ೧೯೯೫ರಲ್ಲಿ ಆರಂಭಿಸಲಾಯಿತು. 'ಬಿತ್ತರ' ಎಂಬ ಮಾಹಿತಿ ಕೇಂದ್ರ ಕನ್ನಡ ಪತ್ರಿಕೆಗಳಿಗೆ ಅಗತ್ಯ ಮಾಹಿತಿಗಳನ್ನು ಒದಗಿಸುವ ಕಾರ್ಯಕ್ರಮವನ್ನು ಹೊಂದಿದೆ. ವಿಶ್ವವಿದ್ಯಾಲಯದ ಪಾಸಾರಾಂಗ ಕಳೆದ ಹತ್ತು ವರ್ಷಗಳಲ್ಲಿ ೬೦೦ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದೆ. ಜೊತೆಗೆ ನಿಯತಕಾಲಿಕೆಗಳನ್ನು ಪ್ರಕಟಿಸುತ್ತಿದೆ. ಜ್ಞಾನ ಪ್ರಸಾರಕಾರ್ಯಕ್ಕೆ ಅನುಕೂಲವಾಗುವಂತೆ ಮಂಟಪಮಾಲೆ, ವಿಶೇಷ ಉಪನ್ಯಾಸಮಾಲೆ, ಮೂಲಭೂತ ಉಪನ್ಯಾಸಮಾಲೆ ಹಾಗೂ ಉಪೇಶಿಕ ಸಾಹಿತ್ಯ ಮಾಲೆಗಳನ್ನು ಉಪನ್ಯಾಸ ಕಾರ್ಯಕ್ರಮಗಳನ್ನು ಜನಸಾಮಾನ್ಯರಿಗಾಗಿ ವಿಶ್ವವಿದ್ಯಾಲಯ ಆಯೋಜಿಸಿದೆ. 'ನವಸಾಕ್ಷರಮಾಲೆ' ಅಕ್ಷರ ಕಲಿಸುವ ಪ್ರಯತ್ನವಾಗಿದೆ. ೨೦೦೧ರಲ್ಲಿ ವಿಶ್ವವಿದ್ಯಾಲಯ ದಶಮಾನೋತ್ಸವನ್ನು ಆಚರಿಸಿಕೊಂಡಿತು. ಗಡಿನಾಡ ಕನ್ನಡ, ಜಲನೆಲ ಸಂರಕ್ಷಣೆ ಮುಂತಾದ ಪ್ರಯತ್ನ ವಿಶ್ವವಿದ್ಯಾಲಯ ನಡೆಸುತ್ತಿದೆ.

ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ಕೇಂದ್ರ

ದೂರಶಿಕ್ಷಣ ಕೇಂದ್ರವು ಕಾರ್ಯಕ್ರಮಗಳನ್ನು ಕನ್ನಡಲ್ಲೇ ನೀಡುವುದರ ಮೂಲಕ ಆಸಕ್ತರೆಲ್ಲರಿಗೂ ಜ್ಞಾನ ಪ್ರಸಾರ ಮಾಡುತ್ತಿದೆ. ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಸಾಂಪ್ರದಾಯಿಕ ಅಧ್ಯಯನ

ಕ್ರಮಗಳೇ ಪ್ರಧಾನವಾದರೆ, ಕನ್ನಡ ವಿಶ್ವವಿದ್ಯಾಲಯದಲ್ಲಿ ಇದಕ್ಕಿಂತ ಭಿನ್ನವಾಗಿ ಅಧ್ಯಯನಗಳನ್ನು ರೂಪಿಸಲಾಗಿಗೆ. ಇತ್ತೀಚಿನ ಸಂಶೋಧನೆಯನ್ನಾಧರಿಸಿ ಪಠ್ಯಕ್ರಮಗಳನ್ನು ರೂಪಿಸಲಾಗಿದೆ.

೧. **ಸ್ನಾತಕೋತ್ತರ ಪದವಿ :** ಕನ್ನಡ, ಚರಿತ್ರೆ, ಪತ್ರಿಕೋದ್ಯಮ ಮತ್ತು ಮಾಧ್ಯಮ ಅಧ್ಯಯನ.

೨. **ಸ್ನಾತಕೋತ್ತರ ಪದವಿ ಡಿಪ್ಲೊಮಾ :** ಕರ್ನಾಟಕ ಅಧ್ಯಯನ, ಕ್ರಿಯಾತ್ಮಕ ಕನ್ನಡ, ದಲಿತ ಅಧ್ಯಯನ, ಪುರಾತತ್ವ, ಸಂಸ್ಕೃತಿ ಹಾಗೂ ಪ್ರವಾಸೋಧ್ಯಮ, ಮಹಿಳಾ ಅಧ್ಯಯನ, ಅಭಿವೃದ್ಧಿ ಸಂವಹನ, ಕರಕುಶಲ ಕಲೆಗಳು, ಜನಪದ ಸಂಗೀತ, ನಾಟಕ ಕಲೆ, ಪಾರಂಪರಿಕ ಜ್ಞಾನ, ಬುಡಕಟ್ಟು ಅಧ್ಯಯನ ಭಾಷಾಂತರ ಅಧ್ಯಯನ, ಕನ್ನಡ ಸಾಹಿತ್ಯ, ದ್ರಾವಿಡ ಅಧ್ಯಯನ, ಶಾಸನ ಶಾಸ್ತ್ರ ಅಧ್ಯಯನ.

೩. **ಡಿಪ್ಲೊಮಾ :** ಆಡಳಿತ ಕನ್ನಡ, ಜನಪದಕಲೆಗಳು, ಮಾಹಿತಿ ಸಂವಹನ ಮತ್ತು ತಂತ್ರಜ್ಞಾನ ಕುವೆಂಪು ಅಧ್ಯಯನ. ಸರ್ಟಿಫಿಕೆಟ್ ಕೋರ್ಸ್ ಸಂಶೋಧನ ವಿಧಾನ, ತಮಿಳು ಭಾಷೆ, ತೆಲುಗು ಬಾಷೆ, ಮಲೆಯಾಳಂ ಭಾಷೆ.

೪. ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ

ರಾಜ್ಯದ ಪ್ರಥಮ ಮಹಿಳಾ ವಿಶ್ವವಿದ್ಯಾಲಯ ೨೦೦೩ರಲ್ಲಿ ಬಿಜಾಪುರದಲ್ಲಿ ಸ್ಥಾಪಿಸಿಗೊಂಡಿತು. ಮಹಿಳೆಯರಿಗೆ ಉನ್ನತ ಶಿಕ್ಷಣವನ್ನು ನೀಡುವುದು ಇದರ ಮೂಲಕ ಮಹಿಳಾ ಸಬಲೀಕರಣ ಮತ್ತು ವಿಮೋಚಜನೆ ಸಾಧಿಸುವುದು ವಿಶ್ವವಿದ್ಯಾಲಯದ ಗುರಿ. ದೇಶದಲ್ಲೇ ವಿಭಿನ್ನ ಮಹಿಳಾ ವಿಶ್ವವಿದ್ಯಾಲಯ ಮಾಡಬೇಕೆಂದು ವಿಶ್ವವಿದ್ಯಾಲಯವನ್ನಾಗಿ ಮಾಡಬೇಕೆಂಬ ಉದ್ದೇಶದಿಂದ ಮಹಿಳಾ ವಿಶ್ವವಿದ್ಯಾಲಯವನ್ನು ಆರಂಭಿಸಲಾಗಿದೆ.

ಮಹಿಳಾ ವಿಶ್ವವಿದ್ಯಾಲಯ ಪಠ್ಯಪುಸ್ತಕ ರಚನೆಯಲ್ಲಿಯೂ ತನ್ನ ತನವನ್ನು ತೋರಿಸುತ್ತಿದೆ. ಪಠ್ಯಪುಸ್ತಕದಲ್ಲಿ ಮಹಿಳೆಗೆ ಹೆಚ್ಚಿನ ಅಧ್ಯತದೆ ನೀಡಲಾಗುತ್ತದೆ. ತರಗತಿಯೊಳಗೆ ಪಾಠಕ್ಕೆ ನೀಡುವಷ್ಟು ಮಹತ್ವವನ್ನು ಪ್ರಯೋಗಕ್ಕೂ ನೀಡಲಾಗುವುದು. ಕೊಠಡಿಲ್ಲಿ ಕಲಿತದನ್ನ ಕ್ಷೇತ್ರಕ್ಕೆ ಹೋಗಿ ಪ್ರಾಯೋಗಿಕವಾಗಿ ಕಲಿಯುವುದನ್ನು ಇಲ್ಲಿ ಕಲಿಸುವುದು. ಇಲ್ಲಿನ ವಿದ್ಯಾರ್ಥಿನಿಯೂ ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯಗಳ ಜೊತೆ ಸಂಬಂಧ ವಿರಿಸಿಕೊಳ್ಳಲು ಅನುಕೂಲವಾಗಲಿ ಎನ್ನುವ ಕಾರಣಕ್ಕಾಗಿಯೇ ಕ್ರೆಡಿಟ್ ಸಿಸ್ಟಮ್ ತರಲಾಗಿದೆ. ಸಾಂಪ್ರದಾಯಿಕ ವಿಶ್ವವಿದ್ಯಾಲಗಳ ರೀತಿಯಲ್ಲಿ ಫಲಿತಾಂಶವನ್ನು ನೀಡದ ಗ್ರೇಡ್ ಪಾಯಿಂಟ್ ಆಧಾರದ ಮೇಲೆ ನೀಡಲಾಗುತ್ತದೆ.

೫. ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾಲಯಗಳು

ಮೈಸೂರು ನಗರದ ಮಾನಸಗಂಗೋತ್ರಿ ಆವರಣದಲ್ಲಿರುವ ಒಂದು ದೂರಶಿಕ್ಷಣ ವಿಶ್ವವಿದ್ಯಾಲಯ ೧೯೬೯ರಿಂದ ೯೬ರವರೆಗೆ ಮೈಸೂರು ವಿಶ್ವವಿದ್ಯಾಲಯದ ಅಂಗ ಸಂಸ್ಥೆಯಾಗಿತ್ತು.

ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯನ್ನು ೧೯೮೬ರಲ್ಲಿ ಉನ್ನತೀಕರಿಸಿ ಸ್ಥಾಪಿಸಲಾಗಿದೆ. ಆರಂಭದಲ್ಲಿ ಅಂಚೆ ಬೋಧನೆ ಮೂಲಕ ಬಿ.ಎ., ಬಿ.ಕಾಂ., ಎಂ.ಎ., ಎಂ.ಕಾಂ. ಮತ್ತು ಇತರ ಶಿಕ್ಷಣಗಳನ್ನು ನೀಡುತ್ತಿತ್ತು. ನವದೆಹಲಿಯಲ್ಲಿ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ ಸ್ಥಾಪಿತವಾದ ಮೇಲೆ ದೂರಶಿಕ್ಷಣ ಕ್ಷೇತ್ರಕಾರ್ಯದಲ್ಲಿ ಅನೇಕ ಬದಲಾವಣೆಗಳಾದವು. ಇದರ ಫಲವಾಗಿ ಅಂಚೆ ಮತ್ತು ಬೋಧನೆ ವಿಧಾನದಿಂದ ದೂರಶಿಕ್ಷಣ ವಿಧಾನಕ್ಕೆ ಭೋದನೆಯನ್ನು ಬದಲಾಯಿಸಿ ಕೊಳ್ಳಲಾಯಿತು. ಕರ್ನಾಟಕದ ಶೈಕ್ಷಣಿಕ ಅಗತ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ೧೯೯೬ ಜೂನ್ ೨೬ರಂದು ಈ ವಿಶ್ವವಿದ್ಯಾಲಯವು ಸ್ಥಾಪನೆಯಾಯಿತು.

ಈ ವಿಶ್ವವಿದ್ಯಾಲಯದ ಮುಖ್ಯಧ್ಯೇಯಗಳಾಗಿ ವಿದ್ಯಾರ್ಥಿಗಳಿಗೆ ಅವರ ಕಲಿಕಾ ವೇಗಕ್ಕೆ ಅನುಗುಣವಾಗಿ ಮನೆ ಬಾಗಿಲಿಗೆ ಉನ್ನತ ಶಿಕ್ಷಣವನ್ನು ನೀಡುವುದು. ವಯೋಮಾನದ ಆಧಾರದ ಮೇಲೆ ಪ್ರತಿಯೊಬ್ಬರಿಗೂ ಶಿಕ್ಷಣವನ್ನು ನೀಡುವುದು. ವೃತ್ತಿಪರತೆ ಮತ್ತು ವೃತ್ತಿ ನೈಪುಣ್ಯ ತಂದು ಕೊಡುವ ಅನುಕೂಲಕ್ಕೆ ಅನುಗುಣವಾಗಿ ಅಧ್ಯಯನ ಮಾಡುವ ಅವಕಾಶ ಒದಗಿಸುವುದು. ಪೂರ್ಣಕಾಲಿಕ ವಿದ್ಯಾರ್ಥಿಗಳಂತೆ ಅಧ್ಯಯನ ಮುಂದುವರಿಸಲು ಸಾಧ್ಯವಾಗದ ಉದ್ಯೋಗಸ್ಥರಿಗೆ, ಗ್ರಾಮಾಂತರ ಪ್ರದೇಶದ ಜನರಿಗೆ ಶಿಕ್ಷಣ ನೀಡುವುದು. ಈ ವಿಶ್ವವಿದ್ಯಾಲಯದ ಧ್ಯೇಯವಾಗಿದೆ. ಇದರ ಜೊತೆಗೆ ಆಧುನಿಕ ಮಾಹಿತಿ ತಂತ್ರಜ್ಞಾನದ ಬೆಳವಣಿಗೆಗಳನ್ನು ಅನುಸರಿಸಿ ಹೊಸ ಶಿಕ್ಷಣ ತೆರೆಯವುದು. ಈ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ನೀಡುವ ಮುಖ್ಯಕೊರ್ಸುಗಳಲ್ಲಿ ಕನ್ನಡ ಸಾಹಿತ್ಯವು ಒಂದಾಗಿದೆ. ಈ ಗಾಗಾಲೇ ಕರ್ನಾಟಕದ ಹಲವು ಜಿಲ್ಲೆ ಮತ್ತು ತಾಲೂಕುಗಳಲ್ಲಿ ೫೭ ಅಧ್ಯಯನ ಕೇಂದ್ರಗಳು ಸ್ಥಾಪಿತವಾಗಿದ್ದು ಕಾರ್ಯನಿರತವಾಗಿವೆ. ಹೊರ ರಾಜ್ಯದಲ್ಲಿ ಸಹಾ ೪ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಿದೆ. ಶಿಕ್ಷಣ ವಿಭಾಗಕ್ಕೆ ಸಂಬಂಧಿಸಿದಂತೆ ಬಿ.ಎಡ್. ಶಿಕ್ಷಣ ಕ್ರಮಕ್ಕೆ ೫ ಅಧ್ಯಯನ ಕೇಂದ್ರಗಳು, ಎಂ.ಎಡ್. ಶಿಕ್ಷಣ ಕ್ರಮಕ್ಕೆ ಮತ್ತು ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ವಿವಿಧ ಶಿಕ್ಷಣಗಳಿಗೆ ಅಧ್ಯಾಪಕ ವಿದ್ಯಾರ್ಥಿಗಳು ಸಂಪರ್ಕ ಕಾರ್ಯಕ್ರಮಗಳನ್ನು ಏರ್ಪಡಿಸಿಲಾಗುತ್ತದೆ. ಪ್ರಸ್ತುತ ಇರುವ ವಿದ್ಯಾರ್ಥಿಗಳ ಸಂಖ್ಯೆ ३೬,೦೦೦ ಆಗಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಅಂತರಾಷ್ಟ್ರೀಯ ಮಟ್ಟದ ಕಾಮನ್‌ವೆಲ್ತ್ ಆಫ್ ಲರ್ನಿಂಗ್ ಕೆನಡ ಸಂಸ್ಥೆಯೊಂದಿಗೆ ಸಹಯೋಗ ಪಡೆದುಕೊಂಡಿದೆ.

ಅಧ್ಯಾಯ ೪

ಕನ್ನಡ ಸ್ನಾತಕೋತ್ತರ ಪದವಿ ಪಠ್ಯಕ್ರಮ

ಶಿಕ್ಷಣ ಒಂದು ಸಂಸ್ಕಾರ ಮಾನವನ ದೇಹಕ್ಕೆ ಮನಸ್ಸಿಗೆ ಬುದ್ಧಿಗೆ ಆತ್ಮಕ್ಕೆ ಒಳ್ಳೆಯ ಸಂಸ್ಕಾರ ದೊರೆಯಬೇಕು. ಇದು ಶಿಕ್ಷಣದ ಶಾಶ್ವತ ಹಾಗೂ ಶ್ರೇಷ್ಠ ಗುರಿ. ಶಿಕ್ಷಣದ ಗುರಿಗಳು ದೇಶ, ಕಾಲಕ್ಕನುಗುಣವಾಗಿ ಅಲ್ಲಿಯ ಸಾಮಾಜಿಕ ರಾಜಕೀಯ ಹಾಗೂ ಆರ್ಥಿಕ ಸ್ಥಿತಿಗತಿ ತಕ್ಕಂತೆ ಹಾಗೂ ಆ ಕಾಲದಲ್ಲಾಗುವ ವಿಜ್ಞಾನ, ತಂತ್ರಜ್ಞಾನಗಳಲ್ಲಿ ಅವಿಷ್ಕಾರದೊಂದಿಗೆ ಬದಲಾವಣೆಯಾಗುತ್ತ ಹೋಗುತ್ತವೆ. ನಮ್ಮದೇಶದ ಶೈಕ್ಷಣಿಕ ಗುರಿಗಳನ್ನು ಸಾಮಾನ್ಯವಾಗಿ ಐದು ಘಟ್ಟಗಳಲ್ಲಿ ಗುರುತಿಸ ಬಹುದು. ವೇದಕಾಲ, ಬೌದ್ಧಕಾಲ, ಮಹಮ್ಮದಿಯ ಕಾಲ, ಇಂಗ್ಲಿಷ್ ಕಾಲ ಹಾಗೂ ಸ್ವಾತಂತ್ರ್ಯ ನಂತರದ ಕಾಲ.

ವೇದಕಾಲದಲ್ಲಿ ಗುರುಕುಲಗಳಲ್ಲಿ ಬೌದ್ಧರ ಕಾಲದಲ್ಲಿ ವಿಹಾರಗಳಲ್ಲಿ, ಮಹಮದೀಯ ಕಾಲದಲ್ಲಿ ಮುಕ್ತಾಬ-ಮದ್ರಸಗಳಲ್ಲಿ ಮಸೀದಿ-ಮಂದಿರಗಳಲ್ಲಿ ಶಿಕ್ಷಣ ಸಾಗುತ್ತಿತ್ತು. ಒಟ್ಟಾರೆ ಧಾರ್ಮಿಕ ಪರಿಸರದಲ್ಲಿ ಮಕ್ಕಳಿಗೆ ಶಿಕ್ಷಣ ನೀಡಲಾಗುತ್ತಿತ್ತು. ಧರ್ಮ, ಆಧ್ಯಾತ್ಮ, ನೀತಿ ಬೋಧನೆ ಯಲ್ಲದೆ ದೈಹಿಕ ಆರೋಗ್ಯವರ್ಧನೆಯ ಯೋಗಾಸನ, ಪ್ರಾಣಾಯಾಮಗಳಲ್ಲಿ ತರಬೇತಿ ಕೊಡಲಾಗುತ್ತಿತ್ತು. ಇವುಗಳ ಜೊತೆಗೆ ದೈಹಿಕ ಶ್ರಮದ ಕೆಲಸವನ್ನು ವಿದ್ಯಾರ್ಥಿಗಳು ಮಾಡಿ ಶ್ರಮ ಗೌರವ ಭಾವ ತಾಳುತ್ತಿದ್ದರು. ಸ್ವಾವಲಂಬಿ ಜೀವನಸಾಗಿಸಲು ಅದು ಸಹಾಯಕಾರಿಯೂ ಆಗುತ್ತಿತ್ತು.

ಆದರೂ ಪ್ರಾಚೀನ ಹಾಗೂ ಮಧ್ಯಕಾಲದಲ್ಲಿ ಮುಖ್ಯವಾಗಿ ಜ್ಞಾನಾರ್ಜನೆಗೆ ಮಹತ್ವವಿತ್ತು. ಧಾರ್ಮಿಕ ಹಾಗೂ ನೈತಿಕ ಶಿಕ್ಷಣ ಕೊಡುವಲ್ಲಿ ಪ್ರಾರ್ಥನೆ, ಧ್ಯಾನ, ಮೌನಗಳಿಗೆ, ಧರ್ಮಶಾಸ್ತ್ರಗಳ

ಅಧ್ಯಯನಕ್ಕೆ ವಿಶೇಷ ಮಹತ್ವವನ್ನೀಯಲಾಗಿತ್ತು. ಗುರುಗಳ ಜ್ಞಾನನಿಧಿಗಳೂ, ಚಾರಿತ್ರ್ಯವಂತರೂ ಆದ ಋಷಿ ಸದೃಶ ಸಂತರಾಗಿರುತ್ತಿದ್ದರು. ವಿದ್ಯಾರ್ಥಿಗಳನ್ನು ತಮ್ಮ ಪ್ರಭಾವದಿಂದ ಜ್ಞಾನಿಗಳನ್ನಾಗಿ ಶೀಲವಂತರನ್ನಾಗಿ ಬೆಳೆಸುವುದೇ ಮುಖ್ಯಗುರಿಯಾಗಿತ್ತು. ಮಗುವಿನಲ್ಲಿಯ ಸಹಜ ಪ್ರವೃತ್ತಿಗಳನ್ನು ಉದಾರೀಕರಿಸಿ, ಮಾನುವತೆಯನ್ನರಳಿಸುತ್ತ ಅವರು ದಿವ್ಯತೆಯೆಡೆಗೆ ಸಾಗಲು ಸಮರ್ಥರನ್ನಾಗಿಸುವುದು ಶಿಕ್ಷಣದ ಗುರಿಯಾಗಿತ್ತು. ಒಟ್ಟಾರೆ ಜ್ಞಾನಾರ್ಜನೆ, ಜ್ಞಾನವರ್ಧನೆ, ಅಂದಿನ ಶಿಕ್ಷಣದ ಮುಖ್ಯಗುರಿ. ನಂತರ ಬ್ರಿಟಿಷರ ಆಳ್ವಿಕೆಯನಂತರ ಶಿಕ್ಷಣದ ಗುರಿಯಲ್ಲಿ ಮಹತ್ವದ ಬದಲಾವಣೆಯಾಯಿತು. ಅವರಿಗೆ ಭಾರತದಲ್ಲಿ ಆಡಳಿತ ನಡೆಸಲು ತಮ್ಮ ಸರಕಾರಿ ಯಂತ್ರ ಸುಸೂತ್ರವಾಗಿ ನಿರ್ಮಿಸುವದೇ ಇಂಗ್ಲಿಷ್ ಶಿಕ್ಷಣ ಪದ್ಧತಿಯ ಮುಖ್ಯಗುರಿ. ಸ್ವಾತಂತ್ರ್ಯಾನಂತರ ಶಿಕ್ಷಣದ ಪ್ರಕ್ರಿಯೆಯ ವಿವಿಧ ಹಂತಗಳ ಅಂದರೆ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಮತ್ತು ವೃತ್ತಿ ಶಿಕ್ಷಣದ ಗುರಿಗಳು ಬೇರೆ ಬೇರೆಯಾದವು. ಒಟ್ಟಾರೆ ಶಿಕ್ಷಣದ ಅಂತಿಮ ಗುರಿ ವಿದ್ಯಾರ್ಥಿಗಳ ಸರ್ವಾಂಗಿಣ ವಿಕಾಸ.

ವಿಜ್ಞಾನ, ತಂತ್ರಜ್ಞಾನ, ವೈದ್ಯವಿಜ್ಞಾನ ಮುಂತಾದ ವೃತ್ತಿ ಶಿಕ್ಷಣ ಪ್ರಕಾರಗಳ ಜೊತೆಗೆ ಸಾಹಿತ್ಯ ಕಲೆ, ಧಾರ್ಮಿಕ, ಆಧ್ಯಾತ್ಮಿಕ ತತ್ವಜ್ಞಾನದ ಹಿನ್ನಲೆಯಲ್ಲಿ ಪಠ್ಯಕ್ರಮ ಬೆಳೆದು ಬಂದಿದೆ. ಉದಾಹರಣೆಗೆ ಪ್ರಾಚೀನ ಕಾಲದಲ್ಲಿ ವೇದ, ತರ್ಕ, ವ್ಯಾಕರಣ, ವೈದ್ಯ, ಅರ್ಥವಿದ್ಯಾ, ವ್ಯಾಕರಣ ಶಾಸ್ತ್ರ, ಲಲಿತ ಕಲಾಶಾಸ್ತ್ರ, ವೈದ್ಯಶಾಸ್ತ್ರ, ಆಧ್ಯಾತ್ಮಶಾಸ್ತ್ರಗಳಲ್ಲಿ ಶಿಕ್ಷಣವನ್ನು ನೀಡುತ್ತಿದ್ದರು.

ಬ್ರಿಟಿಷರ ದಾಳಿಯನಂತರ ಭಾರತದ ಪ್ರಾಚೀನ ಶಿಕ್ಷಣದ ಪಠ್ಯಕ್ರಮ ಬದಲಾಯಿತು. ಕನ್ನಡ ಸಾಹಿತ್ಯದ ಜೊತೆಗೆ ಇಂಗ್ಲಿಷ್ ವಿಷಯವನ್ನು ಪಠ್ಯದಲ್ಲಿ ಅಳವಡಿಸಿಕೊಳ್ಳುತ್ತಾ ಪಠ್ಯಕ್ರಮ ಬೆಳೆದು ಬಂದಿದೆ. ಉನ್ನತ ಶಿಕ್ಷಣದಲ್ಲಿರುವ ಈ ಪಠ್ಯಕ್ರಮವು ಯಾವ ಸ್ವರೂಪತಾಳಿದೆ. ಎಂಬುದುನ್ನು ತಿಳಿಸುತ್ತದೆ. ಉನ್ನತ ಶಿಕ್ಷಣದ ಸೆಮಿಸ್ಟರ್ ಪದ್ಧತಿಯ ಹಿನ್ನಲೆಯಲ್ಲಿ ಕನ್ನಡ ಸಾಹಿತ್ಯ ಪಠ್ಯಕ್ರಮವನ್ನು ಗಮನಿಸಬಹುದು. ಉನ್ನತ ಶಿಕ್ಷಣವು ಮನುಕುಲವು ಎದುರಿಸುತ್ತಿರುವ ಸಂದಿಗ್ಧವಾದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ನೈತಿಕ, ಮತ್ತು ಆಧ್ಯಾತ್ಮಿಕ ವಿಷಯಗಳ ಬಗ್ಗೆ ಚಿಂತನೆ ನಡೆಸಲು ಅವಕಾಶ ಮಾಡಿಕೊಡುತ್ತದೆ. ವಿಶೇಷ ಜ್ಞಾನ ಮತ್ತು ಕೌಶಲ್ಯಗಳನ್ನು ಹರಡುವುದರ ಮೂಲಕ ಉನ್ನತ ಶಿಕ್ಷಣವು ರಾಷ್ಟ್ರೀಯ ಅಭಿವೃದ್ಧಿಗೆ ತನ್ನ ಕಾಣಿಕೆಯನ್ನು ನೀಡುತ್ತದೆ ಆದ್ದರಿಂದ ನಮ್ಮ ಉಳಿವಿಗೆ ಉನ್ನತ ಶಿಕ್ಷಣ ಒಂದು ನಿರ್ಣಾಯಕ ಅಂಶವಾಗಿದೆ. ಶೈಕ್ಷಣಿಕ ಗೋಪುರದ ತುತ್ತತುದಿಯಲ್ಲಿರುವ ಈ ಶಿಕ್ಷಣವು ನಮ್ಮ ಶೈಕ್ಷಣಿಕ ವ್ಯವಸ್ಥೆಗೆ ಶಿಕ್ಷಕರನ್ನು ಒದಗಿಸುವಂತಹ ಒಂದು ಪ್ರಮುಖ ಪಾತ್ರ ವಹಿಸುತ್ತದೆ.

ಸ್ವಾತಂತ್ರ್ಯದ ನಂತರ ಭಾರತ ಸರಕಾರವು ಸರ್ವೇಪಲ್ಲಿ ರಾಧಾಕೃಷ್ಣನ್ ಅಧ್ಯಕ್ಷತೆಯಲ್ಲಿ ಒಂದು ವಿದ್ಯಾಲಯ ಶಿಕ್ಷಣ ಆಯೋಗ(೧೯೪೮)ವನ್ನು ನೇಮಿಸಿತು. ರಾಷ್ಟ್ರೀಯ ನಿರ್ಮಾಣ ಹಾಗೂ ಸಾಂಸ್ಕೃತಿಕ ಸೇವೆಗಾಗಿ ಉನ್ನತ ಶಿಕ್ಷಣಕ್ಕೆ ನೀಡಿದ ಆಧ್ಯತೆಯು ವಿಶ್ವವಿದ್ಯಾಲಯ ಶಿಕ್ಷಣ ಹಾಗೂ ತರಬೇತಿ ಪಡೆದ ಮಾನವಶಕ್ತಿಯ ಪೂರೈಕೆ ಇವುಗಳ ಸುಧಾರಣೆ ಹಾಗೂ ಸಂಬಂಧ ಕೇಂದ್ರ ಸರಕಾರವು ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತಂದಿತು.

ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ೧೯೭೬-೭೭ರಲ್ಲಿ ವಿದ್ಯಾರ್ಥಿ ಸೇಮಿಸ್ಟರ್ ಪದ್ಧತಿಯು ಜಾರಿಗೆ ಬಂದಿತು. ಆನಂತರ ೧೯೭೭-೭೮ರಲ್ಲಿ ವಿದ್ಯಾರ್ಥಿ ಚಳವಳಿಯಿಂದಾಗಿ ಸೆಮಿಸ್ಟರ್ ಪದ್ಧತಿ ಪದವಿ ತರಗತಿಗಳಿಗೆ ರದ್ದಾಯಿತು. ಸ್ನಾತಕೋತ್ತರ ಮಟ್ಟಕ್ಕೆ ಇಂಜಿನಿಯರಿಂಗ್ ಮತ್ತು ಶಿಕ್ಷಕರ ಕಾಲೇಜಗಳಿಗೆ ಮಾತ್ರ ಸೀಮಿತವಾಯಿತು. ೨೦೦೬-೨೦೦೭ರಲ್ಲಿ ಪದವಿ ತರಗತಿಗಳಿಗೂ ಸೆಮಿಸ್ಟರ್ ಪದ್ಧತಿಯ ಜಾರಿಗೆ ಬಂದಿದೆ.

ಸೆಮಿಸ್ಟರ್‌ನ ಮುಖ್ಯ ಉದ್ದೇಶಗಳು

೧. ಒಂದೊಂದು ಸೆಮಿಸ್ಟರ್ ಒಂದೊಂದು ಸ್ವಯಂಪರಿಪೂರ್ಣಘಟಕ.

೨. ವಿದ್ಯಾರ್ಥಿಯ ವೈಯಕ್ತಿಕ ಆಸಕ್ತಿ ಮತ್ತು ಅವಶ್ಯಕತೆಗಳಿಗನುಗುಣವಾಗಿ ವಿಷಯಗಳ ವರ್ಗೀಕರಣಕ್ಕೆ ಈ ಪದ್ಧತಿಯಲ್ಲಿ ಹೆಚ್ಚು ಅವಕಾಶವಿದೆ.

೩. ವಾರ್ಷಿಕ ಪರೀಕ್ಷೆಗಳಲ್ಲಿ ವಿದ್ಯಾರ್ಥಿಯ ಹೊರಬೇಕಾಗಿದ್ದ ಹೊರೆಯೊಂದಿಗೆ ಹೋಲಿಸಿದಾಗ ಸೆಮಿಸ್ಟರ್ ಪದ್ಧತಿಯಲ್ಲಿ ಈ ಹೊರೆ ಹಗುರವಾಗಿ ವಿದ್ಯಾರ್ಥಿಗಳು ಹೆಚ್ಚು ಸಮರ್ಥವಾಗಿ ಜ್ಞಾನಾರ್ಜನೆ ಮಾಡಲು ಸಾಧ್ಯವಿದೆ.

೪. ವಿದ್ಯಾರ್ಥಿಗಳು ಮತ್ತು ಆಧ್ಯಪಕ ಇಬ್ಬರೂ ಸಮಯದ ಅಗತ್ಯ ಮತ್ತು ಜವಾಬ್ದಾರಿಯ ತಿಳುವಳಿಕೆಯಿಂದ ಕರ್ತವ್ಯನಿರ್ವಹಿಸಲು ಸೆಮಿಸ್ಟರ್ ಪದ್ಧತಿಯು ಪ್ರಚೋದಿಸುತ್ತದೆ.

೫. ಅಧ್ಯಾಪಕನು ಹೆಚ್ಚಾಗಿ ಪೂರಕ ಯೋಜನೆಯೊಂದಿಗೆ ಮತ್ತು ಉತ್ತಮವಾದ ಸಾಧನಗಳೊಂದಿಗೆ ವಿದ್ಯಾರ್ಥಿಗಳಿಗೆ ಪರಿಹಾರ ಸೂಚಿಸುತ್ತ ಪಾಠ ಪ್ರವಚನಗಳಲ್ಲಿ ಅರ್ಥಪೂರ್ಣ ಮಾರ್ಗದರ್ಶನ ಮಾಡಬೇಕು.

೬. ವಿದ್ಯಾರ್ಥಿಗಳು ತಮ್ಮ ಸಾಧನೆಯ ಮಟ್ಟವನ್ನು ವಿಸ್ತರಿಸಿಕೊಳ್ಳಲು ಮತ್ತು ಸೆಮಿಸ್ಟರ್ ಕೋರ್ಸನ್ನು ಸುಲಭವಾಗಿ ತೇರ್ಗಡೆ ಹೊಂದಲು ಸಾಧ್ಯವಿದೆ. ಕೇವಲ ವಾರ್ಷಿಕ ಪರೀಕ್ಷೆ

ಗಳಂತಲ್ಲದೆ ವಿದ್ಯಾರ್ಥಿಗಳು ತಮಗನುಕೂಲವಾದ ರೀತಿಯಲ್ಲಿ ಆತ್ಮವಿಶ್ವಾಸ ಹಾಗೂ ಭರವಸೆಯಿಂದ ಮತ್ತು ಸತತ ಹಾಗೂ ಸಮರ್ಥವಾದ ಮಾರ್ಗದರ್ಶನದಲ್ಲಿ ಪರೀಕ್ಷೆಯನ್ನು ಎದುರಿಸಲು ಸೆಮಿಸ್ಟರ್ ಪದ್ಧತಿಯಲ್ಲಿ ಸಾಧ್ಯವಿದೆ. ಈ ಉದ್ದೇಶಗಳ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯಗಳು ಸೆಮಿಸ್ಟರ್ ಪದ್ಧತಿಯನ್ನು ಜಾರಿಗೆ ತಂದವು. ಒಂದೊಂದು ಸೆಮಿಸ್ಟರ್ ಅವಧಿ ಕೇವಲ ಹದಿನಾರರಿಂದ ಹದಿನೇಂಟು ವಾರಗಳಾಗಿರವುದರಿಂದ ವಿದ್ಯಾರ್ಥಿಗಳಾಗಲಿ ಅಧ್ಯಾಪಕರಾಗಲಿ, ಸಮಯವನ್ನು ವ್ಯರ್ಥಗೊಳಿಸಲು ಅವಕಾಶ ವಿರುವುದಿಲ್ಲ. ಸೆಮಿಸ್ಟರ್ ಪದ್ಧತಿಯು ಇಬ್ಬರನ್ನು ಕಾರ್ಯ ಪ್ರವೃತ್ತರಾಗಲು ಪ್ರಯೋದಿಸುವ ಅಂಶ ಮುಖ್ಯವಾಗಿದೆ ಎಂದು ಬಾವಿಸಲಾಗಿದೆ.

ಈ ಹಿನ್ನಲೆಯಲ್ಲಿ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳ ಪಠ್ಯಕ್ರಮಗಳನ್ನು ಸ್ಥೂಲವಾಗಿ ಇಲ್ಲಿ ವಿವೇಚಿಸಲಾಗಿದೆ ಮೊದಲಿಗೆ ಕುವೆಂಪು ವಿಶ್ವವಿದ್ಯಾಲಯದ ಪಠ್ಯಕ್ರಮ ಚರ್ಚೆಯನ್ನು ಮಾಡಲಾಗಿದೆ.

ಇದು ಕರ್ನಾಟಕದ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಅನುಸರಿಸುವ ಇತ್ತೀಚಿನ ಪಠ್ಯಕ್ರಮಗಳ ಒದು ಮಾದರಿಯಾಗಿದೆ. ಇದನ್ನು ಗಮನಿಸಿದರೆ ಕನ್ನಡ ಸ್ನಾತಕೋತ್ತರ ಅಧ್ಯಯನಗಳು ಸಮಕಾಲೀನತೆಗೆ ಒತ್ತು ಕೊಟ್ಟಿರುವುದು ಕಂಡುಬರುತ್ತದೆ. ತೌಲನಿಕ ಕಾವ್ಯಮೀಮಾಂಸೆ, ಭಾರತೀಯ ಕಾವ್ಯಮೀಮಾಂಸೆ ಮೊದಲಾದ ವಿಷಯಗಳನ್ನು ಪ್ರಧಾನವಾಗಿ ಭಾಷೆಗಳಾದ ಇಂಗ್ಲಿಷ್ ಮತ್ತು ಸಂಸ್ಕೃತಗಳ ಪ್ರಾದೇಶಿಕ ಭಾಷೆ ಕನ್ನಡದ ಮೇಲೆ ಬೀರಿದ ಪ್ರಭಾವದ ಕಾರಣದಿಂದಾಗಿಯೇ ಪಠ್ಯ ಕ್ರಮದಲ್ಲಿ ಅಳವಡಿಸಿರುವುದನ್ನು ನಾವು ಮರೆಯುವಂತಿಲ್ಲ. ಆದರೆ ಇತ್ತೀಚೆಗೆ ವಿಶ್ವವಿದ್ಯಾಲಯಗಳ ಕನ್ನಡ ಪಠ್ಯಕ್ರಮದಲ್ಲಿ ಸೇರ್ಪಡೆಯಾಗುತ್ತಿರುವ ಕಂಪ್ಯೂಟರ್ ಕೋರ್ಸ್ ಬೇರೆಯದೇ ಕಾರಣದಿಂದ ಸೇರಿಕೊಂಡಿದೆ ಎನ್ನುವುದನ್ನು ಗಮನಿಸಬೇಕು. ಮುಖ್ಯವಾಗಿ ವೃತ್ತಿ ಪರತೆಯನ್ನು ವಿದ್ಯಾಭ್ಯಾಸದೊಂದಿಗೆ ತಳುಕುಹಾಕುವ ಕಾರಣಕ್ಕಾಗಿಯೇ ಕಂಪ್ಯೂಟರ್ ಕೋರ್ಸ್ ಅಂತಹ ವಿಷಯವನ್ನು ಅಳವಡಿಸಲಾಗಿದೆ. ಎಂಬುದನ್ನು ಇಲ್ಲಿ ವಿಶೇಷವಾಗಿ ಗಮನಿಸಬೇಕು.

ಕುವೆಂಪು ವಿಶ್ವವಿದ್ಯಾಲಯ

ಈ ವಿಭಾಗದಲ್ಲಿ ವಿದ್ಯಾರ್ಥಿಗಳಿಗೆ ಸಮಗ್ರ ಕನ್ನಡ ಸಾಹಿತ್ಯ ಬೆಳೆದು ಬಂದ ವಿಧಾನವನ್ನು ತಿಳಿಸಲಾಗಿದೆ. ಅದರ ಜೊತೆಗೆ ಜಾನಪದ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದ್ದಾರೆ.

ಮೊದಲನೆಯ ಸೆಮಿಸ್ಟರ್: ಪ್ರಾರಂಭದಲ್ಲಿ ಪ್ರಾಚೀನ ಕನ್ನಡ ಸಾಹಿತ್ಯ, ಭಾಷಾವಿಜ್ಞಾನ ಮತ್ತು ಛಂದಸ್ಸು, ಕನ್ನಡ ಸಾಹಿತ್ಯದ ಹಿನ್ನಲೆ, ಪ್ರೇರಣೆ ಪ್ರಭಾವಗಳು, ಜಾನಪದ ವಿಜ್ಞಾನದ ಮೂಲತತ್ವಗಳು

ಆಧುನಿಕ ಕನ್ನಡ ಶಾಹಿತ್ಯ, ಕಾವ್ಯ, ತೌಲನಿಕ ಸಾಹಿತ್ಯ ತತ್ವಗಳು ಜಾನಪದ ವಿಜ್ಞಾನ ಕನ್ನಡ ಜನಪದ ಸಾಹಿತ್ಯ ಆಧುನಿಕ ಕನ್ನಡ ಸಾಹಿತ್ಯ, ಸಣ್ಣಕತೆ ತೌಲನಿಕ ಸಾಹಿತ್ಯ, ಗ್ರೀಕ್ ಮತ್ತು ಇಂಗ್ಲಿಷ್‌ಕಾವ್ಯ ಇವೆಲ್ಲದರೂ ಸ್ವರೂಪ ಮತ್ತು ಪ್ರಯೋಜನಗಳ ಅಧ್ಯಯನ ಮಾಡಲಾಗುತ್ತದೆ.

ಎರಡನೆಯ ಸೆಮಿಸ್ಟರ್: ಈ ಅಧ್ಯಯನ ಮಧ್ಯಕಾಲೀನ ಕನ್ನಡ ಸಾಹಿತ್ಯ ಕರ್ನಾಟಕ ಸಂಸ್ಕೃತಿ ಅಧ್ಯಯ, ಜಾನಪದ ಅಧ್ಯಯನ ಇತಿಹಾಸ, ಆಧುನಿಕ ಕನ್ನಡ ಕಾವ್ಯ, ತೌಲನಿಕ ಸಾಹಿತ್ಯ ತತ್ವಗಳು ವಿಧಾನಗಳು, ಜಾನಪದ ವಿಜ್ಞಾನ ಕನ್ನಡ ಜನಪದ ಸಾಹಿತ್ಯ ಆಧುನಿಕ ಕನ್ನಡಸಾಹಿತ್ಯ ನಾಟಕ, ಹಾಗೂ ತೌಲನಿಕ ಸಾಹಿತ್ಯ ಗ್ರೀಕ್ ಮತ್ತು ಇಂಗ್ಲಿಷ್ ನಾಟಕ ಇವುಗಳ ಅಧ್ಯಯನ ನಡೆಯುತ್ತದೆ.

ಮೂರನೆಯ ಸೆಮಿಸ್ಟರ್: ಹೊಸಗನ್ನಡ ಸಾಹಿತ್ಯ, ಕಾವ್ಯ, ಸಣ್ಣಕತೆ, ಕಾದಂಬರಿ, ತೌಲನಿಕ ಕಾವ್ಯ ಮಿಮಾಂಸೆ, ಜಾನಪದ ವಿಜ್ಞಾನ ಸಾಹಿತ್ಯ, ಜಾನಪದ ಆಧುನಿಕ ಕನ್ನಡ ಸಾಹಿತ್ಯ ಕಾದಂಬರಿ ಭಾಗ-೧, ತೌಲನಿಕ ಸಾಹಿತ್ಯ ಭಾರತೀಯ ಕಾವ್ಯ ಮತ್ತು ಸಣ್ಣಕತೆ, ಜಾನಪದ ವಿಜ್ಞಾನ ಸಿದ್ಧಾಂತಗಳು. ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆ ಹಾಗೂ ತೌಲನಿಕ ಸಾಹಿತ್ಯ ರಷ್ಯನ್ ಮತ್ತು ಫ್ರೆಂಚ್ ಸಣ್ಣಕತೆ ಇವುಗಳ ಪರಿಚಯ ಮಾಡಲಾಗುವುದು.

ನಾಲ್ಕನೆಯ ಸೆಮಿಸ್ಟರ್: ಈ ಹಂತದಲ್ಲಿ ಹೊಸಗನ್ನಡ ಸಾಹಿತ್ಯ ನಾಟಕ, ವಿಮರ್ಶೆ, ವಿಚಾರ ಸಾಹಿತ್ಯ ಸಾಹಿತ್ಯ ವಿಮರ್ಶೆ, ಜಾನಪದ ವಿಜ್ಞಾನ ಕನ್ನಡ ಸಾಹಿತ್ಯೇತರ ಜಾನಪದ ಭಾಗ-೨, ಆಧುನಿಕ ಕನ್ನಡ ಸಾಹಿತ್ಯ ಕಾದಂಬರಿ ಭಾಗ ಎರಡು ತೌಲನಿಕ ಸಾಹಿತ್ಯ ರಷ್ಯನ್ ಮತ್ತು ಫ್ರೆಂಚ್ ಕಾದಂಬರಿ, ಜಾನಪದ ವಿಜ್ಞಾನ ಈಚಿನ ಪ್ರವೃತ್ತಿಗಳು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರಬಂಧ, ಆತ್ಮಚರಿತ್ರೆ, ಪ್ರವಾಸ ಕಥನ ಅಂಕಣಬರಹ ತೌಲನಿಕ ಸಾಹಿತ್ಯ ಭಾರತೀಯ ಕಾದಂಬರಿ ಮತ್ತು ನಾವು ಇವುಗಳ ಜೊತೆಗೆ ಒಂದು ಪ್ರೌಡ ಪ್ರಂಬಂಧವನ್ನು ಬರೆಯಬೇಕಾಗುತ್ತದೆ.

ಗುಲಬರ್ಗಾ ವಿಶ್ವವಿದ್ಯಾಲಯ

ಗುಲಬರ್ಗಾ ವಿಶ್ವವಿದ್ಯಾಲಯದ ವಿಭಾಗದಲ್ಲಿ ಕನ್ನಡ ಸಮಗ್ರ ಸಾಹಿತ್ಯದ ಜೊತೆಗೆ ವಚನ ಸಾಹಿತ್ಯಕ್ಕೆ ತಮ್ಮ ಪಠ್ಯಕ್ರಮದಲ್ಲಿ ಹೆಚ್ಚಿನ ಮಹತ್ವ ನೀಡಲಾಗಿದೆ.

ಮೊದಲನೆ ಸೆಮಿಸ್ಟರ್ ವಚನ ಸಾಹಿತ್ಯದ ಅರ್ಥ, ವ್ಯಾಪ್ತಿ, ಸ್ವರೂಪ, ಲಕ್ಷಣಗಳು ಹಾಗೂ ವಚನ ಸಾಹಿತ್ಯದ ಉಗಮ ವಿಕಾಸ ಹಿನ್ನಲೆಯನ್ನು ಪಠ್ಯಗಳ ಅಧ್ಯಯನದ ಹಿನ್ನಲೆಯಲ್ಲಿ ತಿಳಿಸಲಾಗಿದೆ. ಇದರ ಜೊತೆಗೆ ಕಾವ್ಯಮಿಮಾಂಸೆ ಛಂದಸ್ಸು ಮತ್ತು ಗ್ರಂಥ ಸಂಪಾದನೆ, ಕರ್ನಾಟಕ ಸಂಸ್ಕೃತಿ

ಹಾಗೂ ಶಾಸನಶಾಸ್ತ್ರ. ಪ್ರಾಚೀನ ಕನ್ನಡ ಸಾಹಿತ್ಯ ಇವುಗಳ ಸ್ಥೂಲಪರಿಚಯವನ್ನು ಮಾಡಿ ಕೊಡಲಾಗುವುದು.

ಎರಡನೆ ಸೆಮಿಸ್ಟರ್ ಈ ಅವಧಿಯಲ್ಲಿ ಮಧ್ಯಕಾಲೀನ ಕನ್ನಡ ಸಾಹಿತ್ಯ ತಾತ್ವಿಕ ಅಧ್ಯಯನ ಪಾಶ್ಚಾತ್ಯ ಕಾವ್ಯಮೀಮಾಂಸೆಯ ತಾತ್ವೀಕ ಅಧ್ಯಯನ ಕನ್ನಡ ಮಹಾಕಾವ್ಯಗಳ ವ್ಯಾಕರಣ ಮತ್ತು ಆಧುನಿಕ ಭಾಷಾವಿಜ್ಞಾನ ಇವುಗಳನ್ನು ಅಭ್ಯಾಸ ಮಾಡಲುಗುವುದು.

ಮೂರನೆಯ ಸೆಮಿಸ್ಟರ್ ಹೊಸಗನ್ನಡ ಸಾಹಿತ್ಯ ತೌಲನಿಕ ಭಾಷಾ ವಿಜ್ಞಾನ ಮತ್ತು ನಿಘಂಟುಶಾಸ್ತ್ರ, ಕನ್ನಡ ಸಾಹಿತ್ಯ ಅಂತರ್ ಶಿಸ್ತಿಯ ಅಧ್ಯಯನ ಆಧುನಿಕ ಸಾಹಿತ್ಯ ಪ್ರಕಾರವೊಂದರ ವಿಶೇಷ ಅಧ್ಯಯನ ಮಾಡುವುದು ಈ ಅವಧಿಯ ಪಠ್ಯಕ್ರಮವಾಗಿದೆ.

ನಾಲ್ಕನೆಯ ಸೆಮಿಸ್ಟರ್: ಸಾಹಿತ್ಯ ಹಾಗೂ ಭಾಷಿಕ ಪ್ರಕಾರಗಳ ಅಧ್ಯಯನ (ಇಲ್ಲಿ ಜಾನಪದ ಜನಪದಗಳನ್ನು ಮಾತ್ರ), ಕನ್ನಡ ರಂಗಭೂಮಿ (ಹುಟ್ಟುಬೆಳವಣಿಗೆ) ಸ್ವರವಚನ ತತ್ವದ ಸಾಹಿತ್ಯ, ಭಾಷಾಂತರ ಅಧ್ಯಯನ ಇವುಗಳ ಜೊತೆಗೆ ಕಂಪ್ಯೂಟರ್ ಕೋರ್ಸ್ ಇದು ಈ ಅವಧಿಯ ಪಠ್ಯಕ್ರಮ.

ಕರ್ನಾಟಕ ವಿಶ್ವವಿದ್ಯಾಲಯ

ಈ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ಜಾನಪದ ಅಧ್ಯಯನ ಮತ್ತು ಕನ್ನಡ ಸಾಹಿತ್ಯ ಪಠ್ಯಕ್ರಮವನ್ನು ಸಿದ್ಧಪಡಿಸಿದೆ. ಕೇವಲ ಕನ್ನಡ ಸಾಹಿತ್ಯ ವಿಷಯಗಳ ಪಠ್ಯಕ್ರಮವನ್ನು ಮಾತ್ರ ಸಂಕ್ಷಿಪ್ತವಾಗಿ ವಿಮರ್ಶಿಸಲಾಗುತ್ತದೆ.

ಮೊದಲನೆಯ ಸೆಮಿಸ್ಟರ್: ಪ್ರಾಚೀನ ಕನ್ನಡ ಸಾಹಿತ್ಯ ಅಧ್ಯಯನ (ಆಯ್ದುಪಠ್ಯಗಳು) ತೌಲನಿಕ ಕಾವ್ಯಮೀಮಾಂಸೆ ಮತ್ತು ಕನ್ನಡ ಸಾಹಿತ್ಯ ವಿಮರ್ಶೆಯ ಅಧ್ಯಯನ ಕನ್ನಡ ಸಾಹಿತ್ಯ ಚರಿತ್ರೆಯ ಅಧ್ಯಯನ-೧ (ಪ್ರಾಚೀನ ಮತ್ತು ಮಧ್ಯಕಾಲೀನ) ಐಚ್ಛಿಕ ವಿಷಯಗಳಾಗಿ ಪ್ರಾಚೀನ, ಮಧ್ಯಕಾಲಿನ ಕನ್ನಡ ಸಾಹಿತ್ಯ ರೂಪಗಳ ಅನ್ವಯ ಸೃಜನ ಸಾಹಿತ್ಯ ಅಧ್ಯಯನ ಸಾಹಿತ್ಯಿಕ ಕೃತಿಗಳ ಸಾಂಸ್ಕೃತಿಕ ಅಧ್ಯಯದ ಸಾಮಾನ್ಯ ಭಾಷಾ ವಿಜ್ಞಾನ ಅಧ್ಯಯನ, ಇಂಗ್ಲಿಷ್ ಹಿಂದಿ, ಮರಾಠಿ, ಸಂಸ್ಕೃತ, ಭಾಷಾ ವಿಜ್ಞಾನ ಇತ್ಯಾದಿ ವಿಷಯಗಳ ಐಚ್ಛಿಕ ಪತ್ರಿಕೆಗಳ ಅಧ್ಯಯನ ಮಾಡಲಾಗುವುದು.

ದ್ವಿತೀಯ ಸೆಮಿಸ್ಟರ್: ನಡುಗನ್ನಡ ಸಾಹಿತ್ಯ ಅಧ್ಯಯನ (ಆಯ್ದುಪಠ್ಯಗಳು) ಕನ್ನಡ ಸಾಹಿತ್ಯ ಚರಿತ್ರೆಯ ಅಧ್ಯಯನ-೨(ಆಧುನಿಕ ಕಾಲ) ಕರ್ನಾಟಕ ಸಂಸ್ಕೃತಿ ಅಧ್ಯಯನ, ಇವುಗಳ ಜೊತೆಗೆ ಐಚ್ಛಿಕ ವಿಷಯಗಳಾಗಿ ವಿಶೇಷ ಕವಿ ಸಾಹಿತ್ಯಿಯ ಅಧ್ಯಯನ (ಆಯ್ದುಪಠ್ಯಗಳು) ಧಾರ್ಮಿಕ ಸಾಹಿತ್ಯ

ಅಧ್ಯಯನ, ಆಧುನಿಕ ಕನ್ನಡ ಸಾಹಿತ್ಯ ರೂಪಗಳ ಅಧ್ಯಯನದ ಕನ್ನಡ ಜನಪದ ಸಾಹಿತ್ಯ ಅಧ್ಯಯನ, ಆಧುನಿಕ ಕನ್ನಡ ಸಾಹಿತ್ಯ ರೂಪಗಳ ಅಧ್ಯಯನ, ಕನ್ನಡ ಜನಪದ ಸಾಹಿತ್ಯ ಅಧ್ಯಯನ, ಇವುಗಳ ಜೊತೆಗೆ ಇಂಗ್ಲಿಷ್ ಹಿಂದಿ, ಮರಾಠಿ, ಸಂಸ್ಕೃತ, ಭಾಷಾ ವಿಜ್ಞಾನ ಇತ್ಯಾದಿ ವಿಷಯಗಳ ಐಚ್ಛಿಕ ಪತ್ರಿಕೆಯಿರುತ್ತದೆ.

ಮೂರನೆಯ ಸೆಮಿಸ್ಟ್ರರ್: ಆಧುನಿಕ ಕನ್ನಡ ಸಾಹಿತ್ಯ ಅಧ್ಯಯನ-೧ ತೌಲನಿಕ ಕನ್ನಡ ವ್ಯಾಕರಣ ಅಧ್ಯಯನ, ಛಂದಸ್ಸು ಮತ್ತು ಗ್ರಂಥ ಸಂಪಾದನೆ ಅಧ್ಯಯನ. ಈ ವಿಷಯಗಳ ಜೊತೆಗೆ ಐಚ್ಛಿಕ ವಿಷಯಗಳಾಗಿ ವಿದ್ಯಾರ್ಥಿಗಳು ಆಯ್ಕೆ ವಿಷಯಗಳಾಗಿ ಕನ್ನಡ ಶಾಸನ ಶಾಸ್ತ್ರ ಅಧ್ಯಯನ, ಕನ್ನಡ ರಂಗಭೂಮಿ ಅಧ್ಯಯ, ಕನ್ನಡ ಮಹಿಳಾ ಸಾಹಿತ್ಯ ಅಧ್ಯಯನ, ಭಾಷಾಂತರ ಅಧ್ಯಯನ ಇವುಗಳ ಜೊತೆಗೆ ಇಂಗ್ಲಿಷ್, ಹಿಂದಿ, ಮರಾಠಿ, ಸಂಸ್ಕೃತ, ಭಾಷಾವಿಜ್ಞಾನ ಇತ್ಯಾದಿ ವಿಷಯಗಳ ಒಳಗೊಂಡ ಪತ್ರಿಕೆಗಳಿರುತ್ತವೆ.

ನಾಲ್ಕನೆಯ ಸೆಮಿಸ್ಟರ್: ಈ ಸೆಮಿಸ್ಟ್ರರಿನಲ್ಲಿ ಆಧುನಿಕ ಕನ್ನಡ ಸಾಹಿತ್ಯ ಅಧ್ಯಯನ (ಇದರಲ್ಲಿ ನಾಟಕ, ಆತ್ಮಕತೆ, ಪ್ರಬಂಧ ಇವುಗಳನ್ನು ಒಳಗೊಂಡಿರುತ್ತದೆ). ಕನ್ನಡ ಸಾಹಿತ್ಯ ಸಂಶೋಧನೆ ಅಧ್ಯಯನ ಇದರ ಸ್ವರೂಪ, ತೌಲನಿಕ ದ್ರಾವಿಡ ಭಾಷಾ ವಿಜ್ಞಾನ ಇವುಗಳನ್ನು ಒಳಗೊಂಡಿರುವು ದಲ್ಲದೆ. ಐಚ್ಛಿಕ ಪತ್ರಿಕೆಗಳಾಗಿ ಪ್ರಾಯೋಗಿಕ ವಿಮರ್ಶೆ, ಹಸ್ತ ಪ್ರತಿಶಾಸ್ತ್ರ ಅಧ್ಯಯನ, ಭಾರತೀಯ ಸಾಹಿತ್ಯ ಅಧ್ಯಯನ, ನಾಮವಿಜ್ಞಾನ, ನಿಘಂಟುವಿನ ಅಧ್ಯಯನಗಳನ್ನು ಪಠ್ಯಕ್ರಮವಾಗಿ ಇಡಲಾಗಿದೆ. ಅಳವಡಿಸಲಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯ

ಬೆಂಗಳೂರು ವಿಶ್ವವಿದ್ಯಾಲಯವು ಕನ್ನಡ ಎಂ.ಎ. ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ೧) ಕನ್ನಡ ಎಂ.ಎ. ಸಾಹಿತ್ಯಿಕ ಅಧ್ಯಯನ ೨) ಕನ್ನಡ ಎಂ.ಎ ಕನ್ನಡ ತೌಲನಿಕ ಅಧ್ಯಯನ ಹಿನ್ನಲೆ ಯಲ್ಲಿ ಪಠ್ಯಕ್ರಮವನ್ನು ಸಿದ್ಧಪಡಿಸಲಾಗಿದ್ದು. ಪ್ರಸ್ತುತ ಕನ್ನಡ ಎಂ.ಎ ಸಾಹಿತ್ಯಿಕ ಅಧ್ಯಯನದ ಪಠ್ಯಕ್ರಮ ವಿಷಯವನ್ನು ಮಾತ್ರ ವಿವರಿಸಲಾಗುತ್ತದೆ.

ಪ್ರಥಮ ವರ್ಷದ ಪಠ್ಯಕ್ರಮವಾಗಿ ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯ ಆ ಕಾಲ ಘಟ್ಟದ ಕೆಲವು ಪ್ರಮುಖ ಪಠ್ಯಗಳನ್ನು ಆಧರಿಸಿ ಸಾಂಗತ್ಯ ಸಾಹಿತ್ಯ ಇಲ್ಲಿ ಮಧ್ಯಕಾಲೀನ ಸಾಹಿತ್ಯದಿಂದ ಆಧುನಿಕ ಕಾವ್ಯದಲ್ಲಿ ಸಾಂಗತ್ಯದ ಪ್ರಯೋಗದವರೆಗೆ ಕನ್ನಡ ಸಾಹಿತ್ಯಧ್ಯಯನ ಸಾಧನ ಸಾಮಾಗ್ರಿಗಳು ಇಲ್ಲಿ ಛಂದಸ್ಸು, ಕನ್ನಡ ಛಂದಸ್ಸಿನ ಘಟ್ಟಗಳು, ಗ್ರಂಥ ಸಂಪಾದನಾ ಶಾಸ್ತ್ರ ಕನ್ನಡ

ಭಾಷೆಯ ರಚನೆಗಳನ್ನು ಒಳಗೊಂಡಿರುತ್ತದೆ. ಆಧುನಿಕ ಸಾಹಿತ್ಯ ಭಾಗ-೧ ಅಧ್ಯಯನಕ್ಕಾಗಿ ಪಠ್ಯಗಳು ಕಾದಂಬರಿ ಮತ್ತು ಸಣ್ಣಕತೆಗಳನ್ನು ಒಳಗೊಂಡ ಕನ್ನಡ ಸಾಹಿತ್ಯ ವಿಮರ್ಶೆ ಮತ್ತು ಕನ್ನಡ ಸಾಂಸ್ಕೃತಿಕ ಪಠ್ಯಗಳು ಒಳಗೊಂಡಿದೆ.

ದ್ವಿತೀಯ ಎಂ.ಎ : ಆಧುನಿಕ ಕನ್ನಡ ಸಾಹಿತ್ಯ ಭಾಗ-೨ ಕಾವ್ಯ-ನಾಟಕ, ತೌಲನಿಕ ಕಾವ್ಯ ಮೀಮಾಂಸೆ ಮತ್ತು ಆಧುನಿಕ ಸಾಹಿತ್ಯ ವಿಮರ್ಶೆಯ ಮೂಲತತ್ವಗಳು, ಶಾಸನ ಶಾಸ್ತ್ರ ಲಿಪಿ ಮತ್ತು ಸಂಸ್ಕೃತಿ ಅಧ್ಯಯನದ ಹಿನ್ನಲೆ ಕರ್ನಾಟಕ ರಾಜಕೀಯ ಮತ್ತು ಸಾಂಸ್ಕೃತಿ ಇತಿಹಾಸ, ಐತಿಹಾಸಿಕ ಮತ್ತು ತೌಲನಿಕ ಭಾಷಾ ವಿಜ್ಞಾನ ಸಾಮಾನ್ಯ ಹಾಗೂ ಸಾಮಾಜಿಕ ಭಾಷಾ ವಿಜ್ಞಾನ, ಸಂಸ್ಕೃತಿಯ ಅಧ್ಯಯನ ಹಾಗೂ ಕಂಪ್ಯೂಟರ್ ವಿಜ್ಞಾನವನ್ನು ಈ ವಿಶ್ವವಿದ್ಯಾಲಯವು ಪಠ್ಯಕ್ರಮವಾಗಿ ಸಿದ್ದಪಸಿದೆ.

ಮೈಸೂರು ವಿಶ್ವವಿದ್ಯಾಲಯ

ಮೈಸೂರು ವಿಶ್ವವಿದ್ಯಾಲಯ ಬೋಧನೆಯ ವಿಷಯಗಳಲ್ಲಿ ಕನ್ನಡ ಸ್ನಾತಕೋತ್ತರ ಶಿಕ್ಷಣ ಬಹಳ ಮುಖ್ಯವಾಗಿದ್ದು ಜಾಗತೀಕರಣ, ಉದಾರೀಕರಣ, ಆಧುನೀಕರಣದೊಂದಿಗೆ ನಿಕಟ ಬಾಂಧವ್ಯ ಸಾಧಿಸುವ ಹಿನ್ನಲೆಯಲ್ಲಿ ಪಠ್ಯಕ್ರಮವನ್ನು ತಯಾರಿಸಲಾಗಿದೆ. ಉದ್ಯೋಗ ಮತ್ತು ಜ್ಞಾನದ ಸಂಯೋಜನಾತ್ಮಕ ಮಧ್ಯಂತರ ಶಿಕ್ಷಣ ಮಾರ್ಗವನ್ನು ತೆರೆದು ಪಠ್ಯಕ್ರಮ ರೂಪಿಸಿರುವುದು ಈ ಸಂಸ್ಥೆಯ ಆಶಯವಾಗಿದೆ. ಇಲ್ಲಿ ಸಂಶೋಧನೆ ಹಾಗೂ ಕಂಪ್ಯೂಟರ್ ಕೋರ್ಸ್‌ನ ವಿಷಯಗಳನ್ನು ಪಠ್ಯದ ಭಾಗಗಳಾಗಿ ಅಳವಡಿಸಲಾಗಿದೆ. ವಿಶ್ವವಿದ್ಯಾಲಯ ಪಠ್ಯಕ್ರಮ ಹೀಗಿದೆ.

ಒಂದನೆಯ ಸೆಮಿಸ್ಟರ್: ಇಲ್ಲಿ ಪ್ರಾಚೀನ ಕನ್ನಡ ಸಾಹಿತ್ಯ-೧ (ಆಯ್ದುಪಠ್ಯಗಳು) ಮಧ್ಯಕಾಲೀನ ಕನ್ನಡ ಸಾಹಿತ್ಯ-೧ (ಆಯ್ದುಪಠ್ಯಗಳು), ಕನ್ನಡ ಛಂದಸ್ಸಿನ ಪರಿಚಯ ಕನ್ನಡ ಸಾಹಿತ್ಯದ ಹಿನ್ನಲೆ (ಪ್ರಾಚೀನ ಮತ್ತು ಮಧ್ಯಕಾಲೀನ) ಹಾಗೂ ಕನ್ನಡ ವಿಮರ್ಶೆಯನ್ನು ಒಳಗೊಂಡಿದೆ.

ಎರಡನೆಯ ಸೆಮಿಸ್ಟರ್: ಪ್ರಾಚೀನ ಕನ್ನಡ ಸಾಹಿತ್ಯ-೨, ಮಧ್ಯಕಾಲೀನ ಕನ್ನಡ ಸಾಹಿತ್ಯ-೨, ದ್ರಾವಿಡ ಭಾಷಾ ವಿಜ್ಞಾನ ಪರಿಚಯ, ಕನ್ನಡ ಸಾಹಿತ್ಯದ ಹಿನ್ನಲೆ-೨ ಆಧುನಿಕ ಐಚ್ಛಿಕ ವಿಷಯಗಳಾಗಿ ಭಾಷಾ ವಿಜ್ಞಾನ ಅಧ್ಯಯನ ಭಾಷಾ ವಿಜ್ಞಾನದ ಮೂಲತತ್ವಗಳು ಜಾನಪದ ಅಧ್ಯಯನ ಜನಪದ ಸಂಸ್ಕೃತಿಯ ಅಧ್ಯಯನ-೧, ಪಾಶ್ಚಿಮಾತ್ಯ ಸಾಹಿತ್ಯ ಅಧ್ಯಯನ ಗ್ರಂಥ ಸಂಪಾದನೆ ಅಧ್ಯಯನ ತೌಲನಿಕ ಸಾಹಿತ್ಯ ಅಧ್ಯಯನವನ್ನು ಪಠ್ಯಕ್ರಮಗಳಾಗಿ ಅಳವಡಿಸಲಾಗಿದೆ.

ಮೂರನೆಯ ಸೆಮಿಸ್ಟರ್: ಆಧುನಿಕ ಕನ್ನಡ ಸಾಹಿತ್ಯ-೧, ಭಾರತೀಯಕಾವ್ಯ ಮೀಮಾಂಸೆ ತೌಲನಿಕ

ತತ್ವಗಳು ಮತ್ತು ಆಯ್ದ ಪಠ್ಯಗಳು, ಸಂಶೋಧನ ವಿಧಾನ ಮತ್ತು ಗಣಕ ಜ್ಞಾನ ಹಾಗೂ ಕೆಲವು ಐಚ್ಛಿಕ ವಿಷಯಗಳನ್ನು ಅಧ್ಯಯನ ಮಾಡಲಾಗುವುದು.

ನಾಲ್ಕನೆ ಸೆಮಿಸ್ಟರ್ : ಆಧುನಿಕ ಕನ್ನಡ ಸಾಹಿತ್ಯ-೨, ಪಾಶ್ಚಾತ್ಯ ಕಾವ್ಯಮೀಮಾಂಸೆ, ಭಾರತೀಯ ಭಾಷೆಗಳು ಮತ್ತು ಸಾಹಿತ್ಯ, ಕನ್ನಡ ಸಂಶೋಧನೆ ಮತ್ತು ನಿಬಂಧ ಹಾಗೂ ಐಚ್ಛಿಕ ವಿಷಯಗಳಾಗಿ ಭಾಷಾವಿಜ್ಞಾನ ಅಧ್ಯಯನ ಜಾನಪದ ಅಧ್ಯ ವಿಮರ್ಶೆಯ ಅಧ್ಯಯನ, ದ್ರಾವಿಡ ಸಾಹಿತ್ಯ ಅಧ್ಯಯನ, ಭಾಷಾಂತರ ಅಧ್ಯಯನ, ಚಾರಿತ್ರಿಕ ಅಧ್ಯಯನ, ಪಾಶ್ಚಾತ್ಯ ಸಾಹಿತ್ಯ ಅಧ್ಯಯನ ಗ್ರಂಥ ಸಂಪಾದನೆ ಅಧ್ಯಯನ ತೌಲನಿಕ ಸಾಹಿತ್ಯ ಅಧ್ಯಯನಗಳನ್ನು ಒಳಗೊಂಡಿರುತ್ತದೆ.

ಮಂಗಳೂರು ವಿಶ್ವವಿದ್ಯಾಲಯ

ಮಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗವು ಪ್ರಾಚೀನ ಕನ್ನಡ ಸಾಹಿತ್ಯದ ಜೊತೆಗೆ ತುಳ ಮತ್ತು ಜಾನಪದವನ್ನು ಪರಿಚಯಿಸುವ ಹಿನ್ನಲೆಯಲ್ಲಿ ಪಠ್ಯಕ್ರಮವನ್ನು ರೂಪಿಸಿದೆ.

ಮೊದಲನೆಯ ಸೆಮಿಸ್ಟರ್ : ಪ್ರಾಚೀನ ಕನ್ನಡ ಸಾಹಿತ್ಯ ಚಂಪೂ, ಮಧ್ಯಕಾಲೀನ ಕನ್ನಡ ಸಾಹಿತ್ಯ ವಚನ, ರಗಳೆ, ಆಧುನಿಕ ಕನ್ನಡ ಸಾಹಿತ್ಯ ಪ್ರಕಾರ, ಕಥನ, ಕವನ, ಭಾಷಾವಿಜ್ಞಾನ ಹಾಗೂ ಐಚ್ಛಿಕ ವಿಷಯಗಳಾಗಿ ತುಳುವ ಅಧ್ಯಯನ, ಮಧ್ಯಕಾಲೀನ ಕನ್ನಡ ಸಾಹಿತ್ಯ, ಕರ್ನಾಟಕ ಸಂಸ್ಕೃತಿಯ ಅಧ್ಯಯನ.

ಎರಡನೆಯ ಸೆಮಿಸ್ಟರ್ : ಮಧ್ಯಕಾಲೀನ ಕನ್ನಡ ಸಾಹಿತ್ಯ ಷಟ್ಪದಿ, ಕೀರ್ತನೆ, ಸಾಂಗತ್ಯ, ಆಧುನಿಕ ಕನ್ನಡ ಕಾವ್ಯ, ಆಧುನಿಕ ಕನ್ನಡ ಸಾಹಿತ್ಯ ಪ್ರಕಾರ, ಪ್ರವಾಸ ಸಾಹಿತ್ಯ ಕನ್ನಡ ಛಂದಸ್ಸು ಐಚ್ಛಿಕ ವಿಷಯಗಳಾಗಿ ಮಲಿಗಡೆ ತುಳು ಪ್ರಾದೇಶಿಕ ಅಧ್ಯಯನ, ಕರ್ನಾಟಕ ಸಂಸ್ಕೃತಿಯ ಅಧ್ಯಯನ, ಸ್ವರೂಪ, ಸಂಸ್ಕೃತಿಗಳನ್ನು ನೋಡಬಹುದು.

ಮೂರನೆಯ ಸೆಮಿಸ್ಟರ್ : ಆಧುನಿಕ ಕನ್ನಡ ಕಾದಂಬರಿ, ಆಧುನಿಕ ಕನ್ನಡ ಸಣ್ಣಕತೆ, ಆಧುನಿಕ ಕನ್ನಡ ಸಾಹಿತ್ಯ ಪ್ರಕಾರ ಲಲಿತ ಪ್ರಬಂಧ, ಪಾಶ್ಚಾತ್ಯ ಸಾಹಿತ್ಯ ತತ್ವಗಳು ಐಚ್ಛಿಕ ವಿಷಯಗಳಾಗಿ ಈ ಮೊದಲಂತೆ ತುಳುವ ಶಾಬ್ದಿಕ ಜಾನಪದ ಪ್ರಾದೇಶಿಕ ಸಾಹಿತ್ಯ ಕರ್ನಾಟಕ ಶಾಸನ ಅಧ್ಯಯನವನ್ನು ನೋಡಬಹುದು.

ನಾಲ್ಕನೆಯ ಸೆಮಿಸ್ಟರ್ : ಆಧುನಿಕ ಕನ್ನಡ ನಾಟಕ, ಆಧುನಿಕ ಕನ್ನಡ ಸಾಹಿತ್ಯ ವಿಶೇಷ ಸಾಹಿತಿ, ಆಧುನಿಕ ಕನ್ನಡ ಸಾಹಿತ್ಯ ಪ್ರಕಾರ ಆತ್ಮಕತೆ ತೌಲನಿಕ ಕಾವ್ಯ ಮೀಮಾಂಸೆ ಐಚ್ಛಿಕ ವಿಷಯಗಳನ್ನು ಒಳಗೊಂಡಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು

ಪ್ರಥಮ ವರ್ಷದ ಪಠ್ಯಕ್ರಮ : ಆಧುನಿಕ ಕನ್ನಡ ಸಾಹಿತ್ಯ ಒಂದು ಪ್ರಕಾರ ಕಾವ್ಯ ಮಧ್ಯಾಕಾಲೀನ ಕನ್ನಡ ಸಾಹಿತ್ಯ ಛಂದಸ್ಸು ಮತ್ತು ದ್ರಾವಿಡ ಭಾಷಾವಿಜ್ಞಾನ ಪರಿಚಯ, ಕನ್ನಡ ಸಾಹಿತ್ಯದ ಹಿನ್ನಲೆ ಪ್ರೆರಣೆ ಪ್ರಭಾವ, ಜಾನಪದತತ್ವಗಳು.

ದ್ವಿತೀಯ ವರ್ಷದ ಪಠ್ಯಕ್ರಮ : ಪ್ರಾಚೀನ ಕನ್ನಡ ಸಾಹಿತ್ಯ ವಿಸೇಷಕವಿ ಪಂಪ, ತೌಲನಿಕ ಸಾಹಿತ್ಯ ತತ್ವಗಳು ಮತ್ತು ಪಠ್ಯಗಳು ನಾಟಕ ಪ್ರಕಾರಗಳು, ಕಾವ್ಯಮೀಮಾಂಸೆ, ಭಾರತೀಯ ಮತ್ತು ಪಾಶ್ಚಿಮಾತ್ಯ ಸಾಹಿತ್ಯ ವಿಮರ್ಶೆ ಕನ್ನಡ ಶಾಸನ ಅಧ್ಯಯನ ಸಾಹಿತ್ಯ.

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ವಿಶ್ವವಿದ್ಯಾಲಯವು ಎಂ.ಎ. ಪಿಎಚ್.ಡಿ. ಎಂಬ ಕನ್ನಡ ಸ್ನಾತಕೋತ್ತರ ಪ್ರಾರಂಭಿಸಿದೆ. ಇದರ ಮೂಲ ಉದ್ದೇಶ ಕನ್ನಡ ಸ್ನಾತಕೋತ್ತರ ಜೊತೆಗೆ ಸಂಶೋಧನೆಗೆ ಹೆಚ್ಚು ಮಹತ್ವ ನೀಡಲಾಗಿದೆ. ಇಲ್ಲಿ ಪಠ್ಯವನ್ನು ಅವಲೋಕಿಸಿದಾಗ ಮೂರು ಮತ್ತು ನಾಲ್ಕನೆಯ ಸೆಮಿಸ್ಟರ್ ಸಂಶೋಧನೆಗೆ ಸಂಬಂಧಿಸಿದ ವಿಭಾಗಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿದೆ.

ಮೊದಲನೆ ಸೆಮಿಸ್ಟರ್‌ನಲ್ಲಿ ಮಧ್ಯಕಾಲಿನ ಸಾಹಿತ್ಯ ಒಂದು ಮತ್ತು ಎರಡು ಸ್ವಾತಂತ್ರ ಪೂರ್ವ ಆಧುನಿಕ ಕಾವ್ಯ ಮತ್ತು ಕಥನ ಸಾಹಿತ್ಯ ಮತ್ತು ಕನ್ನಡ ಮತ್ತು ಕಂಪ್ಯೂಟರ್ ಸಂಬಂಧವನ್ನು ತಿಳಿಸುತ್ತದೆ.

ಎರಡನೆ ಸೆಮಿಷ್ಟರ್‌ನಲ್ಲಿ ಚಂಪೂಸಾಹಿತ್ಯ, ಮಧ್ಯಕಾಲೀನ ಸಾಹಿತ್ಯ, ಆಧುನಿಕ ಸಾಹಿತ್ಯ, ಆಧುನಿಕ ಕಥನ ಸಾಹಿತ್ಯ, ನಾಟಕ ಸಾಹಿತ್ಯ, ಇವುಗಳ ಇತಿಹಾಸ, ತಾತ್ತ್ವೀಕತೆ ಸ್ವರೂಪಗಳನ್ನು ತಿಳಿಸಲಾಗಿದೆ.

ಮೂರನೆ ಸೆಮಿಸ್ಟ್‌ರಗೆ ಸಂಬಂಧಿಸಿದಂತೆ ವಿಮರ್ಶೆ, ವಿಮರ್ಶೆಯ ಪ್ರಕಾರಗಳು ಭಾಷಾಧ್ಯಯನ ಭಾಗ-೧, ದ್ರಾವಿಡ ಅಧ್ಯಯನ, ಆಕರ ಶಾಸ್ತ್ರ-೧, ಭಾಷಾಧ್ಯಯನ ಮೊದಲಾದ ವಿಷಯಗಳ ಹುಟ್ಟು ಬೆಳವಣಿಗೆಯನ್ನು ತಿಳಿಸಲಾಗಿದೆ.

ನಾಲ್ಕನೆಯ ಸೆಮಿಸ್ಟರ್‌ನಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿ, ಸಾಂಸ್ಕೃತಿಕ ವಿಮರ್ಶೆಯ ಸ್ವರೂಪ ಸಾಹಿತ್ಯ ವಿಮರ್ಶೆ, ಪಾಶ್ಚಾತ್ಯ ವಿಮರ್ಶೆ ವಿಮರ್ಶೆಯ ವಿವಿಧ ವಾದಗಳು ಭಾಷಾಧ್ಯಯನ ಭಾಷಾಂತರ-೨ ದ್ರಾವಿಡ ಅಧ್ಯಯನ-೨. ಆಕರಶಾಸ್ತ್ರವನ್ನು ತಿಳಿಸಲಾಗುತ್ತದೆ.

ಪಠ್ಯಕ್ರಮವನ್ನು ಅವಲೋಕಿಸಿದಾಗ ಕಾಲ ಬದಲಾವಣೆಗೆ ತಕ್ಕಂತೆ ಬೋಧನೆಯ ವಿಧಾನವು ಬದಲಾಗುತ್ತದೆ. ಈ ಬೋಧನೆಯ ವಿಧಾನವ ಬದಲಾದಂತೆ ಅಲ್ಲಿಯ ಪಠ್ಯಕ್ರಮದಲ್ಲೂ

ಬದಲಾವಣೆಯನ್ನು ಕಾಣುತ್ತೇವೆ. ಉದಾಹರಣೆಗೆ ಪ್ರಾಚೀನ ಶಿಕ್ಷಣವನ್ನು ಗಮನಿಸಿದರೆ ವೇದಕಾಲದಲ್ಲಿ ನಾಲ್ಕು ವೇದಗಳು ಬೋಧಿಸಲಾಗುತ್ತಿದ್ದು. ಕ್ರಿ.ಪೂ. ೧೦೦೦-೬೦೦ರ ವರೆಗಿನ ವೇದೋತ್ತರ ಕಾಲದಲ್ಲಿ ಉಪನಿಷತ್ ಮತ್ತು ವೇದಾಂತಗಳ ಜೊತೆಗೆ ವ್ಯಾಕರಣವು ಬೋಧಿಸುತ್ತಿದ್ದರು. ಮುಂದೆ ಮಹಾಕಾವ್ಯಗಳ ಕಾಲದಲ್ಲಿ ಅಂಕಗಣಿತ, ವ್ಯಾಕರಣ, ಖಗೋಲ ವಿಜ್ಞಾನ, ಇತಿಹಾಸ, ತತ್ವಶಾಸ್ತ್ರ, ಅರ್ಥಶಾಸ್ತ್ರ, ರಾಜಕೀಯಶಾಸ್ತ್ರ, ಕೃಷಿ ವಿಜ್ಞಾನ, ಶಿಲ್ಪಶಾಸ್ತ್ರ, ಚಿತ್ರಕಲೆ, ಸೈನಿಕ ಕಲೆ, ಪಶುಸಂಗೋಪನೆ, ಆಯುರ್ವೇದ, ಶಲ್ಯಶಾಸ್ತ್ರ ಮತ್ತು ನ್ಯಾಯಶಾಸ್ತ್ರಗಳು ಬೋಧನ ವಿಷಯಗಳಾಗಿದ್ದವು. ಬೌದ್ಧರ ಕಾಲದ ಶಿಕ್ಷಣದಲ್ಲಿ ಧರ್ಮ, ತತ್ವಶಾಸ್ತ್ರ, ವೈದ್ಯಶಾಸ್ತ್ರ, ಸೈನಿಕ ವಿಜ್ಞಾನಗಳ ಜೊತೆಗೆ ಲೌಕಿಕ ಶಿಕಷಣವೂ ಇತ್ತು. ಮಹಮದಿಯರ ಕಾಲದಲ್ಲಿ ಕುರಾನ್, ಕುರಾನಿನ ಮೇಲಿನ ವಾಖ್ಯಾ ಅದಕ್ಕೆ ಸಂಬಂಧಿಸಿದ ದಂತ ಕಥೆಗಳು, ಇಸ್ಲಾಂ ಶಾಸನಗಳು, ಸೂಫಿ ತತ್ವಗಳು, ಬೋಧನ ವಿಷಯಗಳಾಗಿದ್ದವು. ಬ್ರಿಟೀಶ್‌ರ ಕಾಲದಲ್ಲಿ ಪಠ್ಯಕ್ರಮ ಸಂಪೂರ್ಣ ಬದಲಾಯಿತು. ಇವರು ಪಠ್ಯಗಳಲ್ಲಿ ಇಂಗ್ಲಿಷ್ ಅಳವಡಿಸಿದರು. ಹೀಗೆ ಬದಲಾಗುತ್ತಾ ಪ್ರಸ್ತುತ ಕನ್ನಡ ಪಠ್ಯಗಳಲ್ಲಿಯೂ ಇಂಗ್ಲೀಷ್ ಸಾಹಿತ್ಯ ಅಳವಡಿಸಲಾಗಿದೆ. ಈ ಪಠ್ಯಕ್ರಮಗಳು ಎರಡು ಉದ್ದೇಶಗಳ ಹಿನ್ನಲೆಯಲ್ಲಿ ರೂಪಪಡೆದಿದೆ.

ಒಂದು ಬೋಧನೆಯ ವಿಷಯಗಳಲ್ಲಿ ಕನ್ನಡ ಸ್ನಾತಕೋತ್ತರ ಶಿಕ್ಷಣ ಬಹಳ ಮುಖ್ಯವಾಗಿದೆ. ಕಾರಣ ಜಾಗತೀಕರಣ, ಉದಾರೀಕರಣ, ಆಧುನೀಕರಣದೊಂದಿಗೆ ನಿಕಟ ಬಾಂಧವ್ಯ ಸಾಧಿಸುವ ಹಿನ್ನಲೆಯಲ್ಲಿ ಮೈಸೂರು ವಿಶ್ವವಿದ್ಯಾಲಯ ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳು ಕನ್ನಡ ಸಾಹಿತ್ಯ ಸ್ನಾತಕೋತ್ತರ ಪಠ್ಯಗಳನ್ನು ಸಿದ್ಧಪಡಿಸುತ್ತಿರುವುದು ನೋಡುತ್ತೇವೆ. ಇದು ಜ್ಞಾನಸಂಪಾದನೆಯ ಜೊತೆಗೆ ಉದ್ಯೋಗವನ್ನು ಒದಗಿಸುವ ಹಿನ್ನೆಲೆಯಲ್ಲಿ ಪಠ್ಯ ರೂಪಿಸಲಾಗಿದೆ. ಈ ಪಠ್ಯಗಳಲ್ಲಿ ಕನ್ನಡ ಚರಿತ್ರೆಯೊಂದಿಗೆ ಇತರ ದೇಶ ವಿದೇಶ ಭಾಷೆಗಳ ಸಾಹಿತ್ಯವನ್ನು ಪರಿಚಯಿಸುವ ಹಿನ್ನಲೆಯಲ್ಲಿ ಇಲ್ಲಿನ ಪಠ್ಯಗಳು ರೂಪುಗೊಂಡಿವೆ. ಧಾರವಾಡ ಮತ್ತು ಗುಲಬರ್ಗಾ ವಿಶ್ವವಿದ್ಯಾಲಯಗಳ ಇತರ ರಾಷ್ಟ್ರ ಭಾಷೆಗಳ ಜೊತೆಗೆ ಕನ್ನಡದ ಗ್ರಂಥ ಸಂಪಾದನೆ ಮತ್ತು ನಿಘಂಟು, ವಚನ ಸಾಹಿತ್ಯದ ವಿವರಗಳನ್ನು ಹೆಚ್ಚು ಅಳವಡಿಸಲಾಗಿದೆ.

ಗುಲಬರ್ಗಾ ಮತ್ತು ಧಾರವಾಡ ವಿಶ್ವವಿದ್ಯಾಲಯಗಳ ಈ ಮಾದರಿಯ ಪಠ್ಯದ ಬಹುಪಾಲು ಬಾಗಗಳು ಬೆಂಗಳೂರು ವಿಶ್ವವಿದ್ಯಾಲಯವು ಪದವಿಯ ಹಂತದಲ್ಲಿ ಪರಿಚಯಿಸಿದೆ. ಮಂಗಳೂರು ವಿಶ್ವವಿದ್ಯಾಲಯ ಪ್ರಾದೇಶಿಕವಾಗಿ 'ತುಳು' ನಾಡೆಂದು ಕರೆಸಿಕೊಂಡಿದೆ. ಇಲ್ಲಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯ ಜೊತೆಗೆ ತುಳು ಸಾಹಿತ್ಯವನ್ನು ಸಂಪೂರ್ಣವಾಗಿ ವಿದ್ಯಾರ್ಥಿಗಳಿಗೆ ತಿಳಿಸುವ ಒಂದು ಪ್ರಯತ್ನ ಮಾಡಿದೆ.

ಉನ್ನತ ಶಿಕ್ಷಣದಲ್ಲಿ ಸೆಮಿಸ್ಟರ್ ಮತ್ತು ಟ್ರೈಮ್‌ಸ್ಟರ್‌ಗಳು ಜಾರಿಗೆ ಬಂದಾಗಿನಿಂದ ಪಠ್ಯಕ್ರಮ ಬೋಧನೆ, ಪರೀಕ್ಷೆ, ಮೌಲ್ಯಮಾಪನ ಇವೆಲ್ಲವೂ ಕೇವಲ ವಿದ್ಯಾರ್ಥಿಗಳ ನೆನಪಿನ ಶಕ್ತಿಯನ್ನು ಮಾತ್ರ ಪರೀಕ್ಷೆ ಮಾಡುತ್ತಿವೆ. ಅವರ ಆಲೋಚನ ಶಕ್ತಿಯನ್ನು ಬೆಳಸುತ್ತಿಲ್ಲ. ಇದರಿಂದ ತರಗತಿಯ ಪಾಠಗಳು ಪ್ರೆಸ್‌ಮೀಟ್ ರೀತಿಯಲ್ಲಿ ಸಾಗಿದೆ. ಉನ್ನತ ಶಿಕ್ಷಣದಲ್ಲಿ ಕಲೆ, ಸಾಹಿತ್ಯ ಮತ್ತು ಮಾನವಿಕಗಳಿಗೆ ಮಹತ್ವ ಕಡಿಮೆಯಾಗುತ್ತಿದೆ. ಆದರೂ ಕನ್ನಡ ಸಾಹಿತ್ಯ ಮಾಡಿದ ವಿದ್ಯಾರ್ಥಿಗಳು ಸಮಾಜವನ್ನು ಕುರಿತು, ಸಮಾಜದ ಹಸಿವು, ನೋವು ಮೊದಲಾದವುಗಳಿಗೆ ನೇರಾ ಸ್ಪಂದಿಸುತ್ತಾರೆ. ಸುಮಾರು ಲೇಖಕರ ಅನೇಕ ಕೃತಿಗಳು ಈ ಹಿನ್ನಲೆಯಲ್ಲಿ ಬಂದಿವೆ. ಇಂದು ಕನ್ನಡ ಸಾಹಿತ್ಯ ಮಾಡುತ್ತಿರುವ ವಿದ್ಯಾರ್ಥಿಗಳು ಬಡವರಾಗಿರುತ್ತಾರೆ. ಶ್ರೀಮಂತರು ಮತ್ತು ಮಧ್ಯಮವರ್ಗದವರ ಪ್ರಮಾಣ ತೀರಾ ಕಡಿಮೆ. ಇವರು ಹಣವಂತರಾಗಿರುವುದರಿಂದ ವಿಜ್ಞಾನ, ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಾಣಿಜ್ಯ ಇವುಗಳನ್ನು ಮಾಡುವುದರಿಂದ ಹೆಚ್ಚಿನ ಸಂಭಾವನೆ ಮತ್ತು ಬಹಳ ವೇಗದ ಕೆಲಸದ ಆಸೆಗಾಗಿ ಶ್ರೀಮಂತರು ಈ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಈ ರೀತಿಯ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಳ್ಳುವವರು ಹೆಚ್ಚು ನಗರ ಪ್ರದೇಶದವರಾಗಿರುತ್ತಾರೆ.

ಕನ್ನಡ ಸಾಹಿತ್ಯವನ್ನು ಹೆಚ್ಚು ಗ್ರಾಮೀಣ ಪ್ರದೇಶದವರಾಗಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿಗೆ ಇಂಗ್ಲಿಷ್ ಭಯವಿರುವುದರಿಂದಲೂ ಕನ್ನಡ ಸಾಹಿತ್ಯ ಮಾಡಲು ಬರುತ್ತಾರೆ. ಅಲ್ಲದೆ ಇಲ್ಲಿ ಬಡತನವೂ ಒಂದು ಕಾರಣವಾಗಿದೆ. ಗ್ರಾಮೀಣ ಪರಿಸರದಲ್ಲಿ ಬೋಧನೆಯ ಗುಣಮಟ್ಟ ತೀರಾ ಕಡಿಮೆ. ಈ ಹಿನ್ನಲೆಯಲ್ಲಿ ಅಲ್ಲಿಯ ಜನ ತಮಗೆ ಅರ್ಥವಾಗುವ ಭಾಷೆಯ ಕಡೆಗೆ ವಾಲುತ್ತಾರೆ. ಇದರಿಂದ ಗ್ರಾಮೀಣ ವಿದ್ಯಾರ್ಥಿಗಳು ಕನ್ನಡ ಸಾಹಿತ್ಯ ಮಾಡುತ್ತಾರೆ.

ವಿಶ್ವವಿದ್ಯಾಲಯಗಳ ಧನಸಹಾಯ ಆಯೋಗವು ಇಂದು ತಾಂತ್ರಿಕ ಮತ್ತು ಇಂಜಿನಿಯರಿಂಗ್ ವಿಶ್ವವಿದ್ಯಾಲಯಗಳಿಗೆ ಧನಸಹಾಯ ಮಾಡುತ್ತಾ ಬಂದಿದೆ. ಇಲ್ಲಿ ಕಲಾಕ್ಷೇತ್ರಗಳಿಗೆ ಇದರ ಪಾಲು ತೀರಾ ಕಡಿಮೆ. ಇದರಲ್ಲಿ ಕನ್ನಡವೂ ಹೊರತಲ್ಲ ಎಂದು ಹೇಳಬಹುದು.

ಇಂದು ಕನ್ನಡ ಶಿಕ್ಷಣದಲ್ಲಿ ಕನ್ನಡ ಸಾಹಿತ್ಯವೂ ಸಹ ಖಾಸಗೀಕರಣ, ಜಾಗತೀಕರಣ ಮತ್ತು ಉಧಾರೀಕರಣದ ಹಿನ್ನಲೆಯಲ್ಲಿ ಪಠ್ಯವನ್ನು ರೂಪಿಸಿ ಅದಕ್ಕೆ ತಕ್ಕಂತೆ ವಿದ್ಯಾರ್ಥಿಗಳಿಗೆ ಬೋಧನೆ ನೀಡುತ್ತಿದೆ.

ಅಧ್ಯಾಯ ೫


ಕನ್ನಡ ಸ್ನಾತಕೋತ್ತರ ಪದವೀಧರ ವಿದ್ಯಾರ್ಥಿಗಳ ಸಂಖ್ಯಾಪ್ರಮಾಣ

ಕರ್ನಾಟಕದಲ್ಲಿ ಸುಮಾರು ಹತ್ತಕ್ಕೂ ಹೆಚ್ಚಿನ ವಿಶ್ವವಿದ್ಯಾಲಯಗಳಿವೆ. ಅವುಗಳಲ್ಲಿ ಕೇವಲ ಎಂಟು ವಿಶ್ವವಿದ್ಯಾಲಯಗಳಲ್ಲಿರುವ ಕನ್ನಡ ಸಾಹಿತ್ಯ ಸ್ನಾತಕೋತ್ತರ ಪದವಿಧರರ ಸಂಖ್ಯಾಪ್ರಮಾಣ ಹಾಗೂ ಪ್ರತಿಶತ ಪ್ರಮಾಣವನ್ನಷ್ಟೇ ನೀಡಲಾಗಿದೆ. ಆ ವಿಶ್ವವಿದ್ಯಾಲಯಗಳ ಪ್ರಾರಂಭದಿಂದ ಇಲ್ಲಿಯ ವರೆಗಿನ ಅಂದರೆ ೨೦೦೭ರ ವರೆಗಿನ ಮಾಹಿತಿಯ ಸಂಖ್ಯಾ ವಿವರಗಳನ್ನು ಈ ಕೆಳಗಿನ ಕೊಷ್ಠಕದಲ್ಲಿ ನೀಡಲಾಗಿದೆ.

ಕ್ರ.ಸಂ.	ಕೇಂದ್ರಗಳು	ಒಟ್ಟು	ಗಂಡು	ಹೆಣ್ಣು
೦೧.	ಕುವೆಂಪು ವಿಶ್ವವಿದ್ಯಾಲಯ	೫೩೧	೩೪೪	೧೮೭
೦೨.	ಗುಲಬರ್ಗಾ ವಿಶ್ವವಿದ್ಯಾಲಯ	೮೮೫	೬೭೯	೨೦೬
೦೩.	ಧಾರವಾಡ ವಿಶ್ವವಿದ್ಯಾಲಯ	೨೮೮೧	೨೨೦೭	೬೭೪
೦೪.	ಬೆಂಗಳೂರು ವಿಶ್ವವಿದ್ಯಾಲಯ	೧೬೧೬	೯೦೬	೭೧೦
೦೫.	ಮೈಸೂರು ವಿಶ್ವವಿದ್ಯಾಲಯ	೨೨೩೮	೧೫೨೦	೭೧೮
೦೬.	ಮೈಸೂರು ಮುಕ್ತ ವಿಶ್ವವಿದ್ಯಾಲಯ	೭೩೯೧	೩೫೭೫	೩೮೧೬
೦೭.	ಮಂಗಳೂರು ವಿಶ್ವವಿದ್ಯಾಲಯ	೫೨೬	೧೬೭	೩೫೯
೦೮.	ಹಂಪಿ ವಿಶ್ವವಿದ್ಯಾಲಯ	೭೦	೩೨	೩೮
೦೯.	ದೂರಶಿಕ್ಷಣ ಕೇಂದ್ರ, ಹಂಪಿ ವಿಶ್ವವಿದ್ಯಾಲಯ	೧೧೯೭	--	--
	ರಾಜ್ಯದ ಒಟ್ಟಾರೆ ವಿದ್ಯಾರ್ಥಿಗಳು	೧೭೩೩೫	೯೪೩೦	೬೭೦೮

ಕೋಷ್ಟಕ ೧. ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯಾಪ್ರಮಾಣ

ಮೇಲ್ಕಾಣಿಸಿದ ಕರ್ನಾಟಕ ರಾಜ್ಯದ ಎಂಟು ವಿಶ್ವವಿದ್ಯಾಲಯಗಳಲ್ಲಿರುವ ಕನ್ನಡ ಸಾಹಿತ್ಯ ಸ್ನಾತಕೋತ್ತರ ಪದವಿಧರರ ವಿದ್ಯಾರ್ಥಿಗಳ ಸಂಖ್ಯೆಯನ್ನು ಗಮನಿಸಿದಾಗ ರಾಜ್ಯದ ಒಟ್ಟಾರೆ ೧೬,೧೩೮ ವಿದ್ಯಾರ್ಥಿಗಳಲ್ಲಿ ಪ್ರತಿಶತ ೫೮ರಷ್ಟು (೯,೪೩೦) ವಿದ್ಯಾರ್ಥಿಗಳು ಮತ್ತು ಪ್ರತಿಶತ ೪೨ರಷ್ಟು (೬,೭೦೮) ವಿದ್ಯಾರ್ಥಿನಿಯರು ಕನ್ನಡ ಸಾಹಿತ್ಯ ಪಥವಿಧರರಾಗಿರುವುದನ್ನು ಗಮನಿಸಬಹುದು. ಈ ವಿಶ್ವವಿದ್ಯಾಲಯಗಳ ಒಟ್ಟಾರೆ ವಿದ್ಯಾರ್ಥಿ ವಿದ್ಯಾರ್ಥಿನಿಯರ ಪ್ರಮಾಣವನ್ನು ಈ ಕೆಳಗಿನ ವೃತ್ತ ಚಿತ್ರದಲ್ಲಿ ತೋರಿಸಲಾಗಿದೆ.




ವೃತ್ತಚಿತ್ರ ೧. ವಿದ್ಯಾರ್ಥಿಗಳ ಪ್ರತಿಶತ ಪ್ರಮಾಣ

ಈ ಮೇಲಿನ ಚಿತ್ರ ೧ರಲ್ಲಿ ಕರ್ನಾಟಕ ರಾಜ್ಯದ ಎಂಟು ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಸಾಹಿತ್ಯ ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರತಿಶತ ಪ್ರಮಾಣವನ್ನು ತಿಳಿಸಲಾಗಿದೆ. ಆ ಪ್ರಕಾರ ಮಂಗಳೂರು ಪ್ರತಿಶತ ೩ರಷ್ಟು, ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರತಿಶತ ೦.೧ ರಷ್ಟಾಗಿದ್ದು, ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ದೂರಶಿಕ್ಷಣ ಕೇಂದ್ರದಲ್ಲಿ ಪ್ರತಿಶತ ೭ರಷ್ಟು ಇದೆ. ಹಾಗೆಯೇ ಕುವೆಂಪು ಪ್ರತಿಶತ ೩ರಷ್ಟು, ಬೆಂಗಳೂರು ಪ್ರತಿಶತ ೯ರಷ್ಟು, ಗುಲಬರ್ಗಾ ಪ್ರತಿಶತ ೫ರಷ್ಟು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಪ್ರತಿಶತ ೧೭ರಷ್ಟು, ಮೈಸೂರು ವಿಶ್ವವಿದ್ಯಾಲಯ ಪ್ರತಿಶತ ೧೩ರಷ್ಟು ಪ್ರಮಾಣದಲ್ಲಿರುವುದು. ಒಟ್ಟಾರೆ ಎಲ್ಲಾ ವಿಶ್ವವಿದ್ಯಾಲಯ ಗಳಲ್ಲಿರುವ ಪ್ರಮಾಣಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ಮೈಸೂರು ಮುಕ್ತ ವಿಶ್ವವಿದ್ಯಾಲಯದಲ್ಲಿದ್ದು ಪ್ರತಿಶತ ೪೩ರಷ್ಟು ಕನ್ನಡ ಸಾಹಿತ್ಯ ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ಆ ವಿಶ್ವವಿದ್ಯಾಲಯ ಹೊಂದಿದೆ. ಒಟ್ಟಾರೆ ಸ್ನಾತಕೋತ್ತರ ಪದವಿಧರರಲ್ಲಿ ಪ್ರತಿಶತ ೫೮ರಷ್ಟು ವಿದ್ಯಾರ್ಥಿಗಳು ಮತ್ತು ಪ್ರತಿಶತ ೪೨ರಷ್ಟು

ವಿದ್ಯಾರ್ಥಿನಿಯರು ಕರ್ನಾಟಕದ ಕನ್ನಡ ಸಾಹಿತ್ಯ ಸ್ನಾತಕೋತ್ತರ ಪದವಿಧರರಾಗಿರುವುದು ಕಂಡುಬರುತ್ತದೆ.

ಪ್ರಸ್ತುತ ಮುಂದಿನ ಲಂಬಚಿತ್ರದಲ್ಲಿ ಪ್ರತಿಯೊಂದು ವಿಶ್ವವಿದ್ಯಾಲಯದಲ್ಲಿ ಕನ್ನಡ ಸಾಹಿತ್ಯ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಪ್ರಮಾಣವನ್ನು ತೋರಿಸಲಾಗಿದೆ. ಕುವೆಂಪು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಕನ್ನಡ ಸ್ನಾತಕೋತ್ತರ ಪದವಿ ಪಡೆದಿರುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಸಂಖ್ಯೆ ಕ್ರಮವಾಗಿ ೩೪೪ ಮತ್ತು ೧೮೭ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಅದು ಕ್ರಮವಾಗಿ ೬೭೯ ಮತ್ತು ೨೦೬ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಕ್ರಮವಾಗಿ ೨೨೦೭ ಮತ್ತು ೬೭೪ ಆಗಿದೆ.


ಬೆಂಗಳೂರು ವಿಶ್ವವಿದ್ಯಾಲಯವು ಕನ್ನಡ ಸಾಹಿತ್ಯ ಸ್ನಾತಕೋತ್ತರ ಹಾಗೂ ತೌಲನಿಕ ಸಾಹಿತ್ಯ ಸ್ನಾತಕೋತ್ತರ ಅಧ್ಯಯನ ನಡೆಸುತ್ತಿದೆ. ಇಲ್ಲಿ ಕನ್ನಡ ಸಾಹಿತ್ಯ ಮಾಡಿರುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಕ್ರಮವಾಗಿ ೯೦೬ ಮತ್ತು ೭೧೦ ಕರ್ನಾಟಕದಲ್ಲೆ ಮತ್ತು ಮೊದಲಿಗೆ ಪ್ರಾರಂಭವಾದ ಮೈಸೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಸಂಖ್ಯೆ ಸದ್ಯ ೧೯೭೦ ರಿಂದ ಮಾತ್ರ ದೊರೆತಿದ್ದು ಈ ವರೆಗೆ ಕ್ರಮವಾಗಿ ೧೫೨೦ ವಿದ್ಯಾರ್ಥಿಗಳು ಮತ್ತು ೭೧೮ ವಿದ್ಯಾರ್ಥಿನಿಯರು ಇದ್ದಾರೆ. ಉಳಿದ ೩೪ ವರ್ಷದ ವಿದ್ಯಾರ್ಥಿಗಳು ಸುಮಾರು ೧೦೦೦ ಇರಬಹುದೆಂದು ಅಂದಾಜಿಸಲಾಗಿದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿಯರ ಸಂಖ್ಯೆ ಕ್ರಮವಾಗಿ ೩೫೭೫ ಮತ್ತು ೩೮೧೬ ವಿದ್ಯಾರ್ಥಿಗಳಿದ್ದಾರೆ. ಈ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಪ್ರಮಾಣ ಹೆಚ್ಚಾಗಿದ್ದರೆ ಮಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಸಂಖ್ಯೆ ಪ್ರಮಾಣ ತೀರಾಕಡಿಮೆ ಇರುವುದನ್ನು ಲಂಬ ಚಿತ್ರದಲ್ಲಿ ಗಮನಿಸಬಹುದು. ಇಲ್ಲಿ ವಿದ್ಯಾರ್ಥಿಗಳ ಸಂಖ್ಯೆ ೧೯೭ ಆದರೆ ವಿದ್ಯಾರ್ಥಿನಿಯರು ೩೫೯ ಪ್ರಮಾಣದಲ್ಲಿರುವುದಾಗಿದೆ. ಹೀಗೆ ಪ್ರತಿಯೊಂದು ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳ ಪ್ರಮಾಣವನ್ನು ಮುಂದಿನ ಲಂಬರೇಖಾ ಚಿತ್ರ೧ರಲ್ಲಿ ಗಮನಿಸಬಹುದು.



ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಪ್ರಮಾಣ

ಕುವೆಂಪು ವಿಶ್ವವಿದ್ಯಾಲಯ

ಈ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗವು ಪ್ರತ್ಯೇಕವಾದ ಕಟ್ಟಡವನ್ನು ಹೊಂದಿದೆ. ಇಲ್ಲಿಯ ಕನ್ನಡ ವಿಭಾಗವನ್ನು 'ಕನ್ನಡ ಭಾರತಿ' ಎಂದು ಹೆಸರಿಸಲಾಗಿದೆ. ಜಾನಪದ, ಆಧುನಿಕ ಕನ್ನಡ ಸಾಹಿತ್ಯ, ಸಾಹಿತ್ಯತತ್ವ ಮತ್ತು ವಿಮರ್ಶೆ ಹಾಗೂ ತೌಲನಿಕ ಅಧ್ಯಯನ ವಿಷಯಗಳಲ್ಲಿ ವಿಶೇಷ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿದೆ. ಜಾನಪದ ವಸ್ತು ಸಂಗ್ರಹಾಲಯ ಮತ್ತು ಕನ್ನಡ ಕೇಂದ್ರಗಳನ್ನು ಇದು ಒಳಗೊಂಡಿದೆ. ಕೆಳಗಿನ ವೃತ್ತಚಿತ್ರದಲ್ಲಿ ಕನ್ನಡ ಸಾಹಿತ್ಯ ಸ್ನಾತಕೋತ್ತರ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಪ್ರತಿಶತ ಪ್ರಮಾಣ ತಿಳಿಸಲಾಗಿದೆ.




ಕುವೆಂಪು ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರತಿಶತ ಪ್ರಮಾಣ

ಕುವೆಂಪು ವಿಶ್ವವಿದ್ಯಾಲಯವು ಒದಗಿಸಿದ ಮಾಹಿತಿಯ ಪ್ರಕಾರ ೧೯೯೩-೨೦೦೮ರ ವರೆಗಿನ ಕನ್ನಡ ಸ್ನಾತಕೋತ್ತರ ಒಟ್ಟು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ೫೩೧ ಆಗಿದ್ದಾರೆ. ಮೇಲಿನ ವೃತ್ತಚಿತ್ರದಲ್ಲಿ ತೋರಿಸಿದಂತೆ ಪ್ರತಿಶತ ೬೫ರಷ್ಟು ವಿದ್ಯಾರ್ಥಿಗಳು ಮತ್ತು ಪ್ರತಿಶತ ೩೫ರಷ್ಟು ವಿದ್ಯಾರ್ಥಿನಿಯರು ಕನ್ನಡ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ೫೩೧ರಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಕ್ರಮವಾಗಿ ೪೧ ಮತ್ತು ೨೦ ಆಗಿದ್ದಾರೆ.

ಗುಲಬರ್ಗಾ ವಿಶ್ವವಿದ್ಯಾಲಯ

ಈ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಸಂಸ್ಥೆ ಮೊದಲು ಪ್ರಾರಂಭವಾಗಿದೆ. ಈ ವಿಭಾಗದ ಕಟ್ಟಡದಲ್ಲಿ ಕನ್ನಡ, ಇಂಗ್ಲಿಷ್, ಹಿಂದಿ, ಉರ್ದು, ಮರಾಠಿ ಮತ್ತು ಸಂಸ್ಕೃತ ವಿಭಾಗಗಳಿವೆ.


ದೊರೆತ ಮಾಹಿತಿಯ ಪ್ರಕಾರ ೧೯೮೩-೨೦೦೮ರ ವರೆಗಿನ ಒಟ್ಟು ವಿದ್ಯಾರ್ಥಿ ವಿದ್ಯಾರ್ಥಿನಿಯರ ಒಟ್ಟು ಸಂಖ್ಯೆ ೮೮೫. ಗುಲಬರ್ಗಾ ವಿಶ್ವವಿದ್ಯಾಲಯವು ಪ್ರತಿಶತ ೭೭ ವಿದ್ಯಾರ್ಥಿಗಳು ಹಾಗೂ ಪ್ರತಿಶತ ೨೩ ವಿದ್ಯಾರ್ಥಿನಿಯರು ಕನ್ನಡ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.



ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರತಿಶತ ಪ್ರಮಾಣ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಈ ವಿಶ್ವವಿದ್ಯಾಲಯವು ಕನ್ನಡ ವಿಭಾಗದ ಪ್ರತ್ಯೇಕವಾದ ಕಟ್ಟಡವನ್ನು ಹೊಂದಿದೆ. ಈ ಕನ್ನಡ ವಿಭಾಗವನ್ನು ಆರ್.ಸಿ. ಹೀರೆಮಠ ಕನ್ನಡ ಅಧ್ಯಯನ ಪೀಠವೆಂದು ಕರೆಯಲಾಗಿದೆ. ಇಲ್ಲಿ ಜಾನಪದ, ಭಾಷಾಶಾಸ್ತ್ರ, ತೌಲನಿಕ ಅಧ್ಯಯನಗಳಿಗೆ ಹೆಚ್ಚಿನ ಮಹತ್ವ ನೀಡಲಾಗಿದೆ.




ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರತಿಶತ ಪ್ರಮಾಣ

೧೯೫೪-೨೦೦೫ರ ವರೆಗಿನ ಕನ್ನಡ ಸ್ನಾತಕೋತ್ತರ ಒಟ್ಟು ವಿದ್ಯಾರ್ಥಿ ವಿದ್ಯಾರ್ಥಿನಿಯರು ೨೮೮೧ ಆಗಿದ್ದಾರೆ. ಮೇಲಿನ ವೃತ್ತಚಿತ್ರದಲ್ಲಿ ಪ್ರತಿಶತ ೭೭ ವಿದ್ಯಾರ್ಥಿಗಳು ಮತ್ತು ಪ್ರತಿಶತ ೨೩ ರಷ್ಟು ವಿದ್ಯಾರ್ಥಿನಿಯರು ಕನ್ನಡ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಇವರಲ್ಲಿ ಪರಿಶಿಷ್ಟ ಜಾತಿಯ ೨೯೨ ವಿದ್ಯಾರ್ಥಿಗಳು ಮತ್ತು ಪರಿಶಿಷ್ಟ ಪಂಗಡದ ೧೪೨ ವಿದ್ಯಾರ್ಥಿಗಳೂ ಇದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯ

ಬೆಂಗಳೂರಿನಿಂದ ೧೮ ಕಿ.ಮಿ. ಮಿಟರ್ ದೂರದಲ್ಲಿರುವ ಈ ವಿಶ್ವವಿದ್ಯಾಲಯಕ್ಕೆ 'ಜ್ಞಾನಭಾರತಿ' ಎಂದು ಕರೆಯುತ್ತಾರೆ. ಈ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗವು ಒಂದು ಪ್ರತ್ಯೇಕವಾದ ಕಟ್ಟಡವನ್ನು ಹೊಂದಿದೆ. ಈ ಕನ್ನಡ ಅಧ್ಯಯನ ಸಂಸ್ಥೆಯು ತೌಲನಿಕ ಅಧ್ಯಯನ ಹಾಗೂ ಸಾಹಿತ್ಯ ವಿಷಯಗಳಲ್ಲಿ ಪದವಿ ನೀಡುತ್ತಿದೆ.



ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರತಿಶತ ಪ್ರಮಾಣ


ಕನ್ನಡ ವಿಭಾಗವು ನೀಡಿದ ಮಾಹಿತಿಯ ಪ್ರಕಾರ ೧೯೮೦ರವರೆಗಿನ ಕನ್ನಡ ಸ್ನಾತಕೋತ್ತರ ಒಟ್ಟು ವಿದ್ಯಾರ್ಥಿ-ವಿದ್ಯಾರ್ಥಿನಿಯರು ೧೬೧೬ ಆಗಿದ್ದಾರೆ. ಪ್ರತಿಶತ ೫೬ ವಿದ್ಯಾರ್ಥಿ ಹಾಗೂ ಪ್ರತಿಶತ ೪೪ ವಿದ್ಯಾರ್ಥಿನಿಯರು ಕನ್ನಡ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಇದನ್ನು ಮೇಲಿನ ಚಿತ್ರದಲ್ಲಿ ತೋರಿಸಲಾಗಿದೆ. ೧೬೧೬ರಲ್ಲಿ ಪರಿಶಿಷ್ಟಜಾತಿ ೩೪೪ ಮತ್ತು ಪರಿಶಿಷ್ಟಪಂಗಡ ೬೭ ಇದ್ದಾರೆ.

ಮೈಸೂರು ವಿಶ್ವವಿದ್ಯಾಲಯ

ಕನ್ನಡ ವಿಭಾಗವು ಪ್ರತ್ಯೇಕವಾದ ಕಟ್ಟಡವನ್ನು ಹೊಂದಿದೆ. ಈ ವಿಭಾಗಕ್ಕೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಎಂದು ಕರೆಯುತ್ತಾರೆ. ೧೯೧೬ರಿಂದಲೂ ಕನ್ನಡ ಸಾಹಿತ್ಯ ಸ್ನಾತಕೋತ್ತರ ಪ್ರಾರಂಭವಾಗಿತ್ತು. ಪ್ರಸ್ತುತ ಲಭ್ಯವಿರುವ ಮಾಹಿತಿ ೩೭ ವರ್ಷಗಳವರಿಗಿನದು ಮಾತ್ರವಾಗಿದೆ.

ಮುಂದಿನ ವೃತ್ತಚಿತ್ರದಲ್ಲಿ ದೊರೆಕಿದ ಮಾಹಿತಿಯು ೧೯೭೩-೭೪, ೧೯೭೭-೭೮ ಮತ್ತು ೧೯೮೦ ರಿಂದ ೨೦೦೮ರವರೆಗಿನ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ೨೨೩೮ ಆಗಿದ್ದಾರೆ. ಮುಂದಿನ ವೃತ್ತಚಿತ್ರದಲ್ಲಿ ತೋರಿಸಿದಂತೆ, ಪ್ರತಿಶತ ೬೮ ವಿದ್ಯಾರ್ಥಿಗಳು ಹಾಗೂ ಪ್ರತಿಶತ ೩೨ ರಷ್ಟು


ವಿದ್ಯಾರ್ಥಿನಿಯರು ಕನ್ನಡ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಈ ಸಂಖ್ಯೆಯಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳು ೨೧೮ ಹಾಗೂ ೮೯ ಆಗಿದ್ದಾರೆ.



ಮೈಸೂರು ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರತಿಶತ ಪ್ರಮಾಣ

ಕರ್ನಾಟಕರಾಜ್ಯ ಮುಕ್ತವಿಶ್ವವಿದ್ಯಾಲಯ

ಪ್ರಾರಂಭದಲ್ಲಿ ಅಂಚೆ ಮತ್ತು ತೆರಪಿನ ಶಿಕ್ಷಣ ನೀಡುತ್ತಿತ್ತು. ಆನಂತರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಸ್ವತಂತ್ರ ವಿಶ್ವವಿದ್ಯಾಲಯವಾಯಿತು. ಕಲಿಯುವವರ ಮನೆಬಾಗಿಲಿಗೆ ಉನ್ನತ ಶಿಕ್ಷಣವನ್ನು ಕೊಂಡೊಯ್ಯುವುದರ ಮೂಲಕ ಉನ್ನತ ಶಿಕ್ಷಣವನ್ನು ಸಾರ್ವತ್ರಿಕರಣಗೊಳ್ಳುವುದು ಈ ಧ್ಯೇಯದ ಹಿನ್ನಲೆಯಲ್ಲಿ ಕನ್ನಡ ಸಾಹಿತ್ಯ ಅಧ್ಯಯನವು ಪ್ರಾರಂಭಿಸಿತು.




ಮೈಸೂರು ಮುಕ್ತವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರತಿಶತ ಪ್ರಮಾಣ

ವಿಶ್ವವಿದ್ಯಾಲಯವು ನೀಡಿದ ಮಾಹಿತಿಯ ಪ್ರಕಾರ ೧೯೯೬ರಿಂದ ೨೦೦೭ರವರೆಗಿನ ಕನ್ನಡ ಸಾಹಿತ್ಯ ಸ್ನಾತಕೋತ್ತರ ಒಟ್ಟು ವಿದ್ಯಾರ್ಥಿ ವಿದ್ಯಾರ್ಥಿನೀಯರು ಒಟ್ಟು ೭೩೯೧ ಆಗಿದ್ದಾರೆ. ಮೇಲಿನ ಚಿತ್ರದಲ್ಲಿ ತೋರಿಸಿದಂತೆ ಪ್ರತಿಶತ ೫೨ ವಿದ್ಯಾರ್ಥಿ ಮತ್ತು ಪ್ರತಿಶತ ೪೮ ವಿದ್ಯಾರ್ಥಿನಿಯರು ಕನ್ನಡ ಸ್ನಾತಕೋತ್ತರ ಪಡೆದಿದ್ದಾರೆ. ಇಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡದ ವಿದ್ಯಾರ್ಥಿಗಳು ಕ್ರಮವಾಗಿ ೬೬೭ ಮತ್ತು ೨೬೫ ಆಗಿದ್ದಾರೆ.

ಮಂಗಳೂರು ವಿಶ್ವವಿದ್ಯಾಲಯ

೧೯೮೦ರಲ್ಲಿ ಅಸ್ತಿತ್ವಕ್ಕೆ ಬಂದಿರುವ ಈ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾದ ಯಾವುದೇ ರೀತಿಯ ಕಟ್ಟಡ ವಿಲ್ಲ ಕನ್ನಡ ಅಧ್ಯಯನ ಜೊತೆಗೆ ತುಳು ಸಾಹಿತ್ಯ ಅಧ್ಯಯನಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ.




ಮಂಗಳೂರು ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರತಿಶತ ಪ್ರಮಾಣ

ದೊರೆತಿರುವ ಮಾಹಿತಿಯ ಪ್ರಕಾರ ೧೯೯೦-೨೦೦೮ರವರೆಗಿನ ಕನ್ನಡ ಸ್ನಾತಕೋತ್ತರ ಒಟ್ಟು ವಿದ್ಯಾರ್ಥಿ-ವಿದ್ಯಾರ್ಥಿನಿಯರು ೫೨೬ ಆಗಿದ್ದಾರೆ. ಮೇಲಿನ ಚಿತ್ರದಲ್ಲಿ ತೋರಿಸಿದಂತೆ, ಪ್ರತಿಶತ ೩೨ರಷ್ಟು ವಿದ್ಯಾರ್ಥಿ ಮತ್ತು ಪ್ರತಿಶತ ೬೮ರಷ್ಟು ವಿದ್ಯಾರ್ಥಿನಿಯರು ಕನ್ನಡ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ೫೨೬ರಲ್ಲಿ ೭೯ ಮತ್ತು ೨೮ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡದವರೂ ಇದ್ದಾರೆ.

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂಶೋಧನೆಗೆ ಮಹತ್ವ ನೀಡಲಾಗಿದೆ. ಕನ್ನಡ ವಿಭಾಗವು ಪ್ರತ್ಯೇಕವಾದ ಕಟ್ಟಡಗಳನ್ನು ಒಳಗೊಂಡಿದೆ ಕನ್ನಡ ಸಾಹಿತ್ಯ ದ್ರಾವಿಡ ಅಧ್ಯಯನ ಹಸ್ತಪ್ರತಿ, ಭಾಷಾಂತರ ವಿವಿಧ ವಿಭಾಗಗಳನ್ನು ಹೊಂದಿದ್ದು ಕನ್ನಡ ಸ್ನಾತಕೋತ್ತರ ಅಧ್ಯಯನದಲ್ಲಿ

ಪಾಲ್ಗೊಂಡಿವೆ. ಈ ವಿಶ್ವವಿದ್ಯಾಲಯದಲ್ಲಿ ಕನ್ನಡ ಸಾಹಿತ್ಯ ಸ್ನಾತಕೋತ್ತರ ಪದವಿಯು ೨೦೦೨-೨೦೦೩ರಲ್ಲಿ ಪ್ರಾರಂಭವಾಯಿತು. ೨೦೦೨-೨೦೦೭ರವರೆಗಿನ ಕನ್ನಡ ಸ್ನಾತಕೋತ್ತರ ಒಟ್ಟು ವಿದ್ಯಾರ್ಥಿ ವಿದ್ಯಾರ್ಥಿನಿಯರು ೭೦ ಮಂದಿ ಆಗಿದ್ದಾರೆ. ಚಿತ್ರದಲ್ಲಿ ತೋರಿಸಿದಂತೆ ಪ್ರತಿಶತ ೪೬ ವಿದ್ಯಾರ್ಥಿ ಮತ್ತು ಪ್ರತಿಶತ ೫೪ ವಿದ್ಯಾರ್ಥಿನಿಯರು ಸ್ನಾತಕೋತ್ತರ ಪದವಿಯನ್ನು ಪಡೆದಿದಾರೆ. ಇವರಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡ ೧೧ ಮತ್ತು ೬ ಆಗಿದೆ.



ಹಂಪಿ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರತಿಶತ ಪ್ರಮಾಣ

ಇವುಗಳ ಜೊತೆಗೆ ಮಹಾರಾಷ್ಟ್ರದ ಮುಂಬೈ ವಿಶ್ವವಿದ್ಯಾಲಯದ ಒಟ್ಟು ಕನ್ನಡ ಸಾಹಿತ್ಯ ಸ್ನಾತಕೋತ್ತರ ವಿದ್ಯಾಥಿಗಳ ಸಂಖ್ಯೆ ೪೬೭ರಷ್ಟಿದೆ. ಕಣ್ಣನೂರು ವಿಶ್ವವಿದ್ಯಾಲಯವು ಕಾಸರಗೂಡು ಜಿಲ್ಲೆಯಲ್ಲಿ ಸ್ಥಾಪಿಸಿರುವ ಕನ್ನಡ ಸ್ನಾತಕೋತ್ತರ ವಿಭಾಗದಲ್ಲಿ ಈವರೆಗೆ ಅಧ್ಯಯನ ಮಾಡಿರುವ ಕನ್ನಡ ಸ್ನಾತಕೋತ್ತರ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ೪೧೫ ಆಗಿದೆ.

ವಿಭಾಗಗಳು	ರಾಜ್ಯ ಜನಸಂಖ್ಯೆ ೨೦೦೧	ಪ್ರಾಥಮಿಕ ಮತ್ತು ಪ್ರೌಢ ದಾಖಲಾತಿ	ಕನ್ನಡ ಸಾಹಿತ್ಯ ವಿದ್ಯಾರ್ಥಿಗಳು
ದಕ್ಷಿಣ ಕರ್ನಾಟಕ	೩೦,೨೮೨,೧೧೩ (~~೫೭.೩೦~~)	೫,೩೧೩,೬೯೨ (~~೫೩.೪೮~~)	೧೨,೨೦೩ (~~೭೦.೮೧~~)
ಉತ್ತರ ಕರ್ನಾಟಕ	೨೨,೫೬೮,೪೪೯ (~~೪೨.೭೦~~)	೪,೬೨೨,೯೧೯ (~~೪೬.೫೨~~)	೩,೦೩೦ (~~೨೯.೧೮~~)
ರಾಜ್ಯ	೫೨,೮೫೦,೫೬೨	೯,೯೩೬,೬೧೧ (18%)	೧೭,೨೩೩ (0.3%)


ಪ್ರಾಥಮಿಕ, ಪ್ರೌಢಶಿಕ್ಷಣ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರಮಾಣ

ಮೇಲಿನ ಪಟ್ಟಿಯನ್ನು ರಾಜ್ಯದ ಒಟ್ಟು ೫೨,೮೫೦,೫೬೨ ಆಗಿದೆ. ಇದರಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಪಡೆದ ವಿದ್ಯಾರ್ಥಿಗಳು ೯,೯೩೬,೬೧೧ ಇದರಲ್ಲಿ ದಕ್ಷಿಣ ಕರ್ನಾಟಕ ವಿಭಾಗದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳ ಸಂಖ್ಯೆ ೫,೩೧೩,೯೯೨ ಆಗಿದೆ. ಅದೇ ರೀತಿ ಉತ್ತರ ಕರ್ನಾಟಕದಲ್ಲಿ ವ್ಯಾಸಂಗ ಮಾಡಿದವರ ಸಂಖ್ಯೆ ४,೬೨೨,೯೧೯ ಆಗಿದ್ದಾರೆ. ಸದ್ಯಕ್ಕೆ ೫೨,೮೫೦,೫೬೨ರಲ್ಲಿ ೧೨,೨೦೩ ಮತ್ತು ೫,೦೩೦ ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕ ಕನ್ನಡ ಸಾಹಿತ್ಯ ವಿದ್ಯಾರ್ಥಿಗಳಾಗಿದ್ದಾರೆ ಎಂಬುದನ್ನು ಪಟ್ಟಿಯಲ್ಲಿ ಗಮನಿಸಬಹುದು.

ಇವುಗಳ ಜೊತೆಗೆ ಮಹಾರಾಷ್ಟ್ರದ ಮುಂಬೈ ವಿಶ್ವವಿದ್ಯಾಲಯದ ಒಟ್ಟು ಕನ್ನಡ ಸಾಹಿತ್ಯ ಸ್ನಾತಕೋತ್ತರ ವಿದ್ಯಾರ್ಥಿಗಳ ಸಂಖ್ಯೆ ೪೬೭ ರಷ್ಟು ಹಾಗೂ ಕಣ್ಣನೂರು ವಿಶ್ವವಿದ್ಯಾಲಯವು ಕಾಸರಗೂಡು ಜಿಲ್ಲೆಯಲ್ಲಿ ಸ್ಥಾಪಿಸಿರುವ ಕನ್ನಡ ಸ್ನಾತಕೋತ್ತರ ವಿಭಾಗದಲ್ಲಿ ಅಧ್ಯಯನ ಮಾಡಿರುವ ಕನ್ನಡ ವಿದ್ಯಾರ್ಥಿಗಳು ४೧೫ ಆಗಿದೆ.

ಈ ಕೋಷ್ಟಕಗಳನ್ನು ಗಮನಿಸುತ್ತಾ ಹೊದಂತೆಲ್ಲಾ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಸಾಹಿತ್ಯ ವಿದ್ಯಾರ್ಥಿ ವಿದ್ಯಾರ್ಥಿನಿಯರ ಒಟ್ಟು ಸಂಖ್ಯೆ ೧೮,೨೨೭ ಆಗಿದೆ. ಈ ಸಂಖ್ಯೆಗಳಲ್ಲಿ ಪ್ರತಿಯೊಂದು ವಿಶ್ವವಿದ್ಯಾಲಯದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ಪ್ರಮಾಣದಲ್ಲಿ ವ್ಯತ್ಯಾಸವನ್ನು ಈ ಕೆಳಗೆ ತಿಳಿಸಲಾಗಿದೆ.

ಮೈಸೂರು, ಗುಲಬರ್ಗಾ, ಕುವೆಂಪು, ಬೆಂಗಳೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯಾಪ್ರಮಾಣ ವಿದ್ಯಾರ್ಥಿನಿಯರಿಗೆ ಹೋಲಿಸಿದರೆ ಕ್ರಮವಾಗಿ ೮೦೨, ೧೪೭, ೧೫೭, ೧೯೬ ಮತ್ತು ೧೫೩೩ ಏರಿಕೆಯಾಗಿದೆ. ಇವುಗಳಿಗೆ ವಿರುದ್ಧವಾಗಿ ಮಂಗಳೂರು ಮತ್ತು ಮೈಸೂರು ಮುಕ್ತ ವಿಶ್ವವಿದ್ಯಾಲಯದಲ್ಲಿ ೧೯೨ ಮತ್ತು ೨೪೧ ವಿದ್ಯಾರ್ಥಿನಿಯರ ಸಂಖ್ಯೆ ಏರಿಕೆಯಲ್ಲಿದೆ. ಈ ರೀತಿಯ ವಿದ್ಯಾರ್ಥಿಗಳ ಏರಿಕೆಗೆ ಎರಡು ಕಾರಣಗಳನ್ನು ಹೇಳಬಹುದು. ವಿದ್ಯಾರ್ಥಿನಿಯರು ಪೂರ್ಣಕಾಲಿಕ ವಿದ್ಯಾರ್ಥಿಗಳಂತೆ ಅಧ್ಯಯನ ನಡೆಸುವುದು ಕಡಿಮೆ ಹಾಗೂ ಹೆಚ್ಚು ವೃತ್ತಿಪರತೆ ಮತ್ತು ವೃತ್ತಿ ನೈಪುಣ್ಯ ತಂದುಕೊಡುವ ವೇಗಕ್ಕೆ ತಕ್ಕಂತೆ ಪದವಿ ಪಡೆಯುವ ಆಸಕ್ತಿಯಿಂದ ವಿದ್ಯಾರ್ಥಿಗು ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸುತ್ತಾರೆ. ಇನ್ನು ಮಂಗಳೂರು ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿನಿಯರೇ ಹೆಚ್ಚು. ದಕ್ಷಿಣ ಕನ್ನಡದಲ್ಲಿ [illegible] ಹೆಚ್ಚಿರುವುದರಿಂದ ವಿದ್ಯಾರ್ಥಿನಿಯರ ಪ್ರಮಾಣವೇ ಹೆಚ್ಚು.



ಕನ್ನಡ ಸ್ನಾತಕೋತ್ತರ ಪದವಿಧರ ವಿದ್ಯಾರ್ಥಿಗಳ ಪಂಚವಾರ್ಷಿಕ ಸಂಖ್ಯಾಪ್ರಮಾಣ

ಕನ್ನಡ ಸಾಹಿತ್ಯ ವಿದ್ಯಾರ್ಥಿ-ವಿದ್ಯಾರ್ದಿಗಳ ಪ್ರಮಾಣ ಇಂದು ಇಳಿಕೆಯಾಗುತ್ತಿದೆ ಎಂಬ ಅಭಿಪ್ರಾಯವಿದೆ. ಆದರೆ ದೊರೆತ ಮಾಹಿತಿಯ ಪ್ರಕಾರ ರಾಜ್ಯದಲ್ಲಿ ಕನ್ನಡ ಸಾಹಿತ್ಯ ವಿದ್ಯಾರ್ಥಿಗಳು ಹೆಚ್ಚಾಗುವುದನ್ನು ಮೇಲಿನ ರೇಖಾ ನಕ್ಷೆಯಲ್ಲಿ ಗಮನಿಸಬಹುದು.

ಈ ಮೇಲಿನ ಪಂಚವಾರ್ಷಿಕ ಸಂಖ್ಯಾಪ್ರಮಾಣವನ್ನು ಗಮನಿಸಿದರೆ ೧೯೪೫ ರಿಂದ ೧೯೯೨ರವರೆಗೆ ವಿದ್ಯಾರ್ಥಿಗಳ ಪ್ರಮಾಣ ೧೦೦೦ ಸಂಖ್ಯೆಯಲ್ಲಿ ಹೆಚ್ಚಾಗಿದ್ದು ಏರಿಕೆ ಕ್ರಮಾಂಕದಲ್ಲಿ ಸಾಗಿರುವುದು ಕಾಣಸಿಗುತ್ತದೆ. ೧೯೯೭-೨೦೦೦ ಮತ್ತು ೨೦೦೧-೨೦೦೬ರ ವರ್ಷಗಳಲ್ಲಿ ಕನ್ನಡ ಸಾಹಿತ್ಯ ಸ್ನಾತಕೋತ್ತರ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿರುವುದನ್ನು ರೇಖಾಚಿತ್ರದಲ್ಲಿ ನೋಡಬಹುದಾಗಿದೆ.

ಅಧ್ಯಾಯ ೬

ಸಮಾರೋಪ

ಇದುವರೆಗಿನ ಅಧ್ಯಯನದ ಫಲಿತಾಂಶಗಳನ್ನು ಹೀಗೆ ಕ್ರೋಢೀಕರಿಸಬಹುದಾಗಿದೆ.

೧. ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಅಧ್ಯಯನಗಳೇ ವಿರಳ. ಅದರಲ್ಲಿಯೂ ಕನ್ನಡ ಸ್ನಾತಕೋತ್ತರ ಪದವಿಗೆ ಸಂಬಂಧಿಸಿದಂತೆ ಇದುವರೆಗೆ ಈ ರೀತಿಯ ಅಧ್ಯಯನಗಳಾಗಿಲ್ಲ ಪ್ರಸ್ತುತ ಅಧ್ಯಯನವು ಆ ಕೊರತೆಯನ್ನು ಗಮನದಲ್ಲಿರಿಸಿ ನಡೆಸಿದ ಅಧ್ಯಯನವಾಗಿದೆ.

೨. ಸಂಗ್ರಹಿಸಿದ ಬೇರೆ ಬೇರೆ ಮಾಹಿತಿಗಳ ಆಧಾರದಿಂದ ಇಡೀ ಕರ್ನಾಟಕದಲ್ಲಿ ೧೪,೦೩೪ ಸ್ನಾತಕೋತ್ತರ ವಿದ್ಯಾರ್ಥಿಗಳಿದ್ದಾರೆಂಬುದಾಗಿ ಅಂದಾಜು ಮಾಡಲಾಗಿದೆ.

೩. ಒಟ್ಟಾರೆ ರಾಜ್ಯದ ಜನಸಂಖ್ಯಾ ಪ್ರಮಾಣದಲ್ಲಿ ಪ್ರಾಥಮಿಕ ಮತ್ತು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಮತ್ತು ಪ್ರೌಢಶಾಲಾ ದಾಖಲಾತಿ ೯,೯೩೬,೬೧೧ರಷ್ಟಿದ್ದಾರೆ. ಕನ್ನಡ ಸಾಹಿತ್ಯ ಸ್ನಾತಕೋತ್ತರ ವಿದ್ಯಾರ್ಥಿಗಳ ಸಂಖ್ಯಾಪ್ರಮಾಣ ೧೭,೨೩೩ರಷ್ಟಿದೆ.

೪. ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ ಮತ್ತು ಮಂಗಳೂರು ವಿಶ್ವವಿದ್ಯಾಲಯಗಳಲ್ಲಿ ಮಾತ್ರ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಕನ್ನಡ ಸ್ನಾತಕೋತ್ತರ ಪದವಿ ಪಡೆದಿರುತ್ತಾರೆ. ಉಳಿದಂತೆ ಇತರೆ ವಿಶ್ವವಿದ್ಯಾಲಯಗಳಲ್ಲಿ ಪುರುಷರೇ ಅಧಿಕ ಸಂಖ್ಯೆಯಲ್ಲಿದ್ದಾರೆ.

೫. ಕನ್ನಡ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಂಖ್ಯೆ ಇಳಿಮುಖವಾಗಿದೆ ಎನ್ನುವ ಸರ್ವ ಸಾಧಾರಣ ಅಭಿಪ್ರಾಯಗಳಿಗೆ ಆಧಾರಗಳಿಲ್ಲ. ಕನ್ನಡ ಸ್ನಾತಕೋತ್ತರ ಪದವಿಧರರಿಗೆ ಗಣನೀಯ ವಾಗಿ ವಿದ್ಯಾರ್ಥಿಗಳು ಆಕರ್ಷಿತರಾಗುತ್ತಿದ್ದಾರೆ.

ಟಿಪ್ಪಣಿ

೧. ಮಹಿಳೆ ಮತ್ತು ಶಿಕ್ಷಣ ಪು. ೨೩

೨. ಕರ್ನಾಟಕ ಗ್ಯಾಸೆಟೆರ್ ಸಂಪುಟ-೩, ಪು. ೫೩

೩. ಅದೇ ಪು. ೫೨

೪. ಅದೇ ಪು. ೫೨

೫. ಅದೇ ಪು. ೫೨

೬. ಕನ್ನಡ ವಿಷಯ ವಿಶ್ವಕೋಶ ಸಂಪುಟ-೨, ಪು.೧೦೪೩

೭. ಯುಗಯತ್ರೀ ಭಾರತೀಯ ಸಂಸ್ಕೃತಿ, ಪು. ೪೮೯-೪೯೫

೮. ಅದೇ ಪು. ೪೯೮

೯. ಉನ್ನತ ಶಿಕ್ಷಣ ಪ್ರಗತಿಯತ್ತ ಪು. ೧೬

೧೦. ಕನ್ನಡ ವಿಷಯ ವಿಶ್ವಕೋಶ ಸಂಪುಟ-೧ ಪು. ೧೫೨

ಅನುಬಂಧ

ವಿಶ್ವವಿದ್ಯಾಲಯಗಳ ಕನ್ನಡ ಪಠ್ಯಕ್ರಮ ೨೦೦೩ರ ಮಾದರಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಎಂ.ಎ. ಪಿಎಚ್.ಡಿ. ಸಂಯೋಜಿತ ಪದವಿ ಕನ್ನಡ ಸಾಹಿತ್ಯ

I. ೧೧೦. ಮಧ್ಯಕಾಲೀನ ಸಾಹಿತ್ಯ-೧

೧೨೦. ಮಧ್ಯಕಾಲೀನ ಸಾಹಿತ್ಯ-೨

೧೩೦. ಸ್ವಾತಂತ್ರ ಪೂರ್ವ ಆಧುನಿಕ ಕಾವ್ಯ

೧೪೦. ಸ್ವಾತಂತ್ರ ಪೂರ್ವ ಕಥನ ಸಾಹಿತ್ಯ

೧೫೦. ಕಂಪ್ಯೂಟರ್ ಅಧ್ಯಯನ

II. ೨೧೦. ಚಂಪೂ ಸಾಹಿತ್ಯ

೨೨೦. ಮಧ್ಯಕಾಲಿನ ಸಾಹಿತ್ಯ-೨

೨೩೦. ಆಧುನಿಕ ಕಾವ್ಯ (ಸ್ವಾತಂತ್ರ್ಯೋತ್ತರ)

೧. ಸ್ವಾತಂತ್ರ್ಯೋತ್ತರ ಸಂದರ್ಭ ಮತ್ತು ಕಾವ್ಯ ದೃಷ್ಟಿ ತಾತ್ವಿಕ ಹಿನ್ನಲೆ

೨. ಪ್ರೇರಣೆ ಮತ್ತು ಪ್ರಭಾವಗಳು

೩. ಸ್ವಾತಂತ್ರ್ಯೋತ್ತರ ಕಾವ್ಯದಲ್ಲಿಯ ಕಾವ್ಯ ಸ್ವರೂಪ

೪. ಸ್ವಾತಂತ್ರ್ಯೋತ್ತರ ಕಾವ್ಯದ ರೂಪಗಳು ಮತ್ತು ವಿಭಿನ್ನ ಆಯಾಮಗಳು

೫. ಕವಿತೆಗಳ ಅಧ್ಯಯನ

೨೪೦. ಆಧುನಿಕ ಕಥನ ಸಾಹಿತ್ಯ-೨ (ಸ್ವಾತಂತ್ರ್ಯೋತ್ತರ)

೧. ಕನ್ನಡ ಕಥಾ ಸಾಹಿತ್ಯ ಕುರಿತ ಅಧ್ಯಯನಗಳು

೨. ಸ್ವಾತಂತ್ರ್ಯೋತ್ತರ ಕನ್ನಡ ಕಥಾ ಸಾಹಿತ್ಯದ ತಾತ್ವಿಕ ಸ್ವರೂಪಗಳು

೩. ಸ್ವಾತಂತ್ರ್ಯೋತ್ತರ ಕಥಾ ಸಾಹಿತ್ಯದ ಪ್ರವೃತ್ತಿಗಳು

೪. ಪಠ್ಯಗಳು

೨೫೦. ನಾಟಕ ಸಾಹಿತ್ಯ

೧. ಕನ್ನಡ ನಾಟಕ ಸಾಹಿತ್ಯದ ಇತಿಹಾಸ

೨. ಕನ್ನಡ ನಾಟಕ ಸಾಹಿತ್ಯಕ್ಕೆ ಅನ್ಯರಂಗಭೂಮಿ ಪ್ರಭಾವ ಪ್ರೇರಣೆ

೩. ನಾಟಕ ಸಾಹಿತ್ಯ ಕುರಿತ ಅಧ್ಯಯನಗಳು

೪. ನಾಟಕ್ಕ ರಂಗ ಪ್ರಯೋಗ ಕುರಿತ ಅಧ್ಯಯನಗಳು

III. ೩.೧೦. ಸಾಹಿತ್ಯ ಮತ್ತು ವಿಮರ್ಶೆ

೩.೨೦. ವಿಮರ್ಶೆಯ ಹುಟ್ಟು ಬೆಳವಣಿಗೆ

೩.೩೦. ಭಾಷಾಧ್ಯಯನ-೧

೩.೩೧. ದ್ರಾವಿಡ ಅಧ್ಯಯನ-೧

೩.೩೨. ಆಕರ ಶಾಸ್ತ್ರ-೧

IV. ೪೧೦. ಸಾಹಿತ್ಯ ಮತ್ತು ಸಂಸ್ಕೃತಿ

೧. ಸಾಂಸ್ಕೃತಿ ವಿಮರ್ಶೆಯ ಸ್ವರೂಪ

೨. ಸಾಹಿತ್ಯ ತತ್ವಗಳ ಸಾಂಸ್ಕೃತಿಕ ನೆಲೆಗಳು

೩. ಕೃತಿಗಳ ಜಗತ್ತಿನ ಸಾಂಸ್ಕೃತಿಕ ನೆಲೆಗಳು

೪. ಕೃತಿಗಳ ಪರಿಣಾಮಗಳ ವಿಶ್ಲೇಷಣೆಯಲ್ಲಿ ಪ್ರವೃತ್ತವಾಗುವ ಸಾಂಸ್ಕೃತಿಕ ನೆಲೆಗಳು

೫. ಸಾಹಿತ್ಯವೆಂಬ ಸಂಸ್ಥೆ ರೂಪುಗೊಂಡ ಕ್ರಮ

೪೨೦. ಸಾಹಿತ್ಯ ವಿಮರ್ಶೆ

೧. ವಿಮರ್ಶೆ ಹುಟ್ಟು ಮತ್ತು ಬೆಳವಣಿಗೆ

೨. ಸಾಹಿತ್ಯ ವಿಮರ್ಶೆಯ ಮಾದರಿಗಳು

೩. ಪಾಶ್ಚಾತ್ಯ ವಿಮರ್ಶೆ ಮಾದರಿಗಳು

೪. ಕನ್ನಡ ಸಾಹಿತ್ಯ ವಿಮರ್ಶೆ ಮತ್ತು ವಿವಿಧ ಪಥಿಗಳು ಹಾಗೂ ವಾಧಗಳು

೫. ಕನ್ನಡ ವಿಮರ್ಶೆ ಮತ್ತು ವಿಮರ್ಶಾ ಚಿಂತಕರು

೪೩೦. ಭಾಷಾಧ್ಯಯನ-೨

೪೪೧. ಭಾಷಾಂತರ ಅಧ್ಯಯನ-೨

೪೪೨. ದ್ರಾವಿಡ ಅಧ್ಯಯನ-೨

೪೪೪. ಆಕರ ಶಾಸ್ತ್ರ-೨

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸ್ನಾತಕೋತ್ತರ ಕನ್ನಡ ಪಠ್ಯಕ್ರಮ

I. ೧.೧ ಪ್ರಾಚೀನ ಕನ್ನಡ ಸಾಹಿತ್ಯ ಅಧ್ಯಯನ (ಆಯ್ದ ಪಠ್ಯಗಳು)

೧.೨ ತೌಲನಿಕ ಕಾವ್ಯಮೀಮಾಂಸೆ ಮತ್ತು ಕನ್ನಡ ಸಾಹಿತ್ಯ ವಿಮರ್ಶೆ ಅಧ್ಯಯನ

೧.೩ ಕನ್ನಡ ಸಾಹಿತ್ಯ ಚರಿತ್ರೆಯ ಅಧ್ಯಯನ-೧ (ಪ್ರಾಚೀನ ಮತ್ತು ಮಧ್ಯಕಾಲೀನ)

೧.೪ ಐಚ್ಛಿಕ ಪತ್ರಿಕೆ

೧.೪.೧. ಪ್ರಾಚಿನ / ಮಧ್ಯಕಾಲೀನ ಕನ್ನಡ ಸಾಹಿತ್ಯ ರೂಪಗಳ ಅಧ್ಯಯನ (ಆಯ್ದ ಪಠ್ಯಗಳು)

೧.೪.೨. ಸೃಜನ ಸಾಹಿತ್ಯ ಅಧ್ಯಯನ

೧.೪.೩. ಸಾಹಿತ್ಯ ಕೃತಿಗಳ ಸಾಂಸ್ಕೃತಿಕ ಅಧ್ಯಯನ (ಆಯ್ದ ಪಠ್ಯಗಳು)

೧.೪.೪. ಸಾಮಾನ್ಯ ಭಾಷಾ ವಿಜ್ಞಾನ ಅಧ್ಯಯನ

೧.೪.೫. ಇಂಗ್ಲಿಷ್/ ಹಿಂದಿ/ ಮರಾಠಿ/ ಸಂಸ್ಕೃತ/ ಭಾಷಾ ವಿಜ್ಞಾನ, ಇತ್ಯಾದಿ ವಿಷಯಗಳ ಐಚ್ಛಿಕ ಪತ್ರಿಕೆ

II. ೨.೧ ನಡುಗನ್ನಡ ಸಾಹಿತ್ಯ ಅಧ್ಯಯನ (ಆಯ್ದ ಪಠ್ಯಗಳು)

೨.೨ ಕನ್ನಡ ಸಾಹಿತ್ಯ ಚರಿತ್ರೆ ಅಧ್ಯಯ-೨ (ಆಧುನಿಕ ಕಾಲ)

೨.೩ ಕರ್ನಾಟಕ ಸಂಸ್ಕೃತಿ ಅಧ್ಯಯನ

೨.೪ ಐಚ್ಛಿಕ ಪತ್ರಿಕೆ

೨.೪.೧ ವಿಶೇಷ ಕವಿ / ಸಾಹಿತಿಯ ಅಧ್ಯಯನ (ಆಯ್ದ ಪಠ್ಯಗಳು)

೨.೪.೨ ಧಾರ್ಮಿಕ ಸಾಹಿತ್ಯ ಅಧ್ಯಯನ (ಆಯ್ದ ಪಠ್ಯಗಳು)

೨.೪.೩ ಆಧುನಿಕ ಕನ್ನಡ ಸಾಹಿತ್ಯ ರೂಪಗಳ ಅಧ್ಯಯನ (ಆಯ್ದ ಪಠ್ಯಗಳು)

೨.೪.೪ ಕನ್ನಡ ಜನಪದ ಸಾಹಿತ್ಯ ಅಧ್ಯಯನ

೨.೪.೫ ಇಂಗ್ಲಿಷ್/ ಹಿಂದಿ/ ಮರಾಠಿ/ ಸಂಸ್ಕೃತ/ ಭಾಷಾ ವಿಜ್ಞಾನ ಇತ್ಯಾದಿ ವಿಷಯಗಳ ಐಚ್ಛಿಕ ಪತ್ರಿಕೆ

III. ೩.೧ ಆಧುನಿಕ ಕನ್ನಡ ಸಾಹಿತ್ಯ ಅಧ್ಯಯನ-೧

೩.೨ ತೌಲನಿಕ ಕನ್ನಡ ವ್ಯಾಕರಣ ಅಧ್ಯಯನ

೩.೩ ಛಂದಸ್ಸು ಮತ್ತು ಗ್ರಂಥ ಸಂಪಾದನೆ ಅಧ್ಯಯನ

೩.೪ ಐಚ್ಛಿಕ ಪತ್ರಿಕೆ

೩.೪.೧ ಕನ್ನಡ ಶಾಸನಗಳ ಅಧ್ಯಯನ

೩.೪.೨ ಕನ್ನಡ ರಂಗಭೂಮಿ ಅಧ್ಯಯನ

೩.೪.೩ ಕನ್ನಡ ಮಹಿಳಾ ಸಾಹಿತ್ಯ ಅಧ್ಯಯನ

೩.೪.೪ ಭಾಷಾಂತರ ಅಧ್ಯಯನ

೩.೪.೫ ಇಂಗ್ಲಿಷ್/ ಹಿಂದಿ/ ಮರಾಠಿ/ ಸಂಸ್ಕೃತ/ ಭಾಷಾ ವಿಜ್ಞಾನ ಇತ್ಯಾದಿ ವಿಷಯಗಳ ಐಚ್ಛಿಕ ಪತ್ರಿಕೆ

IV. ೪.೧ ಆಧುನಿಕ ಕನ್ನಡ ಸಾಹಿತ್ಯ ಅಧ್ಯಯನ-೨ (ಆಯ್ದ ಪಠ್ಯಗಳು)

೪.೨ ತೌಲನಿಕ ದ್ರಾವಿಡ ಭಾಷಾ ವಿಜ್ಞಾನ ಅಧ್ಯಯನ

೪.೩ ಕನ್ನಡ ಸಾಹಿತ್ಯ ಸಂಶೋಧನೆ ಅಧ್ಯಯನ

೪.೪ ಐಚ್ಛಿಕ ಪತ್ರಿಕೆ

೪.೪.೧ ಪ್ರಾಯೋಗಿಕ ವಿಮರ್ಶೆಯ ಅಧ್ಯಯನ

೪.೪.೨ ಹಸ್ತಪ್ರತಿ ಶಾಸ್ತ್ರ ಅಧ್ಯಯನ

೪.೪.೩ ಭಾರತೀಯ ಸಾಹಿತ್ಯ ಅಧ್ಯಯನ

೪.೪.೪ ನಾಮ ವಿಜ್ಞಾನ - ನಿಘಂಟು ವಿಜ್ಞಾನ ಅಧ್ಯಯನ

೪.೪.೫ ಇಂಗ್ಲಿಷ್/ ಹಿಂದಿ/ ಮರಾಠಿ/ ಸಂಸ್ಕೃತ/ ಭಾಷಾ ವಿಜ್ಞಾನ ಇತ್ಯಾದಿ ವಿಷಯಗಳ ಐಚ್ಛಿಕ ಪತ್ರಿಕೆ

ಕುವೆಂಪು ವಿಶ್ವವಿದ್ಯಾಲಯ

೨೦೦೫-೨೦೦೮ ಪಠ್ಯಕ್ರಮ

I. ೧.೧ ಪ್ರಾಚೀನ ಕನ್ನಡ ಸಾಹಿತ್ಯ

೧.೨ ಭಾಷಾ ವಿಜ್ಞಾನ ಮತ್ತು ಛಂದಸ್ಸು

೧.೩ ಕನ್ನಡ ಸಾಹಿತ್ಯ ಹಿನ್ನಲೆ, ಪ್ರೇರಣೆ, ಪ್ರಭಾವಗಳು

೧.೪.೧ ಜಾನಪದ ವಿಜ್ಞಾನ ಮೂಲತತ್ವಗಳು

೧.೪.೨ ಆಧುನಿಕ ಕನ್ನಡ ಸಾಹಿತ್ಯ ಕಾವ್ಯ

೧.೪.೩ ತೌಲನಿಕ ಸಾಹಿತ್ಯ ತತ್ವಗಳು

೧.೫.೧ ಜಾನಪದ ವಿಜ್ಞಾನ ಕನ್ನಡ ಜನಪದ ಸಾಹಿತ್ಯ

೧.೫.೨ ಆಧುನಿಕ ಕನ್ನಡ ಸಾಹಿತ್ಯ ಸಣ್ಣಕತೆ

೧.೫.೩ ತೌಲನಿಕ ಸಾಹಿತ್ಯ ಗ್ರೀಕ್ ಮತ್ತು ಇಂಗ್ಲಿಷ್ ಕಾವ್ಯ

II. ೨.೧ ಮಧ್ಯಕಾಲೀನ ಕನ್ನಡ ಸಾಹಿತ್ಯ

೨.೨ ಕರ್ನಾಟಕ ಸಂಸ್ಕೃತಿ ಅಧ್ಯಯನ

೨.೩.೧ ಜಾನಪದ ವಿಜ್ಞಾನ ಅಧ್ಯಯನ ಇತಿಹಾಸ

೨.೩.೨ ಆಧುನಿಕ ಕನ್ನಡ ಸಾಹಿತ್ಯ ಕಾವ್ಯ

೨.೩.೩ ತೌಲನಿಕ ಸಾಹಿತ್ಯ : ತತ್ವಗಳು ವಿಧಾನಗಳು

೨.೪.೧ ಜಾನಪದ ವಿಜ್ಞಾನ ಜನಪದ ಸಾಹಿತ್ಯ

೨.೪.೨ ಆಧುನಿಕ ಕನ್ನಡ ಸಾಹಿತ್ಯ ನಾಟಕ ಗ್ರೀಕ್ ಮತ್ತು ಇಂಗ್ಲಿಷ್ ನಾಟಕ

ಐಚ್ಛಿಕ ಅನ್ಯ ವಿಭಾಗದ ವಿದ್ಯಾರ್ಥಿಗಳಿಗೆ

೨.೫.೧ ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯ ಇತಿಹಾಸ

೨.೫.೨ ಕನ್ನಡ ಜನಪದ ಸಾಹಿತ್ಯ

೨.೫.೩ ಕನ್ನಡ ಭಾಷಾ ಕಲಿಕೆ

III. ೩.೧ ಹೊಸಗನ್ನಡ ಸಾಹಿತ್ಯ : ಕಾವ್ಯ ಸಣ್ಣಕಥೆ, ಕಾದಂಬರಿ

೩.೨ ತೌಲನಿಕ ಕಾವ್ಯ ಮೀಮಾಂಸೆ

೩.೩.೧ ಜಾನಪದ ವಿಜ್ಞಾನ : ಸಾಹಿತ್ಯೇತರ ಜಾನಪದ

೩.೩.೨ ಆಧುನಿಕ ಕನ್ನಡ ಸಾಹಿತ್ಯ : ಕಾದಂಬರಿ

೩.೩.೩ ತೌಲನಿಕ ಸಾಹಿತ್ಯ : ಭಾರತೀಯ ಕಾವ್ಯ ಮತ್ತು ಸಣ್ಣಕಥೆ

೩.೪.೧ ಜಾನಪದ ವಿಜ್ಞಾನ ಸಿದ್ಧಾಂತಗಳು

೩.೪.೨ ಆಧುನಿಕ ಕನ್ನಡ ಸಾಹಿತ್ಯ : ವಿಮರ್ಶೆ

೩.೪.೩ ತೌಲನಿಕ ಸಾಹಿತ್ಯ : ರಷ್ಯನ್ ಮತ್ತು ಫ್ರೆಂಚ್ ಸಣ್ಣಕಥೆ

ಐಚ್ಛಿಕ ಅನ್ಯ ವಿಭಾಗದ ವಿದ್ಯಾರ್ಥಿಗಳಿಗೆ

೩.೫.೧ ಆಧುನಿಕ ಕನ್ನಡ ಸಾಹಿತ್ಯ

೩.೫.೨ ಜಾನಪದ ಅಧ್ಯಯನ

೩.೫.೩ ಕನ್ನಡ ಭಾಷಾ ಕಲಿಕೆ

IV. ೪.೧ ಹೊಸಗನ್ನಡ ಸಾಹಿತ್ಯ : ನಾಟಕ ವಿಮರ್ಶೆ, ವಿಚಾರ ಸಾಹಿತ್ಯ

೪.೨ ಸಾಹಿತ್ಯ ವಿಮರ್ಶೆ

೪.೩.೧ ಜಾನಪದ ವಿಜ್ಞಾನ : ಕನ್ನಡ ಸಾಹಿತ್ಯೇತರ ಜಾನಪದ ಭಾಗ-೨

೪.೩.೨ ಆಧುನಿಕ ಕನ್ನಡ ಸಾಹಿತ್ಯ : ಕಾದಂಬರಿ ಭಾಗ-೨

೪.೩.೩ ತೌಲನಿಕ ಸಾಹಿತ್ಯ : ರಷ್ಯನ್ ಮತ್ತು ಫ್ರೆಂಚ್ ಕಾದಂಬರಿ

೪.೪.೧ ಜಾನಪದ ವಿಜ್ಞಾನ : ಈಚಿನ ಪ್ರವೃತ್ತಿಗಳು

೪.೪.೨ ಆಧುನಿಕ ಕನ್ನಡ ಸಾಹಿತ್ಯ: ಪ್ರಬಂಧ, ಆತ್ಮಚರಿತ್ರೆ, ಪ್ರವಾಸ ಕಥನ, ಅಂಕಣ ಬರಹ

೪.೪.೩ ತೌಲನಿಕ ಸಾಹಿತ್ಯ : ಭಾರತೀಯ ಕಾದಂಬರಿ ಮತ್ತು ನಾಟಕ

೪.೫ ಪ್ರೌಢ ಪ್ರಬಂಧ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ

I. ಪ್ರಥಮ ವರ್ಷ

೧. ಆಧುನಿಕ ಕನ್ನಡ ಸಾಹಿತ್ಯ ಒಂದು ಪ್ರಕಾರ - ಕಾವ್ಯ

೨. ಮಧ್ಯಕಾಲೀನ ಕನ್ನಡ ಸಾಹಿತ್ಯ

೩. ಛಂದಸ್ಸು ಮತ್ತು ದ್ರಾವಿಡ ಭಾಷಾವಿಜ್ಞಾನ ಪರಿಚಯ

೪. ಕನ್ನಡ ಸಾಹಿತ್ಯ ಹಿನ್ನಲೆ, ಪ್ರೇರಣೆ, ಪ್ರಭಾವ

೫. ಜಾನಪದ ತತ್ತ್ವಗಳು ಮತ್ತು ಸಾಹಿತ್ಯ

II. ದ್ವಿತೀಯ ವರ್ಷ

೬. ಪ್ರಾಚೀನ ಕನ್ನಡ ಸಾಹಿತ್ಯ ವಿಶೇಷ ಕವಿ : ಪಂಪ

೭. ತೌಲನಿಕ ಸಾಹಿತ್ಯ : ತತ್ತ್ವಗಳು ಮತ್ತು ಪಠ್ಯಗಳು - ನಾಟಕ ಪ್ರಕಾರಗಳು

೮. ಕಾವ್ಯಮೀಮಾಂಸೆ - ಭಾರತೀಯ ಪಾಶ್ಚಾತ್ಯ

೯. ಸಾಹಿತ್ಯ ವಿಮರ್ಶೆ

೧೦. ಕನ್ನಡ ಶಾಸನ ಅಧ್ಯಯನ ಸಾಹಿತ್ಯ

ಗುಲಬರ್ಗಾ ವಿಶ್ವವಿದ್ಯಾಲಯ

ಪಠ್ಯಕ್ರಮ

I. ೧. ವಚನ ಸಾಹಿತ್ಯ

೨. ಭಾರತೀಯ ಕಾವ್ಯಮೀಮಾಂಸೆ

೩. ಛಂದಸ್ಸು ಮತ್ತು ಗ್ರಂಥಸಂಪಾದನೆ

೪. ಕರ್ನಾಟಕ ಸಂಸ್ಕೃತಿ ಹಾಗೂ ಶಾಸನಶಾಸ್ತ್ರ

೫. ಪ್ರಾಚೀನ ಕನ್ನಡ ಸಾಹಿತ್ಯ

II. ೬. ಮಧ್ಯಕಾಲೀನ ಕನ್ನಡ ಸಾಹಿತ್ಯ

೭. ಪಾಶ್ಚಾತ್ಯ ಕಾವ್ಯ ಮೀಮಾಂಸೆ

೮. ಕನ್ನಡ ಮಹಾಕಾವ್ಯಗಳ ಅಧ್ಯಯನ

೯. ಸಾಹಿತ್ಯ ವಿಮರ್ಶೆ ಮತ್ತು ಸಂಶೋಧನೆ

೧೦. ಕನ್ನಡ ವ್ಯಾಕರಣ ಮತ್ತು ಆಧುನಿಕ ಭಾಷಾ ವಿಜ್ಞಾನ

III. ೧೧. ಹೊಸಗನ್ನಡ ಸಾಹಿತ್ಯ

೧೨. ತೌಲನಿಕ ಭಾಷಾವಿಜ್ಞಾನ ಮತ್ತು ನಿಘಂಟು ಶಾಸ್ತ್ರ

೧೩. ನಿಘಂಟುಶಾಸ್ತ್ರ

೧೪. ಕನ್ನಡ ಸಾಹಿತ್ಯ ಅಂತರ್‌ಶಿಸ್ತಿಯ ಅಧ್ಯಯನ

೧೫. ಆಧುನಿಕ ಸಾಹಿತ್ಯ ಪ್ರಕಾರವೊಂದರ ವಿಶೇಷ ಅಧ್ಯಯನ

೧. ಕಾವ್ಯ

೨. ಕಾದಂಬರಿ

೩. ನಾಟಕ

೪. ಕತೆ

III ೧೬. ಕನ್ನಡ ಜನಪದ ಸಾಹಿತ್ಯ

ಅ. ಸಾಹಿತ್ಯ ಹಾಗೂ ಭಾಷಿಕ ಪ್ರಕಾರಗಳ ಅಧ್ಯಯನ

ಆ. ಪಠ್ಯಗಳ ಅಧ್ಯಯನ

೧೭. ಕನ್ನಡ ರಂಗಭೂಮಿ

ಅ. ರಂಗಭೂಮಿ ತಾತ್ವಿಕ

ಬ. ವೃತ್ತಿರಂಗಭೂಮಿ

೧೮. ಸ್ವರವಚನ - ತತ್ವಪದ ಸಾಹಿತ್ಯ

ಅ. ತಾತ್ವಿಕ ಅಧ್ಯಯನ

ಬ. ಪತ್ರಿಕೆಗಳ ಅಧ್ಯಯನ

೧೯. ಭಾಷಾಂತರ ಅಧ್ಯಯನ

ಅ. ತಾತ್ವಿಕ ಅಧ್ಯಯನ

ಬ. ಆಂತರಿಕ ಮೌಲ್ಯಮಾಪನ

೨೦. ಗಣಕಯಂತ್ರ (ಕಂಪ್ಯೂಟರ್) ಅಧ್ಯಯನ

ಬೆಂಗಳೂರು ವಿಶ್ವವಿದ್ಯಾಲಯ

ಕನ್ನಡ ಸಾಹಿತ್ಯ ಎಂ.ಎ. ಚತುರ್ಮಾಸ ಪದ್ಧತಿ ಪಠ್ಯಕ್ರಮ

ಪ್ರಥಮ ಎಂ.ಎ. ಸಾಹಿತ್ಯಕ ಅಧ್ಯಯನ

ಪತ್ರಿಕೆ ೧ ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯ

ಪತ್ರಿಕೆ ೨ ಮಧ್ಯಕಾಲೀನ ಸಾಹಿತ್ಯ ಸಾಂಸ್ಕೃತಿಕ ನೆಲೆಗಳು

ಪತ್ರಿಕೆ ೩ ಭಾಗ ಅ. ಛಂದಸ್ಸು

ಭಾಗ ಆ. ಗ್ರಂಥ ಸಂಪಾದನಾ ಶಾಸ್ತ್ರ

ಪತ್ರಿಕೆ ೪ ಆಧುನಿಕ ಸಾಹಿತ್ಯ ಭಾಗ-೧

ಪತ್ರಿಕೆ ೫ ಕನ್ನಡ ಸಾಹಿತ್ಯ ವಿಮರ್ಶೆ ಮತ್ತು ಕನ್ನಡ ಸಾಂಸ್ಕೃತಿಕ ಪಠ್ಯಗಳು

ಭಾಗ-೧ ಕನ್ನಡ ವಿಮರ್ಶೆಯ ಮುಖ್ಯ ಪ್ರಸ್ಥಾನಗಳ ಅಧ್ಯಯನ

ಭಾಗ-೨ ಸಾಂಸ್ಕೃತಿಕ ಪಠ್ಯಗಳು

ದ್ವಿತೀಯ ಎಂ.ಎ. ಸಾಹಿತ್ಯಕ ಅಧ್ಯಯನ

ಪತ್ರಿಕೆ ೬ ಆಧುನಿಕ ಕನ್ನಡ ಸಾಹಿತ್ಯ ಭಾಗ-೨ ಕಾವ್ಯ ನಾಟಕ

ಪತ್ರಿಕೆ ೭ ತೌಲನಿಕ ಕಾವ್ಯ ಮೀಮಾಂಸೆ ಮತ್ತು ಅಧುನಿಕ ಸಾಹಿತ್ಯ ವಿಮರ್ಶೆಯ ಮೂಲ ತತ್ವಗಳು

ಭಾಗ-೧ ಭಾರತೀಯ ಕಾವ್ಯಮೀಮಾಂಸೆ

ಭಾಗ-೨ ಪಾಶ್ಚಾಂತ್ಯ ಕಾವ್ಯ ಮೀಮಾಂಸೆ ಮತ್ತು ಪಾಶ್ಚಾತ್ಯ ವಿಮರ್ಶಾ ಮಾರ್ಗಗಳ ಅಧ್ಯಯನ

ಪತ್ರಿಕೆ ೮ ೧. ಶಾಸನ ಶಾಸ್ತ್ರ ಲಿಪಿ ಮತ್ತು ಸಂಸ್ಕೃತಿ ಅಧ್ಯಯನದ ಹಿನ್ನಲೆ

ಅ. ತತ್ವ

ಆ. ಪಠ್ಯಗಳು

ಪತ್ರಿಕೆ ೮ ೨ಎ. ಕರ್ನಾಟಕ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸ

೧. ರಾಜಕೀಯ ಚರಿತ್ರೆ

೨. ಸಾಂಸ್ಕೃತಿಕ ಚರಿತ್ರೆ

ಅ. ಧರ್ಮಗಳು

ಆ. ಕಲೆ

ಇ. ಕನ್ನಡ ಭಾಷೆ ಮತ್ತು ಜನಾಂಗೀಯ ಚರಿತ್ರೆ

ಪತ್ರಿಕೆ ೮ ಬಿ೧. ಐತಿಹಾಸಿಕ ಮತ್ತು ತೌಲನಿಕ ಭಾಷಾ ವಿಜ್ಞಾನ

ಎ. ಐತಿಹಾಸಿಕ ಭಾಷಾ ವಿಜ್ಞಾನ

ಬಿ. ತೌಲನಿಕ ದ್ರಾವಿಡ ಭಾಷಾ ವಿಜ್ಞಾನ

ಪತ್ರಿಕೆ ೯ ಬಿ. ಸಾಮಾನ್ಯ ಹಾಗೂ ಸಾಮಾಜಿಕ ಭಾಷಾ ವಿಜ್ಞಾನ

ಸಿ. ಜಾನಪದ ಮತ್ತು ಸಾಹಿತ್ಯ ಅಧ್ಯಯನ ಕನ್ನಡಕ್ಕೆ ಸಂಬಂಧಿಸಿದಂತೆ

ಪತ್ರಿಕೆ ೯ಸಿ ೨. ಸಂಸ್ಕೃತಿಯ ಅಧ್ಯಯನ

ಪತ್ರಿಕೆ ೧೦ ಕಂಪ್ಯೂಟರ್ ವಿಜ್ಞಾನ

೧. ಕಂಪ್ಯೂಟರ್ ಮೂಲನೋಟ

೨. ಯಂತ್ರಾಂಶ ಪರಿಚಯ

೩. ತಂತ್ರಾಂಶ ಪರಿಚಯ

೪. ಮಾಹಿತಿ ತಂತ್ರಜ್ಞಾನ

೫. ಕಂಪ್ಯೂಟರ್ ಜಾಲವ್ಯೂಹ ಮತ್ತು ಅಂತರ್ ಜಾಲ

ಮಂಗಳೂರು ವಿಶ್ವವಿದ್ಯಾಲಯ

ಕನ್ನಡ ಎಂ.ಎ. ಚತುರ್ಮಾಸ ಪದ್ಧತಿ

ಮೊದಲನೆಯ ಚತುರ್ಮಾಸ

ಪತ್ರಿಕೆ ೧ ಪ್ರಾಚೀನ ಕನ್ನಡ ಸಾಹಿತ್ಯ : ಚಂಪೂ

ಪತ್ರಿಕೆ ೨ ಮಧ್ಯಕಾಲೀನ ಸಾಹಿತ್ಯ : ವಚನ, ರಗಳೆ

ಪತ್ರಿಕೆ ೩ ಆಧುನಿಕ ಕನ್ನಡ ಸಾಹಿತ್ಯ ಪ್ರಕಾರ : ಕಥನ ಕವನ

ಪತ್ರಿಕೆ ೪ ಸಾಮಾನ್ಯ ಭಾಷಾವಿಜ್ಞಾನ

ಪತ್ರಿಕೆ ೫ ಐಚ್ಛಿಕ

೫.೧ ತುಳುವ ಅಧ್ಯಯನ : ತುಳು ಭಾಷೆ

೫.೨ ಪ್ರಾದೇಶಿಕ ಅಧ್ಯಯನ : ಪ್ರಾದೇಶಿಕ ಇತಿಹಾಸ

೫.೩ ಕರ್ನಾಟಕ ಸಂಸ್ಕೃತಿಯ ಅಧ್ಯಯನ : ಕರ್ನಾಟಕ ಸಂಸ್ಕೃತಿಯ ಸ್ವರೂಪ ಮತ್ತು ಭಿನ್ನ ನೆಲೆಗಳು

೫.೪ ತೌಲನಿಕ ಸಾಹಿತ್ಯ

ಎರಡನೆಯ ಚತುರ್ಮಾಸ

ಪತ್ರಿಕೆ ೧ ಮಧ್ಯಕಾಲೀನ ಕನ್ನಡ ಸಾಹಿತ್ಯ : ಷಟ್ಪದಿ, ಕೀರ್ತನೆ, ಸಾಂಗತ್ಯ

ಪತ್ರಿಕೆ ೨ ಆಧುನಿಕ ಕನ್ನಡ ಕಾವ್ಯ

ಪತ್ರಿಕೆ ೩ ಆಧುನಿಕ ಕನ್ನಡ ಸಾಹಿತ್ಯ ಪ್ರಕಾರ : ಪ್ರವಾಸ ಸಾಹಿತ್ಯ

ಪತ್ರಿಕೆ ೪ ಕನ್ನಡ ಛಂದಸ್ಸು

ಪತ್ರಿಕೆ ೫ ಐಚ್ಛಿಕ

೫.೧ ತುಳುವ ಅಧ್ಯಯನ : ತುಳು ಸಾಹಿತ್ಯ

೫.೨ ಪ್ರಾದೇಶಿಕ ಅಧ್ಯಯನ : ಪ್ರಾದೇಶಿಕ ಸಂಸ್ಕೃತಿ

೫.೩ ಕರ್ನಾಟಕ ಸಂಸ್ಕೃತಿಯ ಅಧ್ಯಯನ : ಕರ್ನಾಟಕ ಸಂಸ್ಕೃತಿಯ ಚರಿತ್ರೆಯ ಆಕರಗಳ ಸ್ವರೂಪ ಮತ್ತು ಅನ್ವಯ

೫.೪ ಅನುವಾದ ಸಾಹಿತ್ಯ

ಮೂರನೆಯ ಚತುರ್ಮಾಸ

ಪತ್ರಿಕೆ ೧ ಆಧುನಿಕ ಕನ್ನಡ ಕಾದಂಬರಿ

ಪತ್ರಿಕೆ ೨ ಆಧುನಿಕ ಕನ್ನಡ ಸಣ್ಣಕತೆ

ಪತ್ರಿಕೆ ೩ ಆಧುನಿಕ ಕನ್ನಡ ಸಾಹಿತ್ಯ ಪ್ರಕಾರ : ಲಲಿತ ಪ್ರಬಂಧ

ಪತ್ರಿಕೆ ೪ ಪಾಶ್ಚಾತ್ಯ ಸಾಹಿತ್ಯ ತತ್ತ್ವಗಳು

ಪತ್ರಿಕೆ ೫ ಐಚ್ಛಿಕ

೫.೧ ತುಳುವ ಅಧ್ಯಯನ : ಶಾಬ್ದಿಕ ಜಾನಪದ

೫.೨ ಪ್ರಾದೇಶಿಕ ಅಧ್ಯಯನ : ಪ್ರಾದೇಶಿಕ ಸಾಹಿತ್ಯ

೫.೩ ಕರ್ನಾಟಕ ಸಂಸ್ಕೃತಿಯ ಅಧ್ಯಯನ : ಶಾಸನ ಅಧ್ಯಯನ : ಕರ್ನಾಟಕದ ಹಿನ್ನಲೆಯಲ್ಲಿ

೫.೪ ಅನುವಾದ ಕೃತಿಗಳು ಪಾಶ್ಚಾತ್ಯ

ನಾಲ್ಕನೆಯ ಚತುರ್ಮಾಸ

ಪತ್ರಿಕೆ ೧ ಆಧುನಿಕ ಕನ್ನಡ ನಾಟಕ

ಪತ್ರಿಕೆ ೨ ಆಧುನಿಕ ಕನ್ನಡ ಸಾಹಿತ್ಯ - ವಿಶೇಷ ಸಾಹಿತಿ : ಲಂಕೇಶ

ಪತ್ರಿಕೆ ೩ ಆಧುನಿಕ ಕನ್ನಡ ಸಾಹಿತ್ಯ ಪ್ರಕಾರ : ಆತ್ಮಕತೆ

ಪತ್ರಿಕೆ ೪ ಕನ್ನಡ ಸಾಹಿತ್ಯ ಮೀಮಾಂಸೆ

ಪತ್ರಿಕೆ ೫ ಐಚ್ಛಿಕ

೫.೧ ತುಳುವ ಅಧ್ಯಯನ : ಜನಪದ ರಂಗಭೂಮಿ

೫.೨ ಪ್ರಾದೇಶಿಕ ಅಧ್ಯಯನ : ಪ್ರಾದೇಶಿಕ ರಂಗಭೂಮಿ

೫.೩ ಕರ್ನಾಟಕ ಸಂಸ್ಕೃತಿಯ ಅಧ್ಯಯನ : ಕನ್ನಡ ಶಾಸನ ಪಠ್ಯಗಳು

೫.೪ ಅನುವಾದ ಕೃತಿಗಳು - ಭಾರತೀಯ

ಮೈಸೂರು ವಿಶ್ವವಿದ್ಯಾನಿಲಯ

ಕನ್ನಡ ಎಂ.ಎ. ಚತುರ್ಮಾಸ ಪದ್ಧತಿ

೧.೧ ಪ್ರಾಚೀನ ಕನ್ನಡ ಸಾಹಿತ್ಯ-೧

(ಆಯ್ದ ಪಠ್ಯಗಳು)

೧.೨ ಮಧ್ಯಕಾಲೀನ ಕನ್ನಡ ಸಾಹಿತ್ಯ-೧

(ಆಯ್ದ ಪಠ್ಯಗಳು)

೧.೩ ಕನ್ನಡ ಛಂದಸ್ಸಿನ ಪರಿಚಯ

೧.೪ ಕನ್ನಡ ಸಾಹಿತ್ಯದ ಹಿನ್ನಲೆ-೧

(ಪ್ರಾಚೀನ ಮತ್ತು ಮಧ್ಯಕಾಲೀನ)

೧.೫ ಕನ್ನಡ ವಿಮರ್ಶೆ

(ಆಯ್ದ ಪಠ್ಯಗಳು)

೨.೧ ಪ್ರಾಚೀನ ಕನ್ನಡ ಸಾಹಿತ್ಯ-೨

(ಆಯ್ದ ಪಠ್ಯಗಳು)

೨.೨ ಮಧ್ಯಕಾಲೀನ ಕನ್ನಡ ಸಾಹಿತ್ಯ-೨

(ಆಯ್ದ ಪಠ್ಯಗಳು)

೨.೩ ದ್ರಾವಿಡ ಭಾಷಾ ವಿಜ್ಞಾನ ಪರಿಚಯ

೨.೪ ಕನ್ನಡ ಸಾಹಿತ್ಯದ ಹಿನ್ನಲೆ-೨

(ಆಧುನಿಕ

೨.೫ ಐಚ್ಛಿಕ-I (ಯಾವುದಾದರೂ ಒಂದು)

೨.೫.೧ ಭಾಷಾ ವಿಜ್ಞಾನದ ಅಧ್ಯಯನ

ಭಾಷಾ ವಿಜ್ಞಾನದ ಮೂಲತತ್ವಗಳು

೨.೫.೨ ಜಾನಪದ ಅಧ್ಯಯನ : ಜನಪದ ಸಂಸ್ಕೃತಿಯ ಅಧ್ಯಯನ

೨.೫.೩ ವಿಮರ್ಶೆಯ ಅಧ್ಯಯನ : ಪಾಶ್ಚಾತ್ಯ ವಿಮರ್ಶೆಯ ಮೂಲತತ್ವಗಳು

೨.೫.೪ ದ್ರಾವಿಡ ಸಾಹಿತ್ಯ ಅಧ್ಯಯನ : ತುಳು ಸಾಹಿತ್ಯ

೨.೫.೫ ಭಾಷಾಂತರ ಅಧ್ಯಯನ : ಭಾಷಾಂತರ ತತ್ತ್ವಗಳು ಮತ್ತು ವಿಧಾನಗಳು

೨.೫.೬ ಚಾರಿತ್ರಿಕ ಅಧ್ಯಯನ : ಕನಾಟಕದ ಸಾಂಸ್ಕೃತಿಕ ಚರಿತ್ರೆ

೨.೫.೭ ಪಾಶ್ಚಾತ್ಯ ಸಾಹಿತ್ಯ ಅಧ್ಯಯನ : ಇಂಗ್ಲೀಷ್ ಸಾಹಿತ್ಯ ಒಂದು ಪ್ರಕಾರ ಕಾವ್ಯ

೨.೫.೮ ಗ್ರಂಥ ಸಂಪಾದನ ಅಧ್ಯಯನ : ಹಸ್ತಪ್ರತಿ ಶಾಸ್ತ್ರ

೨.೫.೯ ತೌಲನಿಕ ಸಾಹಿತ್ಯ ಅಧ್ಯಯನ : ತೌಲನಿಕ ಸಾಹಿತ್ಯ ತತ್ತ್ವಗಳು ಮತ್ತು ವಿಧಾನಗಳು

೩.೧ ಆಧುನಿಕ ಕನ್ನಡ ಸಾಹಿತ್ಯ-೧

(ಆಯ್ದ ಪಠ್ಯಗಳು)

೩.೨ ಭಾರತೀಯ ಕಾವ್ಯ ಮೀಮಾಂಸೆ

೩.೩ ತೌಲನಿಕ ಸಾಹಿತ್ಯ : ತತ್ವಗಳು ಮತ್ತು ಆಯ್ದ ಪಠ್ಯಗಳು

೩.೪ ಸಂಶೋಧನ ವಿಧಾನ ಮತ್ತು ಗಣಕ ಜ್ಞಾನ

೩.೫ ಐಚ್ಛಿಕ - ೨ (ಯಾವುದಾದರೂ ಒಂದು)

೩.೫.೧ ಭಾಷಾವಿಜ್ಞಾನ ಅಧ್ಯಯನ : ಕನ್ನಡ ವ್ಯಾಕರಣಗಳ ತೌಲನಿಕ ಸಮೀಕ್ಷೆ

೩.೫.೨ ಜಾನಪದ ಅದ್ಯಯನ : ಜಾನಪದ ತತ್ತ್ವಗಳು ಮತ್ತು ವಿಧಾನಗಳು

೩.೫.೩ ವಿಮರ್ಶೆ ಅಧ್ಯಯನ : ಪ್ರಾಯೋಗಿಕ ವಿಮರ್ಶೆ

೩.೫.೪ ದ್ರಾವಿಡ ಸಾಹಿತ್ಯ ಅದ್ಯಯನ : ತೆಲುಗು ಸಾಹಿತ್ಯ

೩.೫.೫ ಭಾಷಾಂತರ ಅಧ್ಯಯನ : ಪ್ರಾಯೋಗಿಕ ಭಾಷಾಂತರ

೩.೫.೬ ಚಾರಿತ್ರಿಕ ಅಧ್ಯಯನ : ಕನ್ನಡ ಸಾಹಿತ್ಯ ಚರಿತ್ರೆ ೧೩ನೇ ಶತಮಾನ

೩.೫.೭ ಪಾಶ್ಚಾತ್ಯ ಸಾಹಿತ್ಯ ಅಧ್ಯಯನ : ಐರೋಪ್ಯ ಸಾಹಿತ್ಯ ಒಂದು ಪ್ರಕಾರ ಕಾದಂಬರಿ

೩.೫.೮ ಗ್ರಂಥ ಸಂಪಾದನ ಅಧ್ಯಯನ : ಗ್ರಂಥ ಸಂಪಾದನೆಯ ಮೂಲತತ್ವಗಳು

೩.೫.೯ ತೌಲನಿಕ ಸಾಹಿತ್ಯ ಅಧ್ಯಯನ : ತೌಲನಿಕ ಭಾರತೀಯ ಸಾಹಿತ್ಯ

೪.೧ ಆಧುನಿಕ ಕನ್ನಡ ಸಾಹಿತ್ಯ - ೨

(ಆಯ್ದ ಪಠ್ಯಗಳು)

೪.೨ ಪಾಶ್ಚಾತ್ಯ ಕಾವ್ಯ ಮೀಮಾಂಸೆ

೪.೩ ಭಾರತೀಯ ಭಾಷೆಗಳು ಮತ್ತು ಸಾಹಿತ್ಯ

೪.೪ ಕನ್ನಡ ಸಂಶೋಧನ ಮತ್ತು ಸಂಶೋಧನೆ ನಿಬಂಧ ರಚನೆ

(ಮೌಖಿಕ ಪರೀಕ್ಷೆಯೊಂದಿಗೆ)

೪.೫ ಐಚ್ಛಿಕ - ೩ (ಯಾವುದಾದರೂ ಒಂದು)

೪.೫.೧ ಭಾಷಾವಿಜ್ಞಾನ ಅಧ್ಯಯನ : ಉಪಭಾಷಾ ವಿಜ್ಞಾನ

೪.೫.೨ ಜಾನಪದ ಅಧ್ಯಯನ : ಕನ್ನಡ ಜನಪದ ಸಾಹಿತ್ಯ

೪.೫.೩ ವಿಮರ್ಶೆಯ ಅಧ್ಯಯನ : ವಿಮರ್ಶೆಯ ವಾದಗಳು ಮತ್ತು ಪ್ರಕಾರಗಳು

೪.೫.೪ ದ್ರಾವಿಡ ಸಾಹಿತ್ಯ ಅಧ್ಯಯನ : ಮಲಯಾಳಂ ಸಾಹಿತ್ಯ

೪.೫.೫ ಭಾಷಾಂತರ ಅಧ್ಯಯನ : ಕನ್ನಡದಲ್ಲಿ ಭಾಷಾಂತರ

೪.೫.೬ ಚಾರಿತ್ರಿಕ ಅಧ್ಯಯನ : ಶಾಸನಶಾಸ್ತ್ರ (ಆಯ್ದ ಪಠ್ಯಗಳೊಂದಿಗೆ)

೪.೫.೭ ಗ್ರಂಥ ಸಂಪಾದನ ಅಧ್ಯಯನ : ಲಿಪಿಶಾಸ್ತ್ರ ಮತ್ತು ಪ್ರಾಯೋಗಿಕ ಗ್ರಂಥ ಸಂಪಾದನೆ

೪.೫.೮ ತೌಲನಿಕ ಸಾಹಿತ್ಯ ಅಧ್ಯಯನ : ಆಯ್ದ ಪಠ್ಯಗಳು ಒಂದು ಪ್ರಕಾರ ಗದ್ಯ ಗೀತೆ

ಪರಾಮರ್ಶನ ಗ್ರಂಥಗಳು

ಅರವಿಂದ ಮಾಲಗಿತ್ತಿ (ಪ್ರ.ಸಂ.), ಕನ್ನಡ ವಿಷಯ ವಿಶ್ವಕೋಶ ಸಂಪುಟ-೧, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೨೦೦೫.

ಅರವಿಂದ ಚೊಕ್ಕಾಡಿ., ಶಿಕ್ಷಣದಲ್ಲಿ ವ್ಯಕ್ತಿತ್ವ ವಿಕಾಸ, ಸುಮುಖ ಪ್ರಕಾಶನ, ಬೆಂಗಳೂರು, ೨೦೦೭

ಅರವಿಂದ ಚೊಕ್ಕಾಡಿ., ಶಿಕ್ಷಣ ದೃಷ್ಟಿ, ಸುಮುಖ ಪ್ರಕಾಶನ, ಬೆಂಗಳೂರು, ೨೦೦೭

ಅನ್ನಪೂರ್ಣೇಶ್ವರಿ ಎನ್., ಮಹಿಳಾ ಶಿಕ್ಷಣ ಮತ್ತು ಅಭಿವೃದ್ಧಿ, ಮಾನವಾಭಿವೃದ್ಧಿ ಅಧ್ಯಯನಗಳ ಕೇಂದ್ರ ಮೈಸೂರು, ೨೦೦೨

ಕಾಶಿನಾಥ ಎಚ್.ಎಂ., ಪಿ. ನಾಗರಾಜು, ರಾಷ್ಟ್ರೀಯ ಶಿಕ್ಷಣ ನೀತಿ ೧೯೮೬, ಪ್ರಗತಿ ಪರಿಶೀಲನೆ, ವಿಧ್ಯಾನಿಧಿ ಪ್ರಕಾಶನ, ಗದಗ, ೧೯೮೮

ಕುಲಕರ್ಣಿ ಎನ್.ಕೆ., ಸಮಗ್ರ ಶಿಕ್ಷಣ, ಮೀರಾಂಬಿಕಾ ಮುದ್ರಣಾಲಯ, ಬೆಂಗಳೂರು, ೧೯೯೭

ಚಂದ್ರಶೇಖರ್ ಬಿ.ಎಸ್., ಸಮಾಜ ವಿಜ್ಞಾನಗಳಲ್ಲಿ ಸಂಶೋಧನ ವಿಧಾನಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

ಚಂದುಶೇಖರಯ್ಯ ಪಿ., ಶಿಕ್ಷಣದ ದರ್ಶನ, ಸುಮುಖ ಪ್ರಕಾಶನ, ಬೆಂಗಳೂರು, ೨೦೦೭

ಚಂದ್ರ ಪ್ರಕಾರ್ (ಸಂ), ಉನ್ನತ ಶಿಕ್ಷಣ ಕೆಲವು ಚಿಂತನೆಗಳು, ಪ್ರಸಾರಾಂಗ ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, ೧೯೯೮

ಜಯಕುಮಾರ ಅನಗೋಳ (ಕನ್ನಡಕ್ಕೆ), ಭಾರತೀಯ ಶಿಕ್ಷಣದಲ್ಲಿ ಸಮತೆ, ಗುಣ ಮತ್ತು ಪರಿಮಾಣ ಎಚ್.ಬಿ.ಎಚ್. ಪ್ರಕಾಶನ, ೧೯೮೬

ಬೌಕಬ್ ಸ್ಟ್ರಾಂಪಿಕೆಲ್ ಲಿಲಾ ಜೋಸೆಫ್ (ಅನು) ಮಧ್ಯಮ ಶಿಕ್ಷಣ ಬೋಧನೆ ಕನ್ನಡಕ್ಕೆ, ಕಾರ್ಕಳ

ಡೇಲ್ ಎಂ. ಬೇಥೇಲ್ (ಸಂ), ಸುಮತೀಂದ್ರನಾಡಿಗ ಅನು, ಸೃಷ್ಟಿಶೀಲ ಬದುಕಿಗಾಗಿ ಶಿಕ್ಷಣ, ನ್ಯಾಷನಲ್ ಬುಕ್‌ಟ್ರಸ್ಟ್, ಬೆಂಗಳೂರು, ೨೦೦೨

ನಾಗಭೂಷಣ ಸಿ., ಕನ್ನಡ ಸಂಶೋಧನೆ ಸಮೀಕ್ಷೆ, ಸಿದ್ಧಲಿಂಗೇಶ್ವರ ಪ್ರಕಾಶನ, ೨೦೦೬

ನಾಗೇಶ್ ಎಚ್.ವಿ. (ಸಂ) ಗ್ರಾಮವ್ಯಾಸಾಂಗ, ಚಂದ್ರನಾಥ ಪ್ರಕಾಶನ, ಧಾರವಾಡ, ೧೯೮೧

ನಾಗಪ್ಪ ಟಿ.ಆರ್., ವಯಸ್ಕರ ಶಿಕ್ಷಣ ಹಾಗೂ ಸಾಹಿತ್ಯ ರಚನೆ, ಐ.ಬಿ.ಎಚ್., ಪ್ರಕಾಶನ, ಬೆಂಗಳೂರು, ೧೯೭೯

ನಾಗಪ್ಪ ಟಿ.ಆರ್., ವಯಸ್ಕರ ಶಿಕ್ಷಣ ಕೈಪಿಡಿ, ಐ.ಬಿ.ಎಚ್., ಪ್ರಕಾಶನ, ಬೆಂಗಳೂರು, ೧೯೭೯

ನರಸಿಂಹಾಚಾರ್ ಎಲ್., ಉದಯೋನ್ಮುಖ ಭಾರತದಲ್ಲಿ ಶಿಕ್ಷಣ, ಭಾರತೀ ಪ್ರಕಾಶನ, ೨೦೦೬

ಪದ್ಮಪ್ರಸಾದ ಎಸ್.ಪಿ., ಶಿಕ್ಷಣ ಮತ್ತು ರಾಷ್ಟ್ರೀಯ ಕಾಳಜಿಗಳು, ಸುಮುಖ ಪ್ರಕಾಶನ, ಬೆಂಗಳೂರು, ೨೦೦೭

ಪದ್ಮಪ್ರಸಾದ ಎಸ್.ಪಿ., ಭಾರತದಲ್ಲಿ ಪ್ರೌಢ ಶಿಕ್ಷಣ, ಸುಮುಖ ಪ್ರಕಾಶನ, ಬೆಂಗಳೂರು, ೨೦೦೭

ಪುಟ್ಟಪ್ಪ ಕೆ.ವಿ., (ಪ್ರ.ಸಂ.) ಯುಗಯಾತ್ರೀ ಭಾರತೀಯ ಸಂಸ್ಕೃತಿ ಸಂಪುಟ ೨, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೧

ಪ್ರಶಾಂತ ಎಚ್.ಡಿ., ಶಾಲಾ ಶಿಕ್ಷಣದ ವಿಕೇಂದ್ರಿಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

ಬಸವಯ್ಯ ಕೆ., ನಾಗಪ್ಪ, (ಬಿ.ಆ.) ಸಾಕ್ಷರತೆ ಮತ್ತು ವಯಸ್ಕರ ಶಿಕ್ಷಣ, ನಿರ್ದೇಶಕರು ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೨

ಬೋರಲಿಂಗಯ್ಯ ಹಿ.ಚಿ., ಅಭಿವೃದ್ಧಿ ಪಥ, ಸುವರ್ಣ ಕರ್ನಾಟಕ, ಸಂಪುಟ೧, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೬

ಬೆತ್ತಗೇರಿ ಜಿ.ಐ. ಭಟ್, ಪಠ್ಯಕ್ರಮ ತತ್ವಗಳು ಮತ್ತು ಯೋಜನೆ, ಪದ್ಮಪ್ರಕಾಶನ, ಹೊನ್ನಾವರ, ಉ.ಕ. ೨೦೦೦

ಮಹಾಬಲೇಶ್ವರರಾವ್., ಪ್ರಾಥಮಿಕ ಶಿಕ್ಷಣ ಸಮಸ್ಯೆಗಳು ಸವಾಲುಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೯

ಮಹಾಬಲೇಶ್ವರರಾವ್., ಪ್ರೌಢ ಶಾಲೆಗಳಲ್ಲಿ ಕನ್ನಡ ಬೋಧನೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೬

ಮಹಾಬಲೇಶ್ವರರಾವ್., ಬಹುಮುಖ ಶಿಕ್ಷಣ, ಎಸ್.ಬಿ.ಎಸ್. ಪ್ರಕಾಶನ, ಬೆಂಗಳೂರು, ೧೯೯೨

ಮಹಾಬಲೇಶ್ವರರಾವ್., ರಾಷ್ಟ್ರೀಯ ಶಿಕ್ಷಣ ನೀತಿ, ಪ್ರಸಾರಾಂಗ ಮಂಗಳೂರು ವಿಶ್ವವಿದ್ಯಾಲಯ, ೧೯೯೮

ಮಹಾಬಲೇಶ್ವರರಾವ್., ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಬೋಧನೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೩

ಮಾಸ್ತಿ ವೆಂಕಟೇಶ ಅಯ್ಯಂಗಾರ., ಭಾರತೀಯನ ವಿದ್ಯಾಭ್ಯಾಸ, ಮಾಸ್ತಿ ಪ್ರಕಾಶನ, ಬೆಂಗಳೂರು, ೨೦೦೩

ರಾವ್ ಎಚ್.ಬಿ.ಎಲ್. (ಪ್ರ.ಸಂ.) ಅವಲೋಕನ, ಸಾಹಿತ್ಯ ಬಳಗ ಮುಂಬಯಿ ಪ್ರಕಾಶಕರು ಮುಂಬಯಿ, ೨೦೦೪

ರಾಜೇಶ್ವರಯ್ಯ (ಮೂಲ) ಪ್ರಧಾನ ಗುರುದತ್ತ ಅನು ವರ್ದಾ ಯೋಜನೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ರಾಜಶೇಖರಯ್ಯ ಕೆ.ಎಸ್., ಶಿಕ್ಷಣ ಮತ್ತು ಮನೋವಿಕಾಸ, ಸುಮುಖ ಪ್ರಕಾಶನ, ಬೆಂಗಳೂರು, ೨೦೦೬

ರಾಜೇಶ ಇ. ಬೆಳ್ಳೇರ್., ಪಠ್ಯಕ್ರಮ ಸಂವಹನಾ ತತ್ವಗಳು, ಕಾವೇರಿ ಪ್ರಕಾಶನ, ಬೆಂಗಳೂರು, ೨೦೦೪

ರಾಮಚಂದ್ರೇಗೌಡ ಹಿ.ಶಿ. (ಪ್ರ.ಸಂ) ಕನ್ನಡ ವಿಷಯ ವಿಶ್ವಕೋಶ, ಸಂಪುಟ ೨, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೨೦೦೫

ರಾಘವಕುಮಾರಿ ಎ.ಎಸ್., ಶೈಕ್ಷಣಿಕ ತಂತ್ರಜ್ಞಾನದ ವಿವರಣಾತ್ಮಕ ನಿಘಂಟು, ಅಭಿಜಿತ ಪ್ರಕಾಶನ, ಮೈಸೂರು, ೧೯೯೬

ರೇಣುಕ ಪ್ರಸನ್ನ ಮ.ಗಂ. ಪ್ರಚಲಿತ ಶಿಕ್ಷಣ ಒಂದು ಚಿಂತನೆ, ರಾಜೇಂದ್ರ ಪ್ರಿಂಟರ್ಸ್, ಬೆಂಗಳೂರು, ೧೯೯೩

ವೀರಭದ್ರಪ್ಪ ಬಿ.ವಿ. (ಸಂ.) ಶಿಕ್ಷಣ ಮತ್ತು ಸಂಸ್ಕೃತಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೫

ವೆಂಕಟಸುಬ್ಬಯ್ಯ ಜಿ., ಸಾಹಿತ್ಯ ಮತ್ತು ಶಿಕ್ಷಣ, ಪ್ರಿಸಮ್ ಬುಕ್ಸ್ ಪ್ರೈ.ಲಿ. ಬೆಂಗಳೂರು, ೨೦೦೦

ಶಾಸ್ತ್ರಿ ಹೋ.ಸು.ಮ., ಶೈಕ್ಷಣಿಕ ಮನೋವಿಜ್ಞಾನ, ಪ್ರತಾಪ ಪ್ರಕಾಶನ, ಮೈಸೂರು, ೧೯೮೭

ಸೂರ್ಯನಾಥ ಕಾಮತ್ (ಸಂ.), ಕರ್ನಾಟಕದ ಗ್ಯಾಸಟೇರ್, ಸಂಪುಟ ೩, ಕರ್ನಾಟಕ ಸರ್ಕಾರ ಇಲಾಖೆ, ಬೆಂಗಳೂರು

ಶ್ರೀಧರ ಎ. (ಸಂ.) ಪ್ರಶಾಂತ ಎಚ್.ಡಿ., ಸಂಪುಟ-೫, ಸಂಚಿಕೆ-೧, ಜನವರಿ, ಜೂನ್, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

ಬ್ರಿಟಾನಿಕ್ ಎನ್‌ಸೈಕ್ಲೋಪಿಡಿಯಾ, Vol. V

<u>ಲೇಖನಗಳು</u>

ಕುಳಂದೈಸ್ವಾಮಿ ವಿ.ಸಿ., ಉನ್ನತ ಶಿಕ್ಷಣ ಉಪನ್ಯಾಸ, ಮೈಸೂರು, ೨೦೦೦

ತಾರಕೇಶ್ವರ ವಿ.ಬಿ., ಬದಲಾಗುತ್ತಿರುವ ಸಂದರ್ಭದಲ್ಲಿ ಉನ್ನತ ಶಿಕ್ಷಣ ವಿಚಾರ ಸಂಕಿರಣದ
ಹಿನ್ನಲೆ ಪತ್ರಿಕೆ, ೨೦೦೩

ಪುಟ್ಟಯ್ಯ ಬಿ.ಎಂ., ಉನ್ನತ ಶಿಕ್ಷಣ ಪಠ್ಯಕ್ರಮದ ಸ್ವರೂಪ, ಸಮಸ್ಯೆಗಳು, ಸಂವಾದ ಪತ್ರಿಕೆ,
ಸೆಪ್ಟೆಂಬರ್, ೨೦೦೮, ಸಂಪಾದಕರು ಇನಾಂದಾರ್ ಹೊನ್ನಾಪುರ